## ಅಧ್ಯಾಯ 11

# ಇಬ್ಬರು ಸಾಕ್ಷಿಗಳು ಮತ್ತು ಏಳನೆಯ ತುತೂರಿ

10ನೇ ಅಧ್ಯಾಯದಲ್ಲಿ ಆರಂಭಗೊಂಡ ಆರನೆಯ ಮತ್ತು ಏಳನೆಯ ತುತೂರಿಗಳ ನಡುವಿನ ಮಧ್ಯಂತರವನ್ನು 11ನೇ ಅಧ್ಯಾಯವು ಮುಕ್ತಾಯಕ್ಕೆ ತರುತ್ತದೆ. ಈ ಮಧ್ಯಂತರದ ಪ್ರಾಥಮಿಕ ಉದ್ದೇಶವು ಮುಂದೆ ಬರಲಿದ್ದ ಕಷ್ಟದ ಸಮಯಗಳಲ್ಲಿ ಸಭೆಯು ಏನು ಮಾಡಬೇಕೆಂಬುದನ್ನು ವಿವರಿಸುವದೇ ಆಗಿತ್ತು. ದೇವರ ಜನರಿಗೆ ಮೂರು ವಿಶೇಷವಾದ ಕರೆಗಳನ್ನು ಕೊಡಲಾಯಿತು: (1) ದೇವರ ವಾಕ್ಯವನ್ನು ಶ್ಲಾಘಿಸುವದು ಮತ್ತು ಸ್ವಂತವಾಗಿಸಿಕೊಳ್ಳುವದು (10:1-11); (2) ಆ ವಾಕ್ಯದ ತಳಹದಿಯ ಮೇಲೆ ಒಂದು ಕೂಲಂಕೂಷವಾದ ಸ್ವ-ಪರೀಕ್ಷೆಯನ್ನು ಮಾಡಿಕೊಳ್ಳುವದು (11:1, 2); ಮತ್ತು (3) ಪರಿಣಾಮಗಳು ಏನೇ ಬಂದಾಗ್ಯೂ ದೇವರ ವಾಕ್ಯವನ್ನು ಸಾರುವದು (11:3-13). ಈ ಅಧ್ಯಾಯವು ಏಳನೆಯ ತುತೂರಿಯು ಊದಲ್ಪಡುವ ಮೂಲಕ ಅಂತ್ಯಗೊಳ್ಳುತ್ತದೆ (11:14-18).

ಕೆಲವರು ಪ್ರಕಟನೆ 11ನೇ ಅಧ್ಯಾಯವನ್ನು "ಬೈಬಲಿನಲ್ಲಿಯೇ ಅತ್ಯಂಥ ಕಷ್ಟಕರವಾದ ಪುಸ್ತಕದಲ್ಲಿರುವ ಅತಿ ಕಷ್ಟಕರವಾದ ಅಧ್ಯಾಯವಾಗಿದೆ"[1] ಎಂದು ನಂಬುತ್ತಾರೆ. Leon Morrisನು ಹೀಗೆ ಬರೆಯುತ್ತಾನೆ, "ಅಧ್ಯಾಯವು ವ್ಯಾಖ್ಯಾನ ಮಾಡುವದಕ್ಕೆ ಅಸಾಧಾರಣವಾದ ರೀತಿಯಲ್ಲಿ ಕಷ್ಟಕರವಾದದ್ದು."[2] Bruce Metzgerನು ಈ ಅಧ್ಯಾಯವು "ಇಡೀ ಪುಸ್ತಕದಲ್ಲಿಯೇ ಅತ್ಯಂಥ ಗೊಂದಲಕ್ಕೀಡು ಮಾಡುವಂತಹ ವಿಭಾಗಗಳಲ್ಲೊಂದಾಗಿದೆ"[3] ಎಂಬುದನ್ನು ಒಪ್ಪಿಕೊಳ್ಳುತ್ತಾನೆ. Martin Kiddleನು ಹೇಳಿದ್ದೇನೆಂದರೆ, ಈ ಅಧ್ಯಾಯವು "ಒಮ್ಮೆಗೆ ಇಡೀ *ಪ್ರಕಟನೆ* ಪುಸ್ತಕದಲ್ಲಿಯೇ ಅತ್ಯಂಥ ಕಷ್ಟಕರವಾದ ಮತ್ತು ಅತಿ ಪ್ರಾಮುಖ್ಯವಾದ ಭಾಗವಾಗಿದೆ"[4] ಎಂದು ಹೇಳುತ್ತಾನೆ. ಅದು ಪ್ರಕಟನೆ ಪುಸ್ತಕದಲ್ಲಿ "ಅತಿ ಪ್ರಾಮುಖ್ಯವಾಗಿರುವ" ವಿಷಯದಲ್ಲಿ, ಕೆಲವು ವೇದ ಪಂಡಿತರು ಅದಕ್ಕೆ ಕಾರಣಗಳು ಇವುಗಳೇ ಆಗಿರುತ್ತವೆಂದು ಪರಿಗಣಿಸುತ್ತಾರೆ, ಯಾವವೆಂದರೆ (1) ಇಬ್ಬರು ಸಾಕ್ಷಿಗಳ ಕಥೆಯು ಇಡೀ ಪುಸ್ತಕಕ್ಕೆ ಒಂದು ಸಾರಾಂಶವನ್ನು ಒದಗಿಸಬಹುದಾಗಿದೆ, ಮತ್ತು (2) 11:15 ವಚನವು ಇಡೀ ಪ್ರಕಟನೆ ಪುಸ್ತಕವನ್ನು ಅರ್ಥಮಾಡಿಕೊಳ್ಳುವದಕ್ಕೆ ಮುಖ್ಯವಾಗಿರಬಹುದಾಗಿದೆ.

ಈ ಅಧ್ಯಾಯದಲ್ಲಿ ಕೆಲವೊಂದು ಅಸ್ಪಷ್ಟವಾದ ಸಂಕೇತಗಳಿರುವದಂತೂ ನಿಜವಾಗಿದೆ, ಆದರೆ ಅದರ ಪ್ರಾಥಮಿಕ ಸಂದೇಶವು ಸ್ಪಷ್ಟವಾಗಿರುವಂತೆ ಕಾಣಿಸುತ್ತದೆ. ಈ ಅಧ್ಯಾಯವನ್ನು ಕಷ್ಟಕರವಾಗಿ ಕಾಣಿಸುವಂತೆ ಮಾಡುವದೇನೆಂದರೆ ತಬ್ಬಿಬ್ಬುಗೊಳಿಸುವಂತಹ ವ್ಯಾಪಕವಾಗಿ ಭಿನ್ನವಾಗಿರುವ ವ್ಯಾಖ್ಯೆಗಳೇ ಆಗಿವೆ. "ಈ ಭಾಗವು ಕೊಟ್ಟಿರುವಷ್ಟು ಕಾಲ್ಪನಿಕ ವ್ಯಾಖ್ಯೆಗಳನ್ನು *ಪ್ರಕಟನೆ* ಪುಸ್ತಕದ ಬೇರೆ ಇನ್ನಾವ ಭಾಗವೂ ಕೊಟ್ಟಿರುವದಿಲ್ಲ."[5] ಈ "ಕಾಲ್ಪನಿಕ ವ್ಯಾಖ್ಯೆಗಳು"

ಮೂಲಭೂತವಾಗಿ ಪ್ರಕಟನೆ ಪುಸ್ತಕವನ್ನು ಅರ್ಥೈಸುವದಕ್ಕೆ ಬಳಸುವ ವಿಧವಿಧವಾದ ದಾರಿಗಳ ಫಲಿತವಾಗಿರುತ್ತವೆ. ಸಾಂಕೇತಿಕ ಭಾಷೆಯನ್ನು ಅಕ್ಷರಶಃ ಭಾಷೆಯಾಗಿ ಮಾಡಬೇಕೆಂಬ ಪ್ರವೃತ್ತಿಯು ವಿಶೇಷವಾಗಿ ಗೊಂದಲಕರವಾಗಿರುತ್ತದೆ. ಅನೇಕ ವ್ಯಾಖ್ಯಾನ ಗ್ರಂಥಗಳು ಅಕ್ಷರಶಃ ಯೆಹೂದ್ಯರ ಕುರಿತು, ಒಂದು ಅಕ್ಷರಶಃ ದೇವಾಲಯ, ಒಂದು ಅಕ್ಷರಶಃ ಪಟ್ಟಣ, ಮತ್ತು ಒಂದು ಅಕ್ಷರಶಃ ಕಾಲಾವಧಿ ಇವುಗಳ ಕುರಿತು ಮಾತಾಡುತ್ತವೆ.

ಗೊಂದಲವು ಹೇರಳವಾಗಿದ್ದಾಗ್ಯೂ, ಈ ಅಧ್ಯಾಯವು ಸ್ವಸ್ಥವಾದ, ತಾರ್ಕಿಕವಾದ ಅರ್ಥೈಸುವ ದಾರಿಯನ್ನು ಬಳಸುವವನಿಗೆ ಈ ಅಧ್ಯಾಯವು ಅನಾವಶ್ಯಕವಾದ ಕಠಿಣತೆಗಳನ್ನು ಮುಂದಿಡತಕ್ಕದ್ದಲ್ಲ. ಇದು ಇಂದಿನ ಸಭೆಗೆ ಅನ್ವಯವಾಗುವಂಥ ಶಕ್ತಿಶಾಲಿ ಪಾಠಗಳನ್ನೊಳಗೊಂಡಿದೆ.

## ದೇವಾಲಯವನ್ನು ಅಳತೆ ಮಾಡುವದು (11:1, 2)

**1ತರುವಾಯ ದಂಡದಂತಿದ್ದ ಒಂದು ಅಳತೇ ಕೋಲು ನನ್ನ ಕೈಗೆ ಕೊಡಲ್ಪಟ್ಟಿತು. ಮತ್ತು ಒಂದು ವಾಣಿ ಉಂಟಾಯಿತು; ಅದು ನನಗೆ ಹೇಳಿದ್ದೇನಂದರೆ – ನೀನೆದ್ದು ದೇವರ ಆಲಯವನ್ನೂ ಯಜ್ಞವೇದಿಯನ್ನೂ ಅಳತೆಮಾಡಿ ಆಲಯದಲ್ಲಿ ಆರಾಧನೆಮಾಡುವವರನ್ನು ಲೆಕ್ಕಿಸು. 2ಆಲಯಕ್ಕೆ ಹೊರಗಿರುವ ಅಂಗಳವನ್ನು ಅಳೆಯದೆ ಬಿಟ್ಟುಬಿಡು; ಅದು ಅನ್ಯಜನರಿಗಾಗಿ ಬಿಟ್ಟದೆ; ಅವರು ಪರಿಶುದ್ಧ ಪಟ್ಟಣವನ್ನು ನಾಲ್ವತ್ತೆರಡು ತಿಂಗಳು ತುಳಿದಾಡುವರು.**

ಮುಂಚಿನ ಅಧ್ಯಾಯದಲ್ಲಿ, ಯೋಹಾನನಿಗೆ ಪಾಲುಗಾರನ ಪಾತ್ರವನ್ನು ಕೊಟ್ಟು ಚಿಕ್ಕ ಸುರುಳಿಯನ್ನು ತೆಗೆದುಕೊಂಡು ತಿನ್ನುವಂತೆ ಹೇಳಲಾಯಿತು (10:8-11). ವೇದಿಕೆಯ ಮೇಲಿರುವ ವೇಳೆ, ಅವನಿಗೊಂದು ಹೆಚ್ಚುವರಿ ಕೆಲಸವನ್ನು ವಹಿಸಲಾಯಿತು.

**ವಚನ 1. ತರುವಾಯ ದಂಡದಂತಿದ್ದ ಒಂದು ಅಳತೇ ಕೋಲು ನನ್ನ ಕೈಗೆ ಕೊಡಲ್ಪಟ್ಟಿತು.** ಮೂಲ ವಾಕ್ಯದಲ್ಲಿ, **ಅಳತೇ ಕೋಲು** ಎಂಬ ಪದವು ಗ್ರೀಕ್ ಭಾಷೆಯಲ್ಲಿ κάλαμος (*kalamos*) ಎಂದಾಗಿದ್ದು, ಅದರರ್ಥವು "ದಂಟು" (KJV) ಎಂದಾಗಿರುತ್ತದೆ. ಯೇಸು ಸ್ನಾನಿಕನಾದ ಯೋಹಾನನನ್ನು ಬಣ್ಣಿಸುವ ವೇಳೆಯಲ್ಲಿ ಅದೇ ಪದವನ್ನು ಬಳಸಿದನು (ಲೂಕ 7:24); ಆದರೆ ಯೇಸುವು ಬಣ್ಣಿಸಿದ ದಂಟು ಬಗ್ಗುವದಾಗಿದ್ದರೆ, ಪ್ರಕಟನೆ 11:1ರಲ್ಲಿ ಪ್ರಸ್ತಾಪಿಸಲಾಗಿರುವ ದಂಟು **ದಂಡದಂತಿತ್ತು.** ಎತ್ತರವಾದ, ಬಿದರಿನಂಥ ದಂಟು ಯೋರ್ದಾನ್ ಕಣಿವೆಯಲ್ಲಿ ಬೆಳೆಯುವದಾಗಿತ್ತು. ಈ ಗಿಡಗಳು ಕೆಲವು ಸಾರಿ ಹತ್ತು ಅಥವಾ ಅದಕ್ಕಿಂತ ಹೆಚ್ಚು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತಿದ್ದವು. ಇದರ ರೀತಿಯಲ್ಲಿದ್ದ ಒಂದು ವಸ್ತುವನ್ನು ಅಪೊಸ್ತಲನಿಗೆ ಕೊಡಲ್ಪಟ್ಟು ಅಳತೇ ಕೋಲಾಗಿ ಬಳಸುವಂತೆ ಹೇಳಲಾಗಿತ್ತು. ಈ ದಂಡವನ್ನು ಯೆಹೆಜ್ಕೇಲನ ಪುಸ್ತಕದಲ್ಲಿರುವ ಅಳತೇ ಕೋಲಿಗೆ ಹೋಲಿಸಿ ನೋಡಿರಿ, ಅದು ಆರು ಉದ್ದ ಮೊಳ ಅಥವಾ ಅದಕ್ಕಿಂತ ಹೆಚ್ಚು ಉದ್ದವಾಗಿತ್ತು - ಅಂದರೆ, ಸುಮಾರು ಒಂಭತ್ತು ಅಥವಾ ಹತ್ತು ಅಡಿಗಳಷ್ಟು ಉದ್ದ (ಯೆಹೆಜ್ಕೇಲ 40:5).

ತರುವಾಯ, ಯಾರೋ ಆತನಿಗೆ **ಒಂದು ವಾಣಿ ಉಂಟಾಯಿತು** – ಬಹುಶಃ ಆತನಿಗೆ ಚಿಕ್ಕ ಸುರುಳಿಯನ್ನು ತಿನ್ನುವಂತೆ ಅಪ್ಪಣೆ ಕೊಟ್ಟ ಅದೇ "ಆಕಾಶವಾಣಿ" ಆಗಿರಬಹುದು (10:4). 1ನೇ ವಚನದಲ್ಲಿನ "ಯಾರೋ" (ವಾಣಿ) ಬಳಿಕ 3ನೇ ವಚನದಲ್ಲಿ "ನನ್ನ" ಎಂಬ ಸೌಮ್ಯವಾಚಕ ಸರ್ವನಾಮ ಪದವು ಬರುವದಾಗಿದ್ದು ("ನನ್ನ . . . ಸಾಕ್ಷಿಗಳು") ಅದು ಮಾತಾಡುತ್ತಿರುವವನು *ದೇವರು* ಎಂಬುದನ್ನು ಸೂಚಿಸುತ್ತದೆ. KJVಯಲ್ಲಿ "ಮತ್ತು ದೇವದೂತನು ನಿಂತುಕೊಂಡು . . .

ಹೇಳಿದನು" ಎಂಬುದಾಗಿ ಇರುತ್ತದೆ, ಆದರೆ ಹಸ್ತಪ್ರತಿಗಳಲ್ಲಿನ ಪುರಾವೆಯು ಈ ಪದಗುಚ್ಛವನ್ನು ಹೊರಗಿಡುವದಕ್ಕೆ ಒಲವು ತೋರುತ್ತದೆ. ಖಂಡಿತವಾಗಿಯೂ, ಕರ್ತನ ಪ್ರತಿನಿಧಿಯಾಗಿ ಯೋಹಾನನಿಗೆ ದೇವರ ಅಪ್ಪಣೆಗಳನ್ನು ಕೊಟ್ಟವನು "ಬಲಿಷ್ಠನಾದ ದೇವದೂತನು" (10:1) ಆಗಿರುವ ಸಾಧ್ಯತೆಯಿರುತ್ತದೆ.

ಈ "ಯಾರೋ ಒಬ್ಬನು" ಅಪೊಸ್ತಲನಿಗೆ ಹೀಗೆ ಆಜ್ಞಾಪಿಸಿತ್ತು: **ನೀನೆದ್ದು ದೇವರ ಆಲಯವನ್ನೂ ಯಜ್ಞವೇದಿಯನ್ನೂ ಅಳತೆಮಾಡಿ ಆಲಯದಲ್ಲಿ ಆರಾಧನೆಮಾಡುವವರನ್ನೂ ಲೆಕ್ಕಿಸು.** ಪ್ರಾಥಮಿಕ ಸಂದೇಶವು **ಅಳತೆಮಾಡಿ** ಎಂಬ ಪದದಲ್ಲಿ ಕೂಡಿ ಹಾಕಲ್ಪಟ್ಟಿರುತ್ತದೆ. ಹೇಗೂ, ಆ ಪದದ ಮಹತ್ವಪೂರ್ಣತೆಯ ಕುರಿತು ನಾವು ಅಧ್ಯಯನ ಮಾಡುವದಕ್ಕೆ ಮುನ್ನ, ಏನನ್ನು ಅಳತೆ ಮಾಡಬೇಕಾಗಿತ್ತದೆಂಬುದರ ಕುರಿತು ಪರಿಗಣಿಸೋಣ.

ಮೂರು ಸಂಗತಿಗಳನ್ನು ಅಳತೆ ಮಾಡಬೇಕಾಗಿತ್ತು. ಮೊದಲನೆಯದು **ದೇವಾಲಯ**. ಪ್ರಕಟನೆ ಪುಸ್ತಕವು Domitianನ ಕಾಲದಲ್ಲಿ ಬರೆಯಲ್ಪಟ್ಟಿದೆ ಎಂದು ಹೇಳುವದು ಸರಿಯೆಂದೇ ಭಾವಿಸಿಕೊಳ್ಳುವದಾದರೆ, ಅಧ್ಯಾಯ 11ರಲ್ಲಿನ ಚಿತ್ರಣವು ಬಹುಶಃ ಯೆರೂಸಲೇಮಿನಲ್ಲಿರುವ ಹೆರೋದನ ದೇವಾಲಯದ್ದೇ ಆಗಿರಬಹುದಾಗಿದೆ, ಅದು ಕ್ರಿ.ಶ. 70ರಲ್ಲಿ ರೋಮನ್ ಸೈನ್ಯದಿಂದ ನಾಶನಕ್ಕೊಳಗಾಗಿತ್ತು. ಯೋಹಾನನಿಗೆ ಗೊತ್ತಿದ್ದ ದೇವಾಲಯವು ಹೆರೋದನ ದೇವಾಲಯವೇ ಆಗಿತ್ತು, ಆತನ ಯಾವದೇ ವಾಚಕರ ಜೀವಿತ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಏಕೈಕ ದೇವಾಲಯ ಅದಾಗಿತ್ತು. 11:1, 2ರಲ್ಲಿನ ಚಿತ್ರಣವು ಒಂದೇ ಅಂಗಳವಿದ್ದ ದೇವದರ್ಶನ ಗುಡಾರದಿಂದ ತೆಗೆದುಕೊಂಡದ್ದಾಗಿರಬಹುದು, ಆದರೆ ಅಂಗಳು ಅನ್ಯಜನರಿಗಾಗಿ ಬಿಟ್ಟದೆ ಎಂಬುದು ಹೆರೋದನ ದೇವಾಲಯದಲ್ಲಿರುತ್ತಿದ್ದ ಅನ್ಯಜನರ ಅಂಗಳದಂತೆಯೇ ಅನ್ನಿಸುತ್ತದೆ.

ಚಿತ್ರಣವು ಹೆರೋದನ ದೇವಾಲಯದ ಆಧಾರದಲ್ಲಿರುತ್ತದೆಂಬ ಸಂಭವನೀಯತೆಯು 1 ಮತ್ತು 2 ವಚನಗಳು ಮೂಲತಃ ರೋಮನ್ನರಿಂದ ಯೆರೂಸಲೇಮ್ ಮುತ್ತಿಗೆ ಹಾಕಲ್ಪಟ್ಟಿದ್ದ ವೇಳೆಯಲ್ಲಿ ಒಬ್ಬ ಹರೋತ್ಸಾಹಿ "ಪ್ರವಾದಿ" ಯಿಂದ ಬರೆಯಲ್ಪಟ್ಟಿದ್ದಾವೆಂದು ಹೇಳುವಂತೆ ಕೆಲವು ಲಿಬರಲ್ ಪಂಡಿತರನ್ನು ಪ್ರೇರಿಸಿರುತ್ತದೆ - ಈ ರೀತಿಯ ವಾದಕ್ಕೆ ಯಾವದೇ ಪುರಾವೆ ಇಲ್ಲದಿದ್ದಾಗ್ಯೂ ಅವರು ಹಾಗೆ ಹೇಳುತ್ತಾರೆ. G. B. Cairdನು ಈ ಮುಕ್ತಾಯಕ್ಕೆ ಬರುತ್ತಾನೆ, "ಈ ಊಹೆಯನ್ನು ಅಸಂಭವನೀಯ, ನಿಷ್ಪ್ರಯೋಜಕ, ಮತ್ತು ಅಸ್ಪಷ್ಟವಾದದ್ದೆಂದು ತೀರ್ಪು ಮಾಡತಕ್ಕದ್ದು."[6]

1ನೇ ವಚನದಲ್ಲಿ "ದೇವಾಲಯ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ναός (*naos*), ಇದು ಯಾಜಕರು ಮಾತ್ರವೇ ಹೋಗಬಹುದಾಗಿದ್ದ *ಪವಿತ್ರ* ಭಾಗವನ್ನು ಸೂಚಿಸುತ್ತದೆ (ನೋಡಿರಿ ಮತ್ತಾಯ 23:35; 27:51) - ಇದು ಕಟ್ಟಡಗಳನ್ನು, ಅಂಗಳಗಳನ್ನು, ಮತ್ತು ದ್ವಾರಮಂಟಪಗಳನ್ನೊಳಗೊಂಡ ದೇವಾಲಯದ ಸಮುಚ್ಛಯಕ್ಕೆ ತದ್ವಿರುದ್ಧವಾದದ್ದು. ದೇವಾಲಯದ ಇಡೀ ಸಮುಚ್ಚಯವನ್ನು ಸೂಚಿಸುವದಕ್ಕೆ ಬಳಸಲಾಗಿರುವ ಗ್ರೀಕ್ ಪದವು ἱερόν (*hieron*) (ನೋಡಿರಿ ಮತ್ತಾಯ 4:5; ಯೋಹಾನ 2:14).

ಅಲ್ಲದೆ ಯೋಹಾನನಿಗೆ **ಯಜ್ಞವೇದಿಯನ್ನೂ** ಅಳತೆ ಮಾಡುವಂತೆ ಹೇಳಲಾಯಿತು. ದರ್ಶನಕ್ಕೆ ಸಂಬಂಧ ಪಟ್ಟಂತೆ, ಯಜ್ಞವೇದಿಯೆಂಬುದು *naos*ನ ಮುಂಭಾಗದಲ್ಲೇ ಇರುತ್ತಿದ್ದ ಸರ್ವಾಂಗಹೋಮಗಳ ವೇದಿಯನ್ನಾದರೂ ಸೂಚಿಸಬಹುದಾಗಿದೆ ಅಥವಾ *naos*ನ ಒಳಗಡೆಯಲ್ಲಿ ಪವಿತ್ರ ಸ್ಥಳದಲ್ಲಿರುತ್ತಿದ್ದ ಚಿಕ್ಕ ಧೂಪವೇದಿಯನ್ನಾದರೂ ಸೂಚಿಸಬಹುದಾಗಿದೆ. ಪ್ರಕಟನೆ ಪುಸ್ತಕದಲ್ಲಿ, ಎರಡು ಯಜ್ಞವೇದಿಗಳ ಚಿತ್ರಣವು ಒಟ್ಟಿಗೆ ಮಿಶ್ರಿತಗೊಳ್ಳುವಂತೆ ಒಲವು ಹೊಂದಿರುತ್ತದೆ (6:9; 8:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಹೀಗೆ ಯಜ್ಞವೇದಿಯನ್ನು

ನಿಖರವಾಗಿ ಗುರುತಿಸುವದಕ್ಕೆ ಸಾಧ್ಯವೂ ಇಲ್ಲ ಮತ್ತು ಅದು ಪ್ರಾಮುಖ್ಯವೂ ಆಗಿರುವದಿಲ್ಲ. ಇದು ಬಹುಶಃ ಧೂಪವೇದಿಯನ್ನು ಸೂಚಿಸುವದಾಗಿದೆ ಯಾಕೆಂದರೆ ಪ್ರಕಟನೆ ಪುಸ್ತಕದಲ್ಲಿ ಅಧಿಕ ಸಾರಿ ಉಲ್ಲೇಖಿಸಲ್ಪಟ್ಟಿರುವ ವೇದಿಯು ಇದೇ ಆಗಿದೆ ಮತ್ತು ಯೆಹೂದಿ ಆರಾಧನೆಯೊಂದಿಗೆ ಬಹಳವಾಗಿ ಸಂಬಂಧವನ್ನು ಹೊಂದಿರುವ ವೇದಿಯೂ ಆಗಿದೆ. ಅವರು ಧೂಪವೇದಿಯಲ್ಲಿ ಧೂಪವು ಉರಿಸಲ್ಪಡುವ ಹೊತ್ತುಗಳಲ್ಲಿ ಪ್ರಾರ್ಥಿಸುವದಕ್ಕಾಗಿ ಕೂಡಿ ಬರುತ್ತಿದ್ದರು.

ಮೂರನೆಯದಾಗಿ, **ಆಲಯದಲ್ಲಿ ಆರಾಧನೆಮಾಡುವವರನ್ನು** ಲೆಕ್ಕಿಸು ಎಂದು ಯೋಹಾನನಿಗೆ ಹೇಳಲಾಯಿತು. "ಆಲಯದಲ್ಲಿ ಆರಾಧನೆಮಾಡುವವರು" ಯಜ್ಞಗಳನ್ನು ಅರ್ಪಿಸುತ್ತಿದ್ದ ಮತ್ತು ಧೂಪವನ್ನು ಉರಿಸುತ್ತಿದ್ದ ಯಾಜಕರಾಗಿರಬಹುದು ಅಥವಾ ದಿನಕ್ಕೆ ಹಲವಾರು ಸಾರಿ ಪ್ರಾರ್ಥಿಸುವದಕ್ಕೆ ಕೂಡಿ ಬರುತ್ತಿದ್ದ ಯೆಹೂದ್ಯರಾಗಿರಬಹುದಾಗಿದೆ. ಇಲ್ಲಿ *naos* ಎಂಬುದು ಬಳಸಲ್ಪಟ್ಟಿರುವದರಿಂದ, ಯಾಜಕರ ಚಿತ್ರಣವು ಇಲ್ಲಿ ಸೂಕ್ತವೆಂದೆಣಿಸುತ್ತದೆ. ಇಂದು ಎಲ್ಲಾ ಕ್ರೈಸ್ತರು ಸಹ "ಯಾಜಕರು" ಆಗಿರುತ್ತಾರೆಂಬುದನ್ನು ನೆನಪಿಟ್ಟುಕೊಳ್ಳಿರಿ (1 ಪೇತ್ರ 2:5, 9; ಪ್ರಕಟನೆ 1:6; 5:10).

**ವಚನ 2.** ಅಳತೆ ಮಾಡತಕ್ಕವುಗಳ ಜೊತೆಯಲ್ಲಿ, ಅಳೆಯದೆ ಬಿಟ್ಟು ಬಿಡಬೇಕಾದ ಕೆಲವು ಸಂಗತಿಗಳಿದ್ದವು. ಆ ವಾಣಿಯು ಯೋಹಾನನಿಗೆ ಹೀಗೆ ಹೇಳಿತು, **ಆಲಯಕ್ಕೆ ಹೊರಗಿರುವ ಅಂಗಳವನ್ನು ಅಳೆಯದೆ ಬಿಟ್ಟುಬಿಡು; ಅದು ಅನ್ಯಜನರಿಗಾಗಿ ಬಿಟ್ಟದೆ.** ಆಲಯದ ಹೊರಗೆ ಇದ್ದ ಅಂಗಳವು - ಅಂದರೆ, ಪವಿತ್ರ ಸ್ಥಳದ ಹೊರಗಡೆಯಲ್ಲಿದ್ದ ಸ್ಥಳವು - **ಅನ್ಯಜನರಿಗಾಗಿ ಬಿಟ್ಟ**ದ್ದಾಗಿತ್ತು. ಜನರು ಅಥವಾ "ಜನಾಂಗಗಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ἔθνος (*ethnos*), ಇದು ಅನ್ಯಜನರನ್ನು ಸೂಚಿಸುವದಕ್ಕೆ ಬಳಸುವ ಸಾಮಾನ್ಯ ಪದವಾಗಿರುತ್ತದೆ (KJV), ಆ ಪದದಿಂದಲೇ ಆಂಗ್ಲದ "ethnic" ಎಂಬ ಪದವು ಬಂದದೆ. NASBಯು ಈ ಪದವನ್ನು ಅನೇಕ ವಾಕ್ಯಭಾಗಗಳಲ್ಲಿ "ಅನ್ಯಜನರು" ಎಂದು ಅನುವಾದಿಸಿರುತ್ತದೆ (ನೋಡಿರಿ ಮತ್ತಾಯ 4:15; ಅಪೊಸ್ತಲರ ಕೃತ್ಯಗಳು 11:1). "ಜನಾಂಗಗಳು" ಎಂಬುದು ಒಂದು ಜೈವಿಕ ಪದವಾಗಿರಬಲ್ಲದು, ಆದರೆ ಸಾಮಾನ್ಯವಾಗಿ ಪ್ರಕಟನೆ ಪುಸ್ತಕದಲ್ಲಿ ಇದು ಕ್ರಿಸ್ತನಿಗೆ ಅವಿಧೇಯರಾದವರನ್ನು ಸೂಚಿಸುವದಾಗಿದೆ (ನೋಡಿರಿ 11:18), ಮತ್ತು ಇಲ್ಲಿ ಅದೇ ಅರ್ಥದಲ್ಲಿಯೇ ಇರುವದಾಗಿದೆ. ಈ **ಆಲಯದ ಹೊರಗಿರುವ ಅಂಗಳ**ದ, ಅಂದರೆ ಪವಿತ್ರ ಸ್ಥಳದ ಹೊರಗೆ ಇರುವ ಅಂಗಳದ ಚಿತ್ರಣವು ಹೆರೋದನ ದೇವಾಲಯದಲ್ಲಿರುವ ಅನ್ಯಜನರ ಅಂಗಳ ಎಂಬುದರಿಂದ ತೆಗೆದುಕೊಂಡಿರುವಂತೆ ಕಾಣಿಸುತ್ತದೆ. ಹೆರೋದನ ದೇವಾಲಯದಲ್ಲಿ ಯೆಹೂದ್ಯೇತರರಿಗೆ ಪ್ರವೇಶಿಸುವ ಅನುಮತಿಯಿರುತ್ತಿದ್ದ ಏಕೈಕ ಸ್ಥಳವು ಅದು ಅನ್ಯಜನರ ಅಂಗಳವೇ ಆಗಿತ್ತು. ಕ್ರಿಸ್ತನ ಜೀವನ ಹಾಗೂ ಆದಿ ಸಭೆಯ ಆರಂಭಿಕ ದಿನಗಳಲ್ಲಿ ನಡೆದ ಅನೇಕ ಗಮನಾರ್ಹವಾದ ಘಟನೆಗಳಿಗೆ ಅನ್ಯಜನರು ಅಂಗಳವು ವೇದಿಕೆಯಾಗಿತ್ತು (ಯೋಹಾನ 2:13-16; ಅಪೊಸ್ತಲರ ಕೃತ್ಯಗಳು 3:3, 12; 15:12). ಈ ಅಂಗಳ ಹಾಗೂ ದೇವಾಲಯದ ಉಳಿದ ಸಮುಚ್ಚಯದ ನಡುವೆ, ಅನ್ಯಜನರು ಇನ್ನಷ್ಟು ಮುಂದಕ್ಕೆ ಸಾಗುವದಾದರೆ ಎದುರಿಸಬೇಕಾದ ಪರಿಣಾಮಗಳ ಕುರಿತು ಎಚ್ಚರಿಕೆಯ ಫಲಕಗಳನ್ನು ಹಾಕಲಾಗಿರುತ್ತಿತ್ತು.

ಆ ವಾಣಿಯು ಹೇಳಿದ್ದೇನೆಂದರೆ ಜನಾಂಗಗಳು (ಅನ್ಯಜನರು) **ಪರಿಶುದ್ಧ ಪಟ್ಟಣವನ್ನು . . . ತುಳಿದಾಡುವರು** ಎಂಬದೆ. 2ನೇ ವಚನದಲ್ಲಿ **ಪರಿಶುದ್ಧ ಪಟ್ಟಣ** ಎಂಬುದು ಬಹುಶಃ ಯೆರೂಸಲೇಮ್ ಪಟ್ಟಣವನ್ನು ಸೂಚಿಸುವ ಉದ್ದೇಶ ಹೊಂದಿರಬಹುದಾಗಿದೆ. ಹೆರೋದನ

ದೇವಾಲಯವು ಯೆರೂಸಲೇಮಿನ ಈಶಾನ್ಯಭಾಗದಲ್ಲಿತ್ತು. ಹೊಸ ಒಡಂಬಡಿಕೆಯಲ್ಲಿ ಎರಡು ಸಾರಿ, ಯೆರೂಸಲೇಮ್ "ಪರಿಶುದ್ಧ ಪಟ್ಟಣ" ಎಂದು ಕರೆಯಲ್ಪಟ್ಟಿದೆ (ಮತ್ತಾಯ 4:5; 27:53) - ಅದಕ್ಕೆ ಕಾರಣವು ಯೇಸುವಿನ ಹಾಗೂ ಅಪೊಸ್ತಲರ ಕಾಲಗಳ ವೇಳೆ ಪಟ್ಟಣದಲ್ಲಿದ್ದವು ನ್ಯಾಯವಾಗಿ ನಡೆಯುತ್ತಿದ್ದ ಎಂಬುದಲ್ಲ, ಆದರೆ ಗತಕಾಲದಲ್ಲಿ ದೇವರು ಯೆಹೂದ್ಯರೊಂದಿಗಿನ ತನ್ನ ವ್ಯವಹಾರದಲ್ಲಿ ಈ ಜಾಗವನ್ನು ಪ್ರತ್ಯೇಕಿಸಿಟ್ಟಿದ್ದನೆಂಬ ಕಾರಣಕ್ಕಾಗಿಯೇ ಆಗಿದೆ. 2ನೇ ವಚನದಲ್ಲಿರುವ "ಪರಿಶುದ್ಧ ಪಟ್ಟಣ" ವು 8ನೇ ವಚನದಲ್ಲಿರುವ "ಮಹಾ ಪಟ್ಟಣ"ವೇ ಆಗಿರುವದಕ್ಕೆ ಸಾಧ್ಯವಿದೆ. ಹಾಗಿರುವದು ನಿಜವೇ ಆದಲ್ಲಿ, ಈ ಗುರುತಿಸುವಿಕೆಯು ಅದನ್ನು ಇನ್ನಷ್ಟು ವ್ಯಾಖ್ಯಾನಿಸುವದಾಗಿದೆ (ವ. 8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಇದು ನಿಂತು ಬಿಟ್ಟು "11:1, 2 ರಲ್ಲಿರುವ ದೇವಾಲಯ ಯಾವದು?" ಎಂದು ಕೇಳಬೇಕಾದ ಸಮಯವಾಗಿದೆ. ಪ್ರಕಟನೆ ಪುಸ್ತಕವು ಶಾರೀರಿಕ ಪಟ್ಟಣದಲ್ಲಿದ್ದ ಒಂದು ಶಾರೀರಿಕ ದೇವಾಲಯದ ಕುರಿತು ಕಳಕಳಿ ಹೊಂದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. G. B. Cairdನು ವ್ಯಾಖ್ಯಾಸಿದ್ದೇನೆಂದರೆ, "ಈ ರೀತಿಯಾಗಿ ಹೇಳಿದರೆ ಅದು ವಿಪರೀತವೆಂದೆಣಿಸುವದೇ ಇಲ್ಲ, ಏನೆಂದರೆ ಎಲ್ಲಾ ಸಂಗತಿಗಳೂ ಸಾಂಕೇತಿಕವಾಗಿ ವ್ಯಕ್ತಪಡಿಸಲ್ಪಟ್ಟಿರುವ ಒಂದು ಪುಸ್ತಕದೊಳಗೆ, *ದೇವಾಲಯ* ಮತ್ತು *ಪರಿಶುದ್ಧ ಪಟ್ಟಣ* ಎಂಬುದರ ಅರ್ಥವು ಶಾರೀರಿಕ ದೇವಾಲಯ ಹಾಗೂ ಭೂಲೋಕದ ಯೆರೂಸಲೇಮ್ ಎಂದಾಗಿರುತ್ತದೆಂದು ಹೇಳುವದು ಕಟ್ಟಕಡೇ ವಿಚಾರವಾಗಿದೆ."[7] J. W. Robertsನು ಹೀಗೆ ಬರೆದನು, "ಅಳತೆ ಮಾಡುವಂತೆ ಯೋಹಾನನಿಗೆ ಹೇಳಲಾದ ದೇವಾಲಯವು ಯೆರೂಸಲೇಮಿನಲ್ಲಿದ್ದ ದೇವಾಲಯವಾಗಿರಲಿಲ್ಲ ಆದರೆ ಆತನು ಪತ್ಮೋಸ್ ದ್ವೀಪದಲ್ಲಿರುವಾಗ ಹೊಂದಿದ ದರ್ಶನದೊಳಗಿದ್ದ ದೇವಾಲಯವೇ."[8] Robertsನು ಎತ್ತಿ ತೋರಿಸಿದ್ದೇನೆಂದರೆ 1, 2 ವಚನಗಳಲ್ಲಿರುವ ದೇವಾಲಯವು ದೇವರಿಂದ ಕಾಪಾಡಲ್ಪಡಲಿಕ್ಕಿತ್ತು, ಆದರೆ ಇತಿಹಾಸದಲ್ಲಿ ಬರೆಯಲ್ಪಟ್ಟಿರುವದೇನೆಂದರೆ, "Titusನ ಸೈನಿಕರು [ಶಾರೀರಿಕ] ದೇವಾಲಯವನ್ನು ಸಂರಕ್ಷಿಸಲಿಲ್ಲ ಆದರೆ ಅವರು ಉಳಿದ ಪಟ್ಟಣವನ್ನು ನಾಶ ಮಾಡಿದ ರೀತಿಯಲ್ಲಿಯೇ ಅದನ್ನು ನಾಶಗೊಳಿಸಿದರು."[9]

ಅಲ್ಲದೆ 1 ಮತ್ತು 2 ವಚನಗಳಲ್ಲಿನ ದೇವಾಲಯವು ಭವಿಷ್ಯದಲ್ಲಿ ಮರುನಿರ್ಮಾಣಗೊಳ್ಳಲಿದ್ದ ಶಾರೀರಿಕ ದೇವಾಲಯವೂ - ಕೆಲವು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಹೀಗೆ ವಾದಿಸುವ ಪ್ರಕಾರ - ಆಗಿರಲಿಲ್ಲ. ಈ ವಿಷಯದ ಬಗ್ಗೆ ಅನಂತರದಲ್ಲಿ ನಾವು ಕ್ಲುಪ್ತವಾಗಿ ಅಧ್ಯಯನ ಮಾಡಲಿದ್ದೇವೆ, ಆದರೆ ಧರ್ಮಶಾಸ್ತ್ರದ "ಬಲಹೀನವಾದ [ಕೆಲಸಕ್ಕೆ ಬಾರದ] ದರಿದ್ರ . . ." (ಗಲಾತ್ಯ 4:9) ಸಂಗತಿಗಳು ಪುನಃ ಸ್ಥಾಪಿಸಲ್ಪಡುವವೆಂಬ ವಿಚಾರವು ಒಂದು ವಿಶಿಷ್ಟವಾದ ಭಾವನೆಯಾಗಿದೆ, ಒಂದು ಪ್ರತಿಭಟನೆಗೊಳಗಾಗಬಹುದಾದ ವಿಷಯ ಸಹ ಆಗಿದೆ. ದಿಕ್ಕು ತೋಚದವರಾಗಿದ್ದ ಪ್ರಥಮ ಶತಮಾನದ ಕ್ರೈಸ್ತರಿಗೆ ಸಾವಿರಾರು ವರ್ಷಗಳ ಬಳಿಕ ಭವಿಷ್ಯದಲ್ಲಿ ಒಂದು ದೇವಾಲಯವು ಕಟ್ಟಲ್ಪಡುತ್ತದೆಂದು ಹೇಳುವದರಿಂದ ಯಾವ ಆದರಣೆಯು ಸಿಕ್ಕಿರುವದಕ್ಕೆ ಸಾಧ್ಯವಿದೆ?

ಪ್ರಕಟನೆ ಪುಸ್ತಕವು ಬರೆಯಲ್ಪಡುವ ಹೊತ್ತಿಗೆ, ಯೆರೂಸಲೇಮಿನಲ್ಲಿದ್ದ ಶಾರೀರಿಕ ದೇವಾಲಯವು ಬಹುಶಃ ನಾಶಗೊಳಿಸಲ್ಪಟ್ಟಿತ್ತು. 11ನೇ ಅಧ್ಯಾಯದ ಮೊದಲ ಭಾಗದಲ್ಲಿರುವ ದೇವಾಲಯವು ಒಂದು ಆತ್ಮೀಕ ವಾಸ್ತವಿಕತೆಯ ಸಂಕೇತವಾಗಿರುತ್ತದೆ. ಪ್ರಕಟನೆ 11ನೇ ಅಧ್ಯಾಯವು ಒಂದು ಅಕ್ಷರಶಃ ದೇವಾಲಯವನ್ನು ಕುರಿತು ಮತ್ತು ಒಂದು ಅಕ್ಷರಶಃ ಪಟ್ಟಣವನ್ನು ಕುರಿತು ಮಾತಾಡುತ್ತದೆಂದು ವಾದಿಸುವವರು ಭಾಷೆಯು ಅಕ್ಷರಶಃ ಆಗಿದ್ದರಷ್ಟೇ

ವಾಕ್ಯಭಾಗವು ವಾಸ್ತವಿಕವಾದದ್ದನ್ನು ಮಾತಾಡಬಲ್ಲ ಏಕೈಕ ರೀತಿಯಾಗಿದೆ ಎಂದು ವಾದ ಮಾಡುತ್ತಾರೆ. Robert Mounceನು ಈ ದೃಷ್ಟಿಕೋನದ ಮೇಲೆ ಹೀಗೆ ವ್ಯಾಖ್ಯಾನಿಸುತ್ತಾನೆ: "ಪ್ರವಾದನೆಯ ಭಾಷೆಯು ಅತ್ಯಂಥ ಸಾಂಕೇತಿಕವಾಗಿದ್ದು ಮುಂತಿಳಿಸಲ್ಪಟ್ಟ ಘಟನೆಗಳ ವಾಸ್ತವಿಕತೆಯೊಂದಿಗೆ ಅದು ಯಾವದೇ ಸಂಬಂಧವನ್ನು ಹೊಂದಿರುವದಿಲ್ಲ. ಸಾಂಕೇತಿಕತೆಯು ಐತಿಹಾಸಿಕತೆಯ ಅಲ್ಲಗಳೆಯುವಿಕೆಯಲ್ಲ ಆದರೆ ಸಾಹಿತ್ಯಕ ಬಗೆಯ ಸಂಬಂಧಿತ ವಿಚಾರವಾಗಿದೆ."[10]

ದೇವಾಲಯವು ಯಾವ "ಆತ್ಮೀಕ ವಾಸ್ತವಿಕತೆ" ಯನ್ನು ಪ್ರತಿನಿಧಿಸುತ್ತದೆ? Alfred Plummerನು ಹೀಗೆ ಬರೆದನು, "*ದೇವಾಲಯ*ವು ಇಲ್ಲಿ ಕ್ರಿಸ್ತನ ಸಭೆಯ ವಿಶ್ವಾಸಿಗಳ ಭಾಗವನ್ನು ಸೂಚಿಸುವದಕ್ಕೆ ಸಾಂಕೇತಿಕವಾಗಿ ಬಳಸಲ್ಪಟ್ಟಿದೆ ಎಂದು ಹೇಳಿದರೆ ಅದನ್ನು ಸಂಶಯಿಸುವ ಸಾಧ್ಯತೆಯು ಅತಿ ಕಡಿಮೆ ಎನ್ನಬಹುದು."[11] Jim McGuiggenನು ಹೀಗೆ ಹೇಳಿದನು, "ಈ ಪತ್ರಿಕೆಯು ಬರೆಯಲ್ಪಡುವ ಹೊತ್ತಿಗಾಗಲೆ, ಉಳಿದಿದ್ದು *ದೇವರ ಒಂದೇ* ಒಂದು ಆಲಯ! ಅದು ದೇವರ ಸಭೆಯೇ."[12]

ಕ್ರಿಸ್ತನ ಸಭೆಯು ದೇವರ ಆಲಯವಾಗಿದೆ ಎಂಬ ಭಾವನೆಯು ಹೊಸ ಒಡಂಬಡಿಕೆಯಲ್ಲೆಲ್ಲಾ ಕಂಡು ಬರುತ್ತದೆ. ಪೌಲನು ಕೊರಿಂಥದಲ್ಲಿದ್ದ ಕ್ರೈಸ್ತರನ್ನು, "ನೀವು ದೇವರ ಆಲಯವಾಗಿದ್ದೀರೆಂದೂ . . . ನಿಮಗೆ ಗೊತ್ತಿಲ್ಲವೋ?" ಎಂದು ಕೇಳಿದನು (1 ಕೊರಿಂಥ 3:16). ಅನಂತರದಲ್ಲಿ, ಆತನು ಹೀಗೆ ಹೇಳಿದನು, "ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ" (2 ಕೊರಿಂಥ 6:16). 1 ಕೊರಿಂಥ 3 ಮತ್ತು 2 ಕೊರಿಂಥ 6 ಅಧ್ಯಾಯಗಳಲ್ಲಿರುವ "ಆಲಯ" ವಾಕ್ಯಭಾಗಗಳು ಒಟ್ಟಾರೆ ಸಭೆಗೆ ಮತ್ತು ಸಭೆಯ ಅಂಗವಾಗಿರುವ ಪ್ರತಿಯೊಬ್ಬ ಸದಸ್ಯರಿಗೆ ಸಹ ಅನ್ವಯವಾಗುತ್ತದೆ. ಅಂಗಗಳು ಒಂದುಗೂಡಿದಾಗಲೇ ದೇಹವಾಗುತ್ತದಾದ್ದರಿಂದ, ಒಬ್ಬನು ಅಂಗಗಳಲ್ಲೊಬ್ಬನನ್ನು ಆಲಯವಾಗಿದ್ದಾನೆಂದು ಯೋಚಿಸಿದರೂ ಸರಿಯೇ ಅಥವಾ ಸಭೆಯಾಗಿದ್ದಾನೆಂದು ಯೋಚಿಸಿದರೂ ಸರಿಯೇ ಅದರಲ್ಲಿ ಯಾವ ವ್ಯತ್ಯಾಸವೂ ಇರುವದಿಲ್ಲ. ಎರಡೂ ಭಾವನೆಗಳು ಸತ್ಯವಾದವುಗಳೇ. ಎಫೆಸದಲ್ಲಿರುವ ಸಭೆಗೆ ಬರೆದ ತನ್ನ ಪತ್ರಿಕೆಯಲ್ಲಿ, ಪೌಲನು ರಕ್ಷಣೆ ಹೊಂದಿರುವವರ ಸಮೂಹವು "ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ" ಎಂದು ಹೇಳಿದನು (ಎಫೆಸ 2:21). ಪೌಲನ ಮಾತುಗಳಿಗೆ ಪೇತ್ರನು ಸಹಮತವನ್ನು ವ್ಯಕ್ತಪಡಿಸುತ್ತಾನೆ: "ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ" (1 ಪೇತ್ರ 2:5).

ಹೀಗಿರುವದರಿಂದ Kiddleನು ನಮ್ಮ ಗಮನಕ್ಕೆ ತರುವದೇನೆಂದರೆ, "ಯೆರೂಸಲೇಮಿನಲ್ಲಿರುವ ದೇವಾಲಯವಲ್ಲ, ಆದರೆ ನಂಬಿಗಸ್ತ ಕ್ರೈಸ್ತರಿಂದ ಕೂಡಿದ ಜೀವವುಳ್ಳ ಆಲಯವೇ - ಇದು ದೇವರ ಕಾಳಜಿಯ ಲಕ್ಷ್ಯವಾಗಿತ್ತು."[13] "ಈ ದೇವರ ಆಲಯ ಎಂಬುದು ನಿಜ ಸಭೆಗೆ ಸಂಕೇತವಾಗಿರುತ್ತದೆ" ಎಂದು William Hendriksenನು ಒತ್ತಿ ಹೇಳುತ್ತಾನೆ.[14] G. R. Beasley-Murray ಹೇಳಿದ್ದೇನೆಂದರೆ, ದೇವಾಲಯವು "ಕ್ರಿಸ್ತನ ಸಭೆಗೆ ಸಂಕೇತವಾಗಿರುತ್ತದೆ."[15]

ನಾವು ಮುಂದಕ್ಕೆ ಹೋಗುವ ವೇಳೆ ಗಮನಕ್ಕೆ ತಂದುಕೊಳ್ಳಬಹುದಾದದ್ದೇನೆಂದರೆ 11:1, 2ರಲ್ಲಿ ಉಲ್ಲೇಖಿಸಲ್ಪಟ್ಟಿರುವ ದೇವಾಲಯವು *ಭೂಮಿಯ ಮೇಲಿತ್ತು* ಎಂಬುದೆ; ಈ ವಚನಗಳು ಭೂಮಿಯ ಮೇಲೆಯೂ ಸಮುದ್ರದ ಮೇಲೆಯೂ ನಿಂತಿದ್ದ ದೇವದೂತನ ಕೈಯಿಂದ ಯೋಹಾನನು ಸುರುಳಿಯನ್ನು ತೆಗೆದುಕೊಂಡ ದರ್ಶನದ ಮುಂದುವರೆದ ಭಾಗವಾಗಿವೆ (10:8,

9). ಪ್ರಕಟನೆ ಪುಸ್ತಕವು "*ಪರಲೋಕ*ದಲ್ಲಿರುವ ದೇವಾಲಯ" ದ ಕುರಿತು ಸಹ ಮಾತಾಡುತ್ತದೆ (11:19; ಒತ್ತಿ ಹೇಳಿದ್ದು ನನ್ನದು; ನೋಡಿರಿ 14:17; 15:5; 16:17). ಸಭೆಯು ಈ ಭೂಮಿಯ ಮೇಲಿರುವ ದೇವರ ಆಲಯ ಎಂಬ ಭಾವನೆಯು ದೇವಾಲಯದಲ್ಲಿರುವ ಆಲಯದ ವಿಚಾರಕ್ಕೆ ತದ್ವಿರುದ್ಧವಾಗಿರುವದಿಲ್ಲ, ಆದರೆ ಅದಕ್ಕೆ ಪೂರಕವಾಗಿರುತ್ತದೆ. Batsell Barrett Baxterನು ದೇವರ ರಾಜ್ಯವನ್ನು ಎರಡು ಮಹಡಿಗಳುಳ್ಳ ಮನೆ ಎಂಬ ರೀತಿಯಲ್ಲಿ ಮಾತಾಡುತ್ತಾನೆ, ಸಭೆಯ ಕೆಳಮಹಡಿಯಲ್ಲಿ ಮತ್ತು ಪರಲೋಕವು ಮೇಲ್ಗಡೆಯ ಮಹಡಿ - ಎರಡು ರೀತಿಯ ಅಭಿವ್ಯಕ್ತಗಳುಳ್ಳ ಒಂದು ರಾಜ್ಯ. 11:1, 2ರಲ್ಲಿ, ದೇವಾಲಯದ ಭೂಲೋಕದ ಅಭಿವ್ಯಕ್ತ (ಸಭೆ); 11:19ರಲ್ಲಿ ಅದರ ಪರಲೋಕದ ಸಮರೂಪವನ್ನು ಕಾಣುತ್ತೇವೆ.

11:1, 2ರಲ್ಲಿನ ಆಲಯವು ಸಭೆ ಆಗಿರುವದಾದರೆ, ಅದನ್ನು *ಅಳತೆ ಮಾಡುವದರ* ಮಹತ್ವಪೂರ್ಣತೆಯು ಏನಾಗಿದೆ? ಹಳೆಯ ಒಡಂಬಡಿಕೆಯ ಹಲವಾರು ವಾಕ್ಯಭಾಗಗಳು ದೈವಿಕ "ಅಳೆಯುವಿಕೆ" ಬಗ್ಗೆ ಮಾತಾಡುತ್ತವೆ; ಆದರೆ ಪ್ರಕಟನೆ 11ನೇ ಅಧ್ಯಾಯವು ವಿಶೇಷವಾಗಿ ಯೆಹೆಜ್ಕೇಲ 40-43ರನ್ನು ಮನಸ್ಸಿನಲ್ಲಿ ಹೊಂದಿರುತ್ತದೆ, ಅಲ್ಲಿ ಪ್ರವಾದಿಯು ಕ್ರಿ.ಪೂ. 587ರಲ್ಲಿ ಹಳೆಯ ದೇವಾಲಯವು ನಾಶಗೊಂಡ ನಂತರದಲ್ಲಿನ ಹೊಸ ಆಲಯವನ್ನು ಅಳತೆ ಮಾಡುವ ದರ್ಶನವನ್ನು ಕಾಣುತ್ತಾನೆ (ನೋಡಿರಿ ಯೆಹೆಜ್ಕೇಲ 40:3-5). ಯೆಹೆಜ್ಕೇಲನ ದರ್ಶನದಲ್ಲಿ ಮಾಡಲಾಗುವ ಅಳತೆಯು ಅದು ದೇವಾಲಯದ ಮರುನಿರ್ಮಾಣವನ್ನು ನಿರೀಕ್ಷಿಸುತ್ತಿದ್ದ "ಪರಲೋಕದ ವಾಸ್ತುಶಿಲ್ಪದ ಸಮೀಕ್ಷೆಯ"[16] ಒಂದು ಭಾಗವಾಗಿತ್ತು. ಇದು ಯೆಹೆಜ್ಕೇಲನ ಪುಸ್ತಕದ ಸಂತೈಸಿಕೆಯ ವಿಭಾಗದ ಭಾಗವಾಗಿತ್ತು, ಅಲ್ಲಿ ಪ್ರವಾದಿಯು ಇಸ್ರಾಯೇಲ್ಯರಿಗೆ ದೇವರು ಅವರನ್ನು ಮರೆತು ಹೋಗಿಲ್ಲ ಮತ್ತು ಕ್ರಮೇಣದಲ್ಲಿ ಅವರನ್ನು ಸ್ವದೇಶಕ್ಕೆ ಮರಳುವಂತೆ ಮಾಡಿ ನೆಲೆಗೊಳಿಸುವನೆಂಬ ಭರವಸವನ್ನು ಕೊಡುತ್ತಾನೆ. ಯೆಹೂದ್ಯರು ಎಜ್ರನು ಮತ್ತು ನೆಹಮೀಯನ ಕಾಲದಲ್ಲಿ ಸೆರೆವಾಸದಿಂದ ಬಿಡುಗಡೆಗೊಂಡು ಹಿಂದಿರುಗಿ ಬಂದಾಗ ಆ ದೈವಿಕ ವಾಗ್ದಾನವು ನೆರವೇರಿತ್ತು.

ಯೆಹೆಜ್ಕೇಲನ ಪುಸ್ತಕದಲ್ಲಿರುವ ದೇವಾಯಲದ ಕುರಿತು ಕೆಲವು ಟಿಪ್ಪಣಿಗಳನ್ನು ಮಾಡುವದು ಸೂಕ್ತವಾಗಿರುತ್ತದೆ. ಈ ಮುಂಚೆ ಗಮನಕ್ಕೆ ತಂದುಕೊಳ್ಳಲ್ಪಟ್ಟ ಪ್ರಕಾರ, ಯೆರೂಸಲೇಮಿನಲ್ಲಿ ಶಾರೀರಿಕ ದೇವಾಲಯವು ಮರುನಿರ್ಮಾಣಗೊಳ್ಳುವದೆಂದು ಕೆಲವರು ವಾದ ಮಾಡುತ್ತಾರೆ - ಮತ್ತು ಯೆಹೆಜ್ಕೇಲ ದರ್ಶನವು ಅವರ ವಾದದಲ್ಲಿ ಒಂದು ಭಾಗವಾಗಿರುತ್ತದೆ. ವಾದವು ರೀತಿಯಲ್ಲಿ ಸಾಗುತ್ತದೆ: "ಹೆರೋದನ ದೇವಾಲಯವು ಸರಿಯಾಗಿ ಯೆಹೆಜ್ಕೇಲ ದರ್ಶನದಲ್ಲಿದ್ದ ದೇವಾಲಯದಂತೆಯೇ ಇರಲಿಲ್ಲ, ಆದ್ದರಿಂದ ಆ ಪ್ರವಾದನೆಯು ಇನ್ನೂ ನೆರವೇರಿರಲಿಲ್ಲ - ಆದರೆ ಒಂದು ದಿನ ಅದು ನೆರವೇರುವದು." ಇಲ್ಲಿ ಯೆಹೆಜ್ಕೇಲನ ದರ್ಶನ ಕುರಿತು ಸುದೀರ್ಘವಾಗಿ ಚರ್ಚಿಸುವದಕ್ಕೆ ಸಮಯವಾಗಲಿ ಸ್ಥಳಾವಕಾಶವಾಗಲಿ ಇರುವದಿಲ್ಲ, ಆದರೆ ಈ ಅಂಶಗಳನ್ನು ಆಲೋಚಿಸಿರಿ: (1) ಯೆಹೆಜ್ಕೇಲನ ಪುಸ್ತಕದಲ್ಲಿರುವ ಭಾಷೆಯು ಸಾಂಕೇತಿಕವಾಗಿದೆ ಮತ್ತು ಅದನ್ನು ಅಕ್ಷರಶಃ ಪರಿಗಣಿಸಿಕೊಳ್ಳಕೂಡದು. (2) ಅನಂತರದಲ್ಲಿ ಹೆರೋದನಿಂದ ವಿಸ್ತರಿಸಲ್ಪಟ್ಟ ಜೆರುಬ್ಬಾಬೆಲನ ದೇವಾಲಯವು ಆ ಪ್ರವಾದನೆಯ ಭಾಗಶಃ ನೆರವೇರಿಕೆಯಾಗಿತ್ತು, ಆದರೆ ಈ ವಾಕ್ಯಭಾಗವು ಅಂತಿಮವಾದ ನೆರವೇರಿಕೆಯನ್ನು ಸಭೆಯಲ್ಲಿ (ಭೂಲೋಕದ ಆತ್ಮೀಕ ದೇವಾಲಯ) ಮತ್ತು ಪರಲೋಕದಲ್ಲಿ (ಪರಲೋಕದ ದೇವಾಲಯ) ಕಾಣುತ್ತದೆ. (3) ಯೆರೂಸಲೇಮಿನಲ್ಲಿ ದೇವಾಲಯದ ರೀತಿಯ *ಯಾವದೇ* ಕಟ್ಟಡ ಆಗಲಿ ಕಟ್ಟಲ್ಪಟ್ಟರೂ ಸಹಸ್ರವರ್ಷಪೂರ್ವಾಡಳಿತ ವಾದಿಗಳಲ್ಲಿ ರೋಮಾಂಚನ ಉಂಟಾಗುವದು ಹೊಸದೇನಲ್ಲ - ಅದು ಅವರು ಯೆಹೆಜ್ಕೇಲನು

ದರ್ಶನದಲ್ಲಿನ ನಿಖರವಾದ ಅಂಶಗಳು ಅತ್ಯವಶ್ಯಕವೆಂದು ನಂಬುವದೇ ಇಲ್ಲ ಎಂಬುದನ್ನು ತೋರಿಸುತ್ತದೆ. ಈ ಅಸಾಮಂಜಸ್ಯತೆಯು ಹೆರೋದನ ದೇವಾಲಯವು ಯೆಹೆಜ್ಕೇಲನ ದರ್ಶನದಲ್ಲಿನ ಪ್ರತಿಯೊಂದು ಅಂಶಗಳನ್ನೂ ಒಳಗೊಂಡಿರಲಿಲ್ಲ ಎಂಬ ಅವರ ವಾದವನ್ನು ನಾಶಗೊಳಿಸುತ್ತದೆ.

ಯೆಹೆಜ್ಕೇಲನ ದರ್ಶನದಲ್ಲಿ *ಅಳತೆ ಮಾಡುವ* ಸಾದೃಶ್ಯಕ್ಕೆ ಮರಳಿ ಬರುವದಾದರೆ, Cairdನು ಹೀಗೆ ಹೇಳುತ್ತಾನೆ, "ಯೋಹಾನನು ಅಲ್ಲಿರುವ ಚಿತ್ರಣವನ್ನು ಬಳಸಿಕೊಳ್ಳುತ್ತಾನೆ, ಆದರೆ ಯಥಾರೀತಿಯ ಮಾಡುವ ಪ್ರಕಾರವೇ ಅದನ್ನು ತನ್ನ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಾನೆ"[17] ಇನ್ನೂ ನಿಖರವಾಗಿ ಹೇಳುವದಾದರೆ, ಪ್ರಕಟನೆಯನ್ನು ಕೊಡುವ ಕರ್ತನು ಅದನ್ನು ತನ್ನ ಸ್ವಂತ ಉದ್ದೇಶಗಳಿಗೆ ತಕ್ಕಂತೆ ಬಳಕೆ ಮಾಡಿಕೊಂಡನೆಂದು ಒಬ್ಬನು ಹೇಳತಕ್ಕದ್ದು. ಪ್ರಕಟನೆ 11ರಲ್ಲಿ ಅಳತೆ ಮಾಡುವದರ ಗುರಿ ಅಥವಾ ಉದ್ದೇಶವೇ*ನಾಗಿತ್ತು*? ಯೆಹೆಜ್ಕೇಲನ ಪುಸ್ತಕದಲ್ಲಿನ ಅಳತೆ ಮಾಡುವಿಕೆಯು *ಪುನಃಸ್ಥಾಪನೆಯನ್ನು* ನಿರೀಕ್ಷಿಸುವದಾಗಿತ್ತು, ಆದರೆ ಯೋಹಾನನ ದರ್ಶನದಲ್ಲಿ ಅಳತೆ ಮಾಡುವಿಕೆಯು *ಭದ್ರತೆಯನ್ನು* ನಿರೀಕ್ಷಿಸುವದಾಗಿತ್ತು.

ಪ್ರಕಟನೆ 11 ರಲ್ಲಿನ ಅಳೆಯುವಿಕೆಯು *ಭದ್ರತೆ*ಯನ್ನು ನಿರೀಕ್ಷಿಸುವದಾಗಿತ್ತದೆಂಬ ವಿಚಾರವು ಸನ್ನಿವೇಶದಲ್ಲಿ ಕಂಡು ಸೂಚಿತವಾಗಿರುತ್ತದೆ. "ಆಲಯದ ಹೊರಗಿರುವ ಅಂಗಳವನ್ನು ಅಳೆಯದೆ ಬಿಟ್ಟುಬಿಡು" ಎಂದು ಯೋಹಾನನಿಗೆ ಹೇಳಲಾಯಿತು. **ಬಿಟ್ಟುಬಿಡು** ಎಂಬುದನ್ನು ಅನುವಾದಿಸಿರುವ ಪದವು ತೆಗೆದುಕೊಳ್ಳಲ್ಪಟ್ಟಿರುವ ಗ್ರೀಕ್ ಶಬ್ದವೆಂದರೆ ἐκβάλλω (*ekballō*), ಇದರ ಅಕ್ಷರಶಃ ಅರ್ಥವು "ಓಡಿಸಿ ಬಿಡು" ಅಥವಾ "ಹೊರ ಹಾಕು" ಎಂದಾಗಿರುತ್ತದೆ. ಈ ಪದವು ಚಿತ್ರಾತ್ಮಕವಾಗಿ *ತಿರಸ್ಕಾರ*ದ ಭಾವನೆಯನ್ನು ವ್ಯಕ್ತಪಡಿಸುತ್ತದೆ. "ಅಳತೆ" ಮಾಡಲ್ಪಡದಿರುವದೆಂದರೆ ದೇವರಿಂದ ತಿರಸ್ಕರಿಸಲ್ಪಡುವದು ಎಂದಾಗಿತ್ತು. ಆದದರಿಂದ, "ಅಳತೆ" ಮಾಡಲ್ಪಡುವದೆಂದರೆ ದೇವರಿಂದ *ಅಂಗೀಕರಿಸಲ್ಪಡುವದು* ಎಂದಾಗಿದೆ. "ಅಳತೆಮಾಡಲ್ಪಡದಿರುವದು" ಎಂದರೆ ಕೇಡಿಗೊಳಗಾಗುವ ಸಂಭವತೆ ಹಾಗೂ ಭದ್ರತೆಯಿಲ್ಲದಿರುವಿಕೆ ಆಗಿತ್ತು, ಆದರೆ "ಅಳೆಯಲ್ಪಡುವದು" ಎಂದರೆ ಸುರಕ್ಷಿತವಾಗಿಯೂ ಭದ್ರತೆಯಿಂದಲೂ ಇರುವದಾಗಿತ್ತು.

ಹಾಗಾದರೆ ಒಂದು ಪ್ರಶ್ನೆಯು ಉದ್ಭವವಾಗುತ್ತದೆ: ಅಳತೆಯನ್ನು ಮಾಡುವದರ ಮಾನದಂಡವು ಯಾವುದು? ಸರಳವಾಗಿ ಹೇಳುವದಾದರೆ, "ದಂಡದಂತಿದ್ದ ಒಂದು ಅಳತೇ ಕೋಲು" ಯಾವದು (ವ. 1)? ಅಳತೆಯ ಮಾನದಂಡವು ದೇವರ ವಾಕ್ಯವೇ ಎಂಬುದನ್ನು ಬಹಳಷ್ಟು ಜನರನು ಒಪ್ಪಿಕೊಳ್ಳುತ್ತಾರೆ. ಯೇಸುವು ಹೀಗೆ ಹೇಳಿದನು, "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ; ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವದು" (ಯೋಹಾನ 12:48). ವಾಕ್ಯವು ನ್ಯಾಯತೀರ್ಪಿನ ದಿನದಂದು ಮಾನದಂಡವಾಗಿರುವದಾದಲ್ಲಿ, ಅದು ಈಗಲೂ ನಿಶ್ಚಯವಾಗಿ ಮಾನದಂಡವಾಗಿರುತ್ತದಷ್ಟೆ. Eldred Echolsನು ಅಳತೇ ಕೋಲನ್ನು "ಸತ್ಯದ ವಾಕ್ಯವೆಂದು, ಆತ್ಮೀಕ ಸಂಗತಿಗಳನ್ನು ಅಳೆಯುವದಕ್ಕೆ ಇರುವ ಏಕೈಕ ಮಾನದಂಡವಾಗಿದೆ"[18] ಎಂದು ಗುರುತಿಸುತ್ತಾನೆ. ಆತನು ಹೀಗೆ ಬರೆಯುತ್ತಾನೆ,

> ದೇವರು ಇಂದು ನಮಗೆ ವೈಯಕ್ತಿವಾಗಿ ನಿರ್ದೇಶನಗಳನ್ನಾಗಲಿ ಕೊಡುತ್ತಿಲ್ಲ ಅಥವಾ ಅಪೊಸ್ತಲರ ಮೂಲಕವಾಗಿ ನಮ್ಮ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವದನ್ನಾಗಲಿ

> ಮಾಡುತ್ತಿಲ್ಲ. ಆದ್ದರಿಂದ ಭೂಮಿಯ ಮೇಲೆ ದೇವರ ಆಲಯವನ್ನು ಕಟ್ಟುವದಕ್ಕೆ ನಮಗಿರುವ ಏಕೈಕ ನೀಲಿನಕ್ಷೆಯೆಂದರೆ ಅದು ಆತನ ಪ್ರೇರಿತವಾದ ವಾಕ್ಯವೇ. ಅದು ನಮಗೆ "ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲ" ವನ್ನೂ ಕೊಡುವದಾಗಿದೆ (2 ಪೇತ್ರ 1:3). ದೇವರು ಒಂದು ಗುಂಪಾಗಿಯೂ ವ್ಯಕ್ತಿಗತವಾಗಿಯೂ ತನ್ನ ಸಭೆ ಏನಾಗಿರಬೇಕೆಂದು ಬಯಸುತ್ತಾನೆ ಎಂಬುದನ್ನು ನಾವು ತಿಳಿಯುವದಕ್ಕೆ ಸಾಧ್ಯವಾಗುವ ಅಳತೇ ಕೋಲು ಬೈಬಲ್ ಆಗಿದೆ.[19]

ಜನರು ದೇವರ ಮಾನದಂಡಗಳಿಗೆ ತಕ್ಕಂತೆ "ಅಳತೆಗೆ ಬಂದಿರುತ್ತಾರೋ" ಎಂಬುದನ್ನು ಪರೀಕ್ಷಿಸುವ ಭಾವನೆಯು ಬೈಬಲಿನಲ್ಲಿರುತ್ತದೆ. ಬೇಲ್ಶಚ್ಚರನಿಗೆ ಆತನು "ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡು" ಬಂದಿದ್ದಾನೆಂದು ಹೇಳಲಾಯಿತು (ದಾನಿಯೇಲ 5:27). ಆಮೋಸನ ದಿನಗಳಲ್ಲಿ, ದೇವರು ತನ್ನ ಜನರನ್ನು ಪರೀಕ್ಷಿಸುವದಕ್ಕೆ ನೂಲುಗುಂಡಿಯನ್ನು ಬಳಸಿದನು (ಆಮೋಸ 7:7, 8). ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ, ಯೇಸುವು ಸಭೆಗಳ ಮಧ್ಯದಲ್ಲಿ ನಡೆದಾಡುತ್ತಾ ಪರೀಕ್ಷಿಸುತ್ತಿದ್ದನು (ಪ್ರಕಟನೆ 2:2, 19; 3:1, 8, 15); ಆತನ ಅನುಮೋದನೆಯನ್ನು ಪಡೆದುಕೊಳ್ಳುವವರು ಮಾತ್ರವೇ ಆಶೀರ್ವದಿಸಲ್ಪಡುವರು. ಈಗ, 11ನೇ ಅಧ್ಯಾಯದಲ್ಲಿ ದೇವರ ಜನರ ಮೇಲೆ ಒಂದು ಅಳತೇ ಕೋಲು ಬಳಸಲ್ಪಡುತ್ತಿದೆ. *ನಿಜವಾಗಿಯೂ* ಆತನವರಾಗಿರುವವರಿಗೆ ಮಾತ್ರವೇ ಭದ್ರತೆ ಒದಗಿಸಲ್ಪಡುವದು.

ಇನ್ನೊಂದು ಕಡೆಯಲ್ಲಿ, ಅಳತೆ ಮಾಡಲ್ಪಡದೆ ಇರುವಂಥದ್ದು ಕಾಪಾಡಲ್ಪಡುವದಿಲ್ಲ. ಅಳತೆ ಮಾಡಲ್ಪಡದ ಅಂಗಳವು ಅನ್ಯಜನಾಂಗಗಳಿಗೆ ಕೊಡಲ್ಪಟ್ಟದ್ದಾಗಿದ್ದು **ಅವರು ಪರಿಶುದ್ಧ ಪಟ್ಟಣವನ್ನು . . . ತುಳಿದಾಡುವರು** ಮತ್ತು, ಸೂಚ್ಯಾರ್ಥವಾಗಿರುವ ಪ್ರಕಾರ ಅದು ಅಂಗಳವಾಗಿರುತ್ತದೆ. "ತುಳಿದಾಡುವದು" ಅಂದರೆ ಧೊರೆತನ ಮಾಡುವದು, ವಿನಾಶಕ್ಕೊಳಪಡಿಸುವದು, ಮತ್ತು ನಾಶಗೊಳಿಸುವದು ಎಂದರ್ಥವಾಗಿದೆ. ಯೇಸುವು ಯೆರೂಸಲೇಮಿನ ಮೇಲೆ ಬರಲಿದ್ದ ನಾಶನದ ಕುರಿತು ಮುಂತಿಳಿಸಿದಾಗ, ಆತನು "ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವದು" ಎಂದು ಹೇಳಿದನು (ಲೂಕ 21:24). ಲೂಕ 21:24ರಲ್ಲಿನ "ಅನ್ಯದೇಶದವರು" ಎಂಬುದು ಪ್ರಕಟನೆ 11:2ರಲ್ಲಿ "ಅನ್ಯಜನರು" ಎಂಬುದಾಗಿ ಅನುವಾದಿಸಲ್ಪಟ್ಟಿರುವ ಅದೇ ಪದದಿಂದಲೇ ಬಂದದ್ದಾಗಿದೆ. Josephus[20] ಮತ್ತು ಇನ್ನು ಕೆಲವರಿಂದ ಬರೆಲ್ಪಟ್ಟಿರುವ ಯೆರೂಸಲೇಮಿನ ನಾಶನದ ಕುರಿತು ಕಥನವು "ತುಳಿದಾಡುವರು" ಎಂಬ ಪದಗಳ ಭಯಂಕರವಾದ ಸ್ವಭಾವದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅದೇ ರೀತಿಯ ಹೇಳಿಕೆಯೊಂದು ದಾನಿಯೇಲ 8:13ರಲ್ಲಿ ಕಂಡು ಬರುತ್ತದೆ, ಅದು "ಪವಿತ್ರಾಲಯವನ್ನೂ . . . ತುಳಿಯುವದು" ಎಂಬುದರ ಕುರಿತು ತಿಳಿಸುತ್ತದೆ. ದಾನಿಯೇಲ 8 ಹಾಗೂ ಲೂಕ 21 ಅಧ್ಯಾಯಗಳು ಶಾರೀರಿಕ ದೇವಾಲಯವನ್ನು ಸೂಚಿಸಿದರೆ, ಪ್ರಕಟನೆ 11ನೇ ಅಧ್ಯಾಯವು ಆತ್ಮಿಕ ದೇವಾಲಯವನ್ನು - ಸಭೆಯನ್ನು - ಕುರಿತು ಮಾತಾಡುತ್ತದೆ. ದಾನಿಯೇಲ 8ನೇ ಅಧ್ಯಾಯವು ದೇವಾಲಯವನ್ನು *ಹೊಲೆಮಾಡುವ* ಕುರಿತು ಮಾತಾಡುತ್ತದೆ; ಲೂಕ 21ನೇ ಅಧ್ಯಾಯವು ದೇವಾಲಯದ *ನಾಶನವನ್ನು* ಕುರಿತು ಮಾತಾಡುತ್ತದೆ; ಆದರೆ ಪ್ರಕಟನೆ 11ನೇ ಅಧ್ಯಾಯವು ದೇವರ ಆಲಯದ *ಭದ್ರತೆಯನ್ನು* ಕುರಿತು ಮಾತಾಡುತ್ತದೆ.

ಆದದರಿಂದ, ಪ್ರಕಟನೆ 11:1, 2ರ ಪ್ರಾಥಮಿಕ ಸಂದೇಶವು ಏನೆಂದರೆ ಮುಂದೆ ಬರುವ ಸಂಕಷ್ಟದ ಸಮಯಗಳಲ್ಲಿ *ಕರ್ತನು ತನ್ನ ಜನರನ್ನು ಕಾಪಾಡುವನು* ಎಂಬದೆ. ದೇವರ ಜನರ ಭದ್ರತೆಯು ಆರನೆಯ ಮತ್ತು ಏಳನೆಯ ತುತೂರಿಗಳ ನಡುವಿನ ವಿರಾಮ ಕಾಲದ ಸಂದೇಶವು ಸಹ ಆಗಿರುತ್ತದೆ, ಆಗ ಅಪೊಸ್ತಲನಾದ ಯೋಹಾನನು 144,000 ಜನರಿಗೆ ಮುದ್ರೆ

ಒತ್ತಲ್ಪಡುವದನ್ನು ಕಂಡನು (7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮುದ್ರೆ ಹಾಕುವದನ್ನು ಅಳತೆ ಮಾಡುವದರೊಂದಿಗೆ ಹೋಲಿಕೆ ಮಾಡುವದು ಆಸಕ್ತಿಕರವಾಗಿರುತ್ತದೆ: (1) *ಮುದ್ರೆ ಒತ್ತಲ್ಪಟ್ಟ* 144,000 ಮಂದಿಯು ಆತ್ಮೀಕ ಯೆಹೂದ್ಯರಾಗಿದ್ದರೆ (ಕ್ರೈಸ್ತರು), *ಅಳತೆ ಮಾಡಲ್ಪಟ್ಟದ್ದು* ಆತ್ಮೀಕ ಯೆಹೂದಿ ದೇವಾಲಯವಾಗಿತ್ತು (ಸಭೆ). (2) 144,000 ಮಂದಿಯು ಲೆಕ್ಕಿಸುವ ಮೂಲಕ ಅಳತೆ ಮಾಡಲ್ಪಟ್ಟರು; ದೇವಾಲಯವು ಕೋಲಿನಿಂದ ಅಳೆಯಲ್ಪಟ್ಟಿತು. (3) ಈ ಎರಡೂ ಸಂದರ್ಭಗಳಲ್ಲಿ, ಭದ್ರತೆಯು ಪ್ರಾಥಮಿಕ ಲಕ್ಷ್ಯವಾಗಿತ್ತು. ಕ್ರೈಸ್ತರು "ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗುವದಕ್ಕೆ" (ಕೊಲೊಸ್ಸೆ 4:12) ಕರ್ತನ ಭದ್ರತೆಯ ಕುರಿತ ಸಂದೇಶವು ಅವರಿಗೆ ಸತತ ಅಗತ್ಯವಿರುತ್ತದೆ.

ವಾಕ್ಯಭಾಗದ ಇನ್ನೊಂದು ಅಂಶವನ್ನು ಪರಿಗಣಿಸತಕ್ಕದ್ದು: ಜನಾಂಗಗಳು (ಅನ್ಯಜನರು) ಪರಿಶುದ್ಧ ಪಟ್ಟಣವನ್ನು **ನಾಲ್ವತ್ತೆರಡು ತಿಂಗಳು** ತುಳಿದಾಡುವರು. ನಾಲ್ವತ್ತೆರಡು ತಿಂಗಳುಗಳ ಸಾಂಕೇತಿಕತೆಯು ಸಂಕಷ್ಟದ ಸಮಯಗಳಲ್ಲಿ ಭದ್ರತೆ ಸಿಕ್ಕುವ ಭಾವನೆಯೊಂದಿಗೆ ಸಂಬಂಧ ಹೊಂದಿರುತ್ತದೆ. ಪಟ್ಟಣ ಮತ್ತು ಅಂಗಳ ಇವೆರಡು ನಾಲ್ವತ್ತೆರಡು ತಿಂಗಳುಗಳ ವೇಳೆ ಕಾಪಾಡಲ್ಪಡುವ*ದಿಲ್ಲ*, ಇದು ಒಂದು ಕಾಲದ ಮಟ್ಟಿಗೆ ದೇವಾಲಯವು ಕಾಪಾಡಲ್ಪ*ಡುವದಿಲ್ಲ* ಎಂಬದನ್ನು ಸೂಚಿಸುತ್ತದೆ. ಖಂಡಿತವಾಗಿಯೂ, ನಾಲ್ವತ್ತೆರಡು ತಿಂಗಳು ಎಂಬುದು ಅಕ್ಷರಶಃ ಕಾಲಾವಧಿಯನ್ನು ಪ್ರತಿನಿಧಿಸುವದಿಲ್ಲ, ಆದರೆ ಅದೊಂದು ಸಾಂಕೇತಿಕ ಅಂಕಿಯಾಗಿರುತ್ತದೆ. ಈ ಸಂಖ್ಯೆಯು ಪುಸ್ತಕದುದ್ದಕ್ಕೂ ವಿವಿಧ ರೂಪಗಳಲ್ಲಿ ಕಂಡು ಬರುತ್ತದೆ:[21]

"ಏಳು" ಸಂಪೂರ್ಣತೆಯನ್ನು ಪ್ರತಿನಿಧಿಸುತ್ತದಾದ್ದರಿಂದ "3½" ಸಂಖ್ಯೆಯು ಅಸಂಪೂರ್ಣತೆಯನ್ನು ಸೂಚಿಸುತ್ತದೆ. ಪ್ರಕಟನೆ ಪುಸ್ತಕದಲ್ಲಿ, "3½" ಸಾಮಾನ್ಯವಾಗಿ ಸಂಕಷ್ಟ, ಕಷ್ಟಗಳು, ಮತ್ತು ಪರಿಶೋಧನೆಯೊಂದಿಗೆ ಸಂಬಂಧ ಹೊಂದಿರುತ್ತದೆ, ಹಾಗಿದ್ದಾಗ್ಯೂ ಇದು ಮುಂದೆ ಒಂದು ಉತ್ತಮ ದಿನ ಬರುವದಿದೆ ಎಂಬ ಸುಳಿವು ಸಹ ನೀಡುವದಾಗಿದೆ. "3½"ರ ಭಾವನೆಯು ಪುಸ್ತಕದುದ್ದಕ್ಕೂ ಹಲವಾರು ವಿಧಗಳಲ್ಲಿ ವ್ಯಕ್ತಪಡಿಸಲ್ಪಟ್ಟಿರುತ್ತದೆ. ಮೊದಲನೆಯದ್ದೆಂದರೆ "ನಾಲ್ವತ್ತೆರಡು ತಿಂಗಳು" ಎಂಬ ಪದಗುಚ್ಛವು ನಮ್ಮ ವಾಕ್ಯಭಾಗದಲ್ಲಿ ಸಿಕ್ಕುತ್ತದೆ. ನಾಲ್ವತ್ತೆರಡು ತಿಂಗಳು ಎಂದರೆ 3½ ವರ್ಷಗಳಾಗಿದೆ. ವ್ಯಾಖ್ಯಾನ ಗ್ರಂಥಗಳು ಅಂದಾಜು 3½ ಗಳ ಕಾಲ ಮುಂದುವರೆಯುವಂಥ ವಿವಿಧ ಕಾಲಾವಧಿಗಳ ಪಟ್ಟಿಯನ್ನು ಒದಗಿಸುತ್ತವೆ, ಅವುಗಳು ನಾಲ್ವತ್ತೆರಡು ತಿಂಗಳುಗಳ ಸಾಂಕೇತಿಕೆಯೊಂದಿಗೆ ಸಂಬಂಧವನ್ನು ಹೊಂದಿರಬಹುದು ಅಥವಾ ಹೊಂದಿಲ್ಲದೆ ಇರಬಹುದಾಗಿದೆ: ಪ್ರವಾದಿಯಾದ ಎಲೀಯನು ನಾಲ್ವತ್ತೆರಡು ತಿಂಗಳುಗಳ ಕಾಲ ಪೋಷಿಸಲ್ಪಟ್ಟನು (1 ಅರಸು 17:1-16; ಲೂಕ 4:25; ಯಾಕೋಬ 5:17). ಚಿದ್ಕೀಯನ ಬಂಡಾಯದ ವಿರುದ್ಧ ಬಾಬೆಲಿನವರ ಪ್ರತಿಕ್ರಿಯೆಯು ಸುಮಾರು ನಾಲ್ವತ್ತೆರಡು ತಿಂಗಳುಗಳ ಕಾಲದ ವರೆಗೆ ಮುಂದುವರೆದಿತ್ತು (ಯೆರೆಮೀಯ 52). Antiochus Epiphanesನ ವಿರುದ್ಧವಾಗಿ ಮಕ್ಕಬಿಯರು ಎಬ್ಬಿಸಿದ ಬಂಡಾಯದಲ್ಲಿ, Antiochusನು ದೇವಾಲಯವನ್ನು ಹೊಲೆ ಮಾಡಿದ ಬಳಿಕ Judas Maccabeusನ ನಾಯಕತ್ವದಲ್ಲಿ ಅದನ್ನು ಶುದ್ಧೀಕರಿಸಿ ಮರುಸ್ಥಾಪನೆ ಮಾಡಿದ ನಡುವಿನ ಕಾಲಾವಧಿಯು ಸುಮಾರು ಮೂರು ವರ್ಷಗಳದ್ದಾಗಿತ್ತು. ರೋಮನ್ನರು ಯೆರೂಸಲೇಮಿಗೆ ಮುತ್ತಿಗೆ ಹಾಕಿದ್ದು ಸುಮಾರು ನಾಲ್ವತ್ತೆರಡು ತಿಂಗಳು ಕಾಲ ಮುಂದುವರೆದಿತ್ತು. ಹೇಗೂ, ನಾಲ್ವತ್ತೆರಡು ತಿಂಗಳುಗಳ ಕಾಲಾವಧಿಯನ್ನು - "ಇಡೀ ಕ್ರೈಸ್ತ ಯುಗ" ಸೇರಿದಂತೆ *ಯಾವದೇ* ಕಾಲಾವಧಿಯನ್ನು - ಅಕ್ಷರಶಃ ಎಂಬುದಾಗಿ ಯೋಚಿಸುವ ಅಪಾಯದ ಕುರಿತು ಎಚ್ಚರಿಕೆಯಿಂದಿರಬೇಕು.

"ನಾಲ್ವತ್ತೆರಡು ತಿಂಗಳು" ಎಂಬ ಪದಗುಚ್ಛವು 13:5ರಲ್ಲಿ ಸಹ ಕಂಡು ಬರುವದು, ಅಲ್ಲಿ ಸಮುದ್ರದೊಳಗಿಂದ ಬರುವ ಮೃಗಕ್ಕೆ "ನಾಲ್ವತ್ತೆರಡು ತಿಂಗಳ ಪರ್ಯಂತರ ತನ್ನ ಕಾರ್ಯವನ್ನು ನಡಿಸುವದಕ್ಕೆ ಅಧಿಕಾರ" ಕೊಡಲ್ಪಡುತ್ತದೆ ಅನೇಕ ಸಹಸ್ರವರ್ಷಪೂರ್ವಾಡಳಿತ ವಾದಿಗಳು 3½ ವರ್ಷಗಳ ಕಾಲವನ್ನು ಅಕ್ಷರಶಃಗೊಳಿಸುತ್ತಾರೆ, ಮತ್ತು ತರುವಾಯ ಪ್ರಕಟನೆ ಪುಸ್ತಕದಲ್ಲಿ ಎರಡು 3½ ವರ್ಷಗಳಿರುತ್ತವೆಂದು ವಾದಿಸುತ್ತಾರೆ: ಒಂದು ಕಾಲವು ಮೃಗವು ಬರುವದಕ್ಕೆ ಮುಂಚೆ ಮತ್ತು ಇನ್ನೊಂದು ಮೃಗವು ಬಯಲಿಗೆ ಬಂದ ಬಳಿಕ, ಹೀಗೆ ಒಟ್ಟು ಅವರ ಕಲ್ಪನಾತ್ಮಕವಾದ ಏಳು ವರ್ಷಗಳ ಸಂಕಷ್ಟಕಾಲ ಆಗುತ್ತದೆ. ಹೇಗೂ, ಎಲ್ಲಾ 3½ ವರ್ಷಗಳ ಉಲ್ಲೇಖನಗಳು ಸಾಂಕೇತಿಕವಾಗಿರುತ್ತವೆ ಮತ್ತು, ಎಲ್ಲವುಗಳೂ ಅದೇ ಕಾಲಘಟ್ಟವನ್ನು ಕುರಿತೇ ತಿಳಿಸುತ್ತವೆ.

ಪ್ರಕಟನೆ ಪುಸ್ತಕದಲ್ಲಿ 3½ ವನ್ನು ವ್ಯಕ್ತಪಡಿಸುವ ಇನ್ನೊಂದು ವಿಧವೆಂದರೆ "ಒಂದು ಸಾವಿರದ ಎರಡು ನೂರು ಅರವತ್ತು ದಿನಗಳು." "ಯೆಹೂದ್ಯರು ವರ್ಷಕ್ಕೆ 360 ದಿನಗಳ ಕಾಲ ಕೆಲಸ ಮಾಡುತ್ತಿದ್ದರು. (ಆತನು ಒಂದು ಅಧಿಕ ಮಾಸವನ್ನು - 2ನೇ ಆಧಾರ - ಆಯಾ ಕಾಲಘಟ್ಟದಲ್ಲಿ ಸೇರ್ಪಡೆಗೊಳಿಸಿ ಕ್ಯಾಲೆಂಡರ್‌ನ್ನು ಸೂರ್ಯಾಧಾರಿತ ವರ್ಷಗಳಿಗೆ ಸಮವಾಗಿ ತಂದನು)."[22] ತಿಂಗಳುಗಳನ್ನು ಮೂವತ್ತು ದಿನಗಳೊಂದರಂತೆ ಲೆಕ್ಕ ಹಾಕುವದಾದರೆ, 1260 ದಿನಗಳು ಹಾಗೂ ನಾಲ್ವತ್ತೆರಡು ತಿಂಗಳು, ಅಥವಾ 3½ ವರ್ಷಗಳು ಎಲ್ಲಾ ಒಂದೇ ಆಗಿವೆ. 11ನೇ ಅಧ್ಯಾಯದ ನಂತರದ ಭಾಗದಲ್ಲಿ, ಇಬ್ಬರು ಸಾಕ್ಷಿಗಳು "ಸಾವಿರದ ಇನ್ನೂರ ಅರವತ್ತು ದಿನಗಳ ತನಕ ಪ್ರವಾದಿಸುವರು" (ವ. 3). ಮುಂದಿನ ಅಧ್ಯಾಯದಲ್ಲಿ, ಸ್ತ್ರೀಯು "ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಪೋಷಣೆ" ಹೊಂದುವಳು (12:6).

"3½" ನ್ನು ವ್ಯಕ್ತಪಡಿಸುವ ವಿವಿಧ ದಾರಿಗಳ ವಿಷಯವಾಗಿ ನೋಡುವದಾದರೆ, ಅಲ್ಲೊಂದು ವಿಚಿತ್ರವಾದ ಪದಗುಚ್ಛವು ಸಹ ಇರುತ್ತದೆ "ಒಂದು ಕಾಲ ಎರಡು ಕಾಲ ಅರ್ಧ ಕಾಲ" (ನೋಡಿರಿ ದಾನಿಯೇಲ 7:25; 12:7). 12ನೇ ಅಧ್ಯಾಯದಲ್ಲಿ, 6ನೇ ವಚನವು ಸ್ತ್ರೀಗೆ "ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಪೋಷಣೆಯಾಗುವು" ಎಂದು ಹೇಳುತ್ತದೆ, ಅದೇ ವೇಳೆಯಲ್ಲಿ 14ನೇ ವಚನವು ಆಕೆಯು "ಒಂದು ಕಾಲ, ಎರಡು ಕಾಲ, ಅರ್ಧ ಕಾಲ" ಪೋಷಣೆ ಹೊಂದುವಳೆಂದು ಹೇಳುತ್ತದೆ. ಎರಡು ಪದಗುಚ್ಛಗಳು ಪರ್ಯಾಯವಾಗಿ ಬಳಸಲ್ಪಟ್ಟಿವೆಯಾದ್ದರಿಂದ, "ಒಂದು ಕಾಲ, ಎರಡು ಕಾಲ, ಅರ್ಧ ಕಾಲ" ಎಂಬ ಪದಗುಚ್ಛವು "ಸಾವಿರದ ಇನ್ನೂರ ಅರವತ್ತು ದಿನಗಳು" - ಅಥವಾ "3½ ವರ್ಷಗಳು" - ಎಂದು ಹೇಳುವ ಇನ್ನೊಂದು ರೀತಿಯಾಗಿದೆಯಷ್ಟೆ.

ಈಗಾಗಲೇ ತಿಳಿಸಿರುವ ಹಾಗೆ, ಪ್ರಕಟನೆ ಪುಸ್ತಕದಲ್ಲಿ "3½" ಎಂಬುದು ಸಾಮಾನ್ಯವಾಗಿ ಸಂಕಷ್ಟ, ಕಷ್ಟ, ಪರಿಶೋಧನೆ ಇವುಗಳೊಂದಿಗೆ ಸಂಬಂಧಗೊಳಿಸಲ್ಪಟ್ಟಿರುತ್ತದೆ. ಪ್ರಕಟನೆ ಪುಸ್ತಕದಿಂದ ಪ್ರಸ್ತಾಪಿಸಲಾಗಿರುವ ಪ್ರತಿಯೊಂದು ಉದಾಹರಣೆಗಳು ದೇವರ ಜನರಿಗೆ ಬರುವಂಥ ಸಂಕಷ್ಟ, ಕಷ್ಟ, ಮತ್ತು ಪರಿಶೋಧನೆಗಳೊಂದಿಗೆ ಸಂಬಂಧ ಹೊಂದಿವೆ: "ಪರಿಶುದ್ಧ ಪಟ್ಟಣವು" ತುಳಿದಾಡಲ್ಪಡುವದು (11:2), ಇಬ್ಬರು ಸಾಕ್ಷಿಗಳು ದ್ವೇಷದಿಂದ ಕೂಡಿದ ಜಗತ್ತನ್ನು ಎದುರಿಸಬೇಕಾಗಿ ಬರುವದು (11:3, 5), ಸ್ತ್ರೀಯು ಘಟಸರ್ಪನ ಕೋಪಕ್ಕೆ ತಪ್ಪಿಸಿಕೊಂಡು ಅಡಗಿಕೊಳ್ಳುವ ವೇಳೆ ಪೋಷಣೆ ಹೊಂದುವರು (12:13, 14), ಮತ್ತು ಕಾರ್ಯವನ್ನು ಮಾಡುವಂತೆ ಮೃಗಕ್ಕೆ ಅನುಮತಿ ಕೊಡಲ್ಪಡುವದು (13:5). ಹೇಗೂ, ಸಂಖ್ಯೆಗೆ ಒಂದು ಸಕಾರಾತ್ಮಕ ಮುಖವೂ ಇರುತ್ತದೆಂಬುದನ್ನು ಮರೆಯದಿರುವದು ಸಹ ಪ್ರಾಮುಖ್ಯವಾಗಿರುತ್ತದೆ. ಮೂರುವರೆ ಎಂಬುದು ಅಸಂಪೂರ್ಣವಾದದ್ದು; ಅದು

ಮಿತಿಯುಳ್ಳದ್ದು; ಅದು ಸದಾಕಾಲವೂ ಇರುವಂಥದ್ದಲ್ಲ. ಈ ಕಾರಣಕ್ಕಾಗಿ, ಈ ಪದದ ಬಳಕೆಯು "ನಾಳೆಗಾಗಿ ನಿರೀಕ್ಷೆ" ಇರುವದನ್ನು ಸೂಚಿಸುತ್ತದೆ.

Jim McGuigganನು "ನಾಲ್ವತ್ತೆರಡು ತಿಂಗಳು" ಅರ್ಥವನ್ನು ಸಾರಾಂಶಗೊಳಿಸುತ್ತಾ ಹೀಗೆ ಹೇಳುತ್ತಾನೆ, ಏನೆಂದರೆ "ಒಂದು ಕಾಲಾವಧಿಯ ಸಮಯವು, *ಒಂದು ಸ್ಥಿತಿಗತಿಯ ಕುರಿತು ಮಾತಾಡುತ್ತದೆ!* . . . ಅಲ್ಲಿ ದೇವಜನರು ಹಿಂಸೆಗೆ ಗುರಿಯಾಗಿರುತ್ತಾರೆ ಆದರೆ ಭದ್ರವಾಗಿ ಕಾಪಾಡಲ್ಪಡುವರು; ಅಲ್ಲಿ ಅವರು ಬಾಧೆಗೆ ಒಳಗಾಗಿರುತ್ತಾರೆ ಆದರೆ ಪೋಷಿಸಲ್ಪಡುವರು ಅಲ್ಲಿ ಅವರು ಕಿರುಕಳಕ್ಕೋಳಪಡಿಸಲ್ಪಡುತ್ತಾರೆ ಆದರೆ ಅವರು ಹಾಗಿದ್ದರೂ ಜಯಶಾಲಿಗಳಾಗುತ್ತಾರೆ!"[23] ಈ ವಿಧವಾಗಿ ಮುಕ್ತಾಯಕ್ಕೆ ಬರುವಂಥದು ಪ್ರಕಟನೆ 11:1, 2ರಲ್ಲಿ ಮೂಲಭೂತ ಸಂದೇಶದೊಂದಿಗೆ ಸಂಬಂಧ ಹೊಂದಿರುತ್ತದೆ: ದೇವರು ತನ್ನ ಜನರಿಗೆ ಆಶ್ರಯ ನೀಡಿ ಕಾಪಾಡುತ್ತಾನೆ ಎಂಬುದೆ.

11:1, 2ನ್ನು ಬಿಟ್ಟು ಮುಂದಕ್ಕೆ ಹೋಗುವ ಮುನ್ನ, ಸಂಪೂರ್ಣತೆಗೋಸ್ಕರವಾಗಿ, ಈ ವಾಕ್ಯಭಾಗದ ಅಂತಿಮ ಅಂಶದ ಕುರಿತು ಕೆಲವು ಕ್ಷಣಗಳನ್ನು ಕಳೆಯುವದು ಅಗತ್ಯವಾಗಿರುತ್ತದೆ. ಈ ವಾಕ್ಯಭಾಗದಲ್ಲಿ ಮೂರು ಭಿನ್ನವಾಗಿರುವ ಸ್ಥಳಗಳು ಪ್ರಸ್ತಾಪಿಸಲ್ಪಟ್ಟಿರುತ್ತವೆ: (1) ದೇವಾಲಯ, (2) ಅಂಗಳ, ಮತ್ತು (3) ಪಟ್ಟಣ. ದೇವಾಲಯವು ಸಭೆಯನ್ನು ಪ್ರತಿನಿಧಿಸುವದಾದರೆ, ಅಂಗಳ ಹಾಗೂ ಪಟ್ಟಣಗಳು ಯಾವದನ್ನು ಪ್ರತಿನಿಧಿಸುತ್ತವೆ? ಅಂಗಳವಾಗಲಿ ಅಥವಾ ಪಟ್ಟಣವಾಗಲಿ ಅಳತೆ ಮಾಡಲ್ಪಡಲಿಲ್ಲ; ಆದದರಿಂದ, ಇವುಗಳಲ್ಲಿ ಯಾವದಕ್ಕೂ ವಿಶೇಷವಾದ ಭದ್ರತೆಯು ಸಿಕ್ಕಲಿಲ್ಲ.

ಕೆಲವರು ಪಟ್ಟಣವನ್ನು *ಲೋಕ,* ಅವಿಶ್ವಾಸಿಗಳು ಆಗಿದ್ದು ಅವರ ಮೇಲೆ ಏಳು ಮುದ್ರೆಗಳ ಮತ್ತು ಏಳು ತುತೂರಿಗಳಿಂದ ಬರುವ ಬಹುಪಾಲು ನ್ಯಾಯತೀರ್ಪು ಬೀಳುತ್ತಿದೆ ಎಂಬುದಾಗಿ ಪರಿಗಣಿಸುತ್ತಾರೆ. ಈ ಊಹೆಯು ತಾರ್ಕಿಕವಾಗಿರುತ್ತದೆ, ಆದರೆ ಅಂಗಳವು ಯಾವದನ್ನು ಪ್ರತಿನಿಧಿಸುತ್ತದೆಂಬ ಒಗಟು ಹಾಗೆಯೇ ಉಳಿದುಕೊಳ್ಳುತ್ತದೆ. ಹೊಸ ಒಡಂಬಡಿಕೆಯು ಒಬ್ಬ ವ್ಯಕ್ತಿ ಇರಬೇಕಾದ ಸ್ಥಳಗಳು ಎರಡು ಮಾತ್ರವೇ ಎಂದು ಒತ್ತಿ ಹೇಳುತ್ತದೆ - ಸಭೆಯಲ್ಲಿ ಅಥವಾ ಲೋಕದಲ್ಲಿ (ನೋಡಿರಿ ಕೊಲೊಸ್ಸೆ 1:13). 11:1, 2ರಲ್ಲಿ, ದೇವಾಲಯವು ಸಭೆಯಾಗಿಯೂ ಪಟ್ಟಣವು ಲೋಕವಾಗಿಯೂ ಇರುವದಾದಲ್ಲಿ, ಅಂಗಳವು ಯಾವದನ್ನು ಪ್ರತಿನಿಧಿಸುವ ಸಾಧ್ಯತೆಯು ಇರುತ್ತದೆ?

ಅನೇಕ ವ್ಯಾಖ್ಯಾನಕಾರರು ಅಂಗಳದಲ್ಲಿ ಅರೆಹೃದಯವುಳ್ಳ ಹಾಗೂ ಸಮರ್ಪಣೆಯಿಲ್ಲದ ಜನರು ತುಂಬಿರುತ್ತಾರೆ ಎಂದು ಊಹೆ ಮಾಡುತ್ತಾರೆ - ಅಂದರೆ, "ಕಡಿಮೆಯಾಗಿ ಕಂಡು ಬರುವ" ಸಭೆಯ ಅಪನಂಬಿಗಸ್ತರಾದ ಸದಸ್ಯರು ಎಂಬುದೆ. ಈ ವ್ಯಾಖ್ಯಾನವು ಯೇಸುವಿನಿಂದ "ಕಡಿಮೆಯಾಗಿ" ಕಂಡು ಹಿಡಿಯಲ್ಪಟ್ಟಂಥ ಏಳು ಸಭೆಗಳಲ್ಲಿರುವವರಿಗೆ ಅಂಗಳದಲ್ಲಿರುವವನ್ನು ಸಮಾನಗೊಳಿಸುತ್ತದೆ:

> ಪೆರ್ಗಮದಲ್ಲಿನ ಬಿಳಾಮನ ಅಥವಾ ಥುವತ್ತೈರದಲ್ಲಿನ ಯೆಜೆಬೇಲಳ ಹಿಂಬಾಲಕರಾಗಿದ್ದಂಥ ಜನರು, ಅಥವಾ ಎಫೆಸದಲ್ಲಿದ್ದ ಪ್ರೀತಿಯಿಲ್ಲದ ಜನರು, ಸಾರ್ದಿಸಿನಲ್ಲಿದ್ದ ಆಲಸ್ಯ, ಅಪ್ರಾಮಾಣಿಕರಾಗಿದ್ದಂಥ, ಲವೊದಿಕೀಯದಲ್ಲಿದ್ದ ಆತ್ಮತೃಪ್ತ ಮತ್ತು ಸ್ವ - ಸಂತೃಪ್ತರಾಗಿದ್ದಂಥ ಜನರು - ಇವರೆಲ್ಲಾ ನಿಜವಾದ ಕ್ರೈಸ್ತರಾಗಿರಲಿಲ್ಲ.[24]

ಈ ಅರ್ಥನಿರೂಪಣೆಯನ್ನು ಇಂದಿನ ಸಭೆಗೆ ಅನ್ವಯಿಸುವದಾದರೆ, ಆ ಅಂಗಳದಲ್ಲಿರುವವರು "ಲೌಕಿಕ ಸಭಾ-ಸದಸ್ಯರು" ಆಗಿದ್ದು "ಅವರು ಲೋಕದ ವಿಚಾರಗಳಿಗೆ ಸ್ವಾಗತ ಮಾಡುವವರು; ಲೋಕದೊಂದಿಗೆ ಸಂಪೂರ್ಣ ಸಂಕೋಚವಿಲ್ಲದೆ ಜೀವಿಸುವವರು;

ಲೋಕದ ಸಹವಾಸದಲ್ಲಿ ಒಳ್ಳೇ ಸಂಭ್ರಮದ ಸಮಯವನ್ನು ಕಳೆಯುತ್ತಾರೆ; ರಾಜಕೀಯ ಹುದ್ದೆಗಳಿಗೆ ಚುನಾವಣೆ ನಡೆಯುವಾಗ ಇವರು ಲೌಕಿಕ ಹಿತಾಸಕ್ತಿಗಳಿಂದ ಪ್ರಚೋದಿಸಲ್ಪಟ್ಟ ಮತ ಹಾಕುತ್ತಾರೆ; ಲೋಕವನ್ನು ಪ್ರೀತಿಸುವವರಾಗಿದ್ದಾರೆ."[25] ಒಬ್ಬನು ದೇವರಿಗೆ ಸಮೀಪವಾಗಿ ಬರದೆ ಹೋದರೆ, ದೇವರ ಅವನ ಸಮೀಪಕ್ಕೆ ಬರುವದಿಲ್ಲ ಎಂಬುದು ನಿಶ್ಚಯವಾಗಿಯೂ ಸತ್ಯವಾದದ್ದು (ಯಾಕೋಬ 4:8). ಈ ಅರ್ಥನಿರೂಪಣೆಯ ದುರ್ಬಲಯೆಂದರೆ - ಅಥವಾ ಅಂಗಳವು ಏನನ್ನು ಪ್ರತಿನಿಧಿಸುತ್ತದೆಂಬುದನ್ನು ತಿಳಿಸುವ ಬೇರೆ ಯಾವದೇ ಅರ್ಥನಿರೂಪಣೆಯು - ಕೇವಲ ಒಂದು ವಿದ್ಯಾವಂತ ಕಲ್ಪನೆಯಾಗಿರುತ್ತದಷ್ಟೆ.

ಕೆಲವರು ಎಲ್ಲಾ ಮೂರು ಸ್ಥಳಗಳು - ದೇವಾಲಯ, ಅಂಗಳ, ಮತ್ತು ಪಟ್ಟಣ - ಸಭೆಯನ್ನು ಸೂಚಿಸುತ್ತವೆಂದು ಹೇಳುತ್ತಾರೆ. ಈ ಅರ್ಥನಿರೂಪಣೆಯ ಪ್ರಕಾರವಾಗಿ, ದೇವಾಲಯವು ಸಭೆಯ ವಿಷಯದಲ್ಲಿ ದೇವರು ಏನನ್ನು ಕಾಪಾಡು*ವನು ಎಂಬುದನ್ನು* ಪ್ರತಿನಿಧಿಸಿದರೆ, ಅಂಗಳ ಮತ್ತು ಪಟ್ಟಣಗಳು ದೇವರು ತನ್ನ ಜನರನ್ನು ಯಾವದರಿಂದ ಕಾಪಾಡುವ*ದಿಲ್ಲವೋ* ಅದನ್ನು ಪ್ರತಿನಿಧಿಸುತ್ತದೆ ಎಂಬುದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ದೇವಾಲಯವು ದೇವರು ಕಾಪಾಡುವ *ಆಂತರ್ಯವನ್ನು* ಪ್ರತಿನಿಧಿಸಿದರೆ, ಅಂಗಳ ಮತ್ತು ಪಟ್ಟಣಗಳು ದೇವರು ಕಾಪಾಡದಂಥ *ಬಾಹ್ಯ ಶರೀರವನ್ನು* ಪ್ರತಿನಿಧಿಸುತ್ತವೆ.[26] ಈ ಅರ್ಥನಿರೂಪಣೆಯನ್ನು ಮುಂಚಿನ ಅರ್ಥನಿರೂಪಣೆಯಷ್ಟು ಸುಲಭವಾಗಿ ಗ್ರಹಿಸಿಕೊಳ್ಳಲಾಗುವದಿಲ್ಲ, ಆದರೆ ಇದು ತನ್ನದೆ ಆಗಿರುವ ಸಾಮರ್ಥ್ಯಗಳನ್ನು ಹೊಂದಿದೆ. ಉದಾಹರಣೆಗೆ, ಈ ಅಭಿಪ್ರಾಯವು ಭದ್ರತೆ ಹಾಗೂ ಬಾಧೆಗಳೆರಡನ್ನೂ ಒಂದುಗೂಡಿಸುತ್ತದೆ (7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ಕ್ರೈಸ್ತತ್ವದ ಕಹಿಸಿಹಿ ಸ್ವಭಾವವನ್ನು ಒತ್ತಿ ಹೇಳುತ್ತದೆ (10:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒಂದು ಸಾಮರ್ಥ್ಯ *ಮತ್ತು* ದುರ್ಬಲತೆ ಏನೆಂದರೆ ಈ ಅಭಿಪ್ರಾಯವು "ಪರಿಶುದ್ಧ ಪಟ್ಟಣ" ವನ್ನು ಒಂದು ಸಭೆಯ ಪ್ರತಿರೂಪವಾಗಿ ಮಾಡುತ್ತದೆ. ಇದನ್ನು ಒಂದು ಸಾಮರ್ಥ್ಯವೆಂದು ಪರಿಗಣಿಸಬಹುದು ಯಾಕೆಂದರೆ ಶಾರೀರಿಕ ಯೆರೂಸಲೇಮ್ ಇನ್ನು ದೇವರ ಯೋಜನೆಗಳ ಹಾಗೂ ಉದ್ದೇಶಗಳ ಭಾಗವಾಗಿ ಉಳಿದಿರುವದಿಲ್ಲ, "ಮೇಲಣ ಯೆರೂಸಲೇಮ್" ಆ ಸ್ಥಾನವನ್ನು ಹೊಂದಿರುತ್ತದೆ (ಗಲಾತ್ಯ 4:26; ನೋಡಿರಿ ಇಬ್ರಿಯ 12:22). ಇನ್ನೊಂದು ಕಡೆಯಲ್ಲಿ, 8ನೇ ವಚನದ "ಮಹಾ ಪಟ್ಟಣ" ವು ಇದೇ ಪಟ್ಟಣವನ್ನು ಸೂಚಿಸಿ ಹೇಳುತ್ತಿರುವದಾದಲ್ಲಿ ಇದು ನಿಶ್ಚಯವಾಗಿಯೂ ಒಂದು ದುರ್ಬಲತೆಯೇ. 8ನೇ ವಚನ "ಮಹಾ ಪಟ್ಟಣ" ವು ಬಾಬೆಲಿಗೆ/ರೋಮ್ ನಗರಕ್ಕೆ ಸೂಚನೆಯಾಗಿದೆ - ಹೊರತು ಸಭೆಯನ್ನು ಸೂಚಿಸುವದಿಲ್ಲ (ವ. 8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಬಹುಶಃ ಅಂಗಳ ಮತ್ತು ಪಟ್ಟಣಗಳ ನಡುವೆ ಯಾವದೇ ವಿಧವಾದ ಭಿನ್ನತೆಯನ್ನೂ ಮಾಡಕೂಡದೆಂದು ತೋರುತ್ತದೆ, ಯಾಕೆಂದರೆ ಇವುಗಳು ಯಾವದೇ ಪರಿಣಾಮಗಳಿಲ್ಲದ ಅಂಗಳಾಗಿವೆ. ಯಾವ ವಿಧದಲ್ಲಿ ನೋಡಿದಾಗ್ಯೂ, 1 ಮತ್ತು 2 ವಚನಗಳ ಸಂದೇಶವನ್ನು ಗ್ರಹಿಸಿಕೊಳ್ಳುವದಕ್ಕೆ ಅಂಗಳವನ್ನು ನಿಖರವಾಗಿ ಗುರುತು ಹಿಡಿಯುವದು ಅತ್ಯಾವಶ್ಯಕವಾಗಿರುವದಿಲ್ಲ: (1) ದೇವರು ತನ್ನ ಜನರನ್ನು ಕಾಪಾಡುವೆನೆಂದು ವಾಗ್ದಾನ ಮಾಡಿದ್ದಾನೆ; (2) ಅವರು ಕಾಪಾಡಲ್ಪಡುವ ಮುಂಚೆ, ಅವರು ದೈವಿಕ ಮಾನದಂಡದಿಂದ "ಅಳತೆ ಮಾಡಲ್ಪಡುವದು" ಅಗತ್ಯವಾಗಿರುತ್ತದೆ.

## ಇಬ್ಬರು ಸಾಕ್ಷಿಗಳು ಪ್ರವಾದಿಸುವರು (11:3-6)

**[3]ಇದಲ್ಲದೆ ನನ್ನ ಇಬ್ಬರು ಸಾಕ್ಷಿಗಳು ಗೋಣೀತಟ್ಟುಗಳನ್ನು ಹೊದ್ದುಕೊಂಡು ಸಾವಿರದ ಇನ್ನೂರ ಅರವತ್ತು ದಿನಗಳ ತನಕ ಪ್ರವಾದಿಸುವ ಹಾಗೆ ಮಾಡುವೆನು. [4]ಭೂಲೋಕದ ಒಡೆಯನ ಮುಂದೆ ನಿಂತಿರುವ ಎಡರು ಎಣ್ಣೆಯ ಮರಗಳೂ ಎರಡು ದೀಪ ಸ್ತಂಭಗಳೂ ಇವರೇ. [5]ಇವರಿಗೆ ಯಾವನಾದರೂ ಕೇಡನ್ನುಂಟುಮಾಡಬೇಕೆಂದಿದ್ದರೆ ಇವರ ಬಾಯೊಳಗಿಂದ ಬೆಂಕಿ ಹೊರಟು ಇವರ ಶತ್ರುಗಳನ್ನು ದಹಿಸಿ ಬಿಡುವದು; ಇವರಿಗೆ ಯಾವನಾದರೂ ಕೇಡನ್ನುಂಟುಮಾಡಬೇಕೆಂದಿದ್ದರೆ ಅವನಿಗೆ ಈ ರೀತಿಯಾಗಿ ಕೊಲೆಯಾಗಬೇಕು. [6]ತಾವು ಪ್ರವಾದಿಸುವ ದಿನಗಳಲ್ಲಿ ಮಳೆಬೀಳದಂತೆ ಆಕಾಶವನ್ನು ಮುಚ್ಚುವ ಅಧಿಕಾರ ಇವರಿಗೆ ಉಂಟು. ಇದಲ್ಲದೆ ಇವರಿಗೆ ಇಷ್ಟಬಂದಾಗಲೆಲ್ಲಾ ನೀರು ರಕ್ತವಾಗುವಂತೆ ಮಾಡುವದಕ್ಕೂ ಸಕಲ ವಿಧವಾದ ಉಪದ್ರವಗಳಿಂದ ಭೂಮಿಯನ್ನು ಪೀಡಿಸುವದಕ್ಕೂ ಅಧಿಕಾರವುಂಟು.**

ಅಧ್ಯಾಯವು ಇಬ್ಬರು ಸಾಕ್ಷಿಗಳ ಕಥೆಯೊಂದಿಗೆ ಮುಂದುವರೆಯುತ್ತದೆ. ಸಾಲು ಸಾಲಾದ ದೃಶ್ಯಗಳು ಪ್ರಕಟನೆ ಪುಸ್ತಕದಲ್ಲಿರುವ ವಿಜಯದ ಮೂರು ವಿಧದ ಸಂದೇಶವನ್ನು ದೃಷ್ಟಾಂತಪಡಿಸುತ್ತವೆ: (1) ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟ, (2) ಒಳ್ಳೇದು ಸೋಲುತ್ತಿರುವಂತೆ ಕಾಣಿಸುವದು, ಮತ್ತು (3) ಒಳ್ಳೇದಕ್ಕೆ ಅಂತಿಮವಾಗಿ ಸಿಕ್ಕುವ ಜಯ.

**ವಚನ 3.** ವಾಣಿಯು ಯೋಹಾನನಿಗೆ ಹೀಗೆ ಹೇಳಿತು, **ಇದಲ್ಲದೆ ನನ್ನ ಇಬ್ಬರು ಸಾಕ್ಷಿಗಳಿಗೆ** ಅಧಿಕಾರವನ್ನು ಕೊಡುವೆನು ಎಂದು ಹೇಳಿತು. ಇಬ್ಬರು ಸಾಕ್ಷಿಗಳು ಯಾವ ಮುನ್ನೆಚ್ಚರಿಕೆಯನ್ನು ಕೊಡದೆಯೇ ಕಥೆಯೊಳಗೆ ಕಾಣಿಸಿಕೊಳ್ಳುತ್ತಾರೆ. ದೇವಾಲಯವನ್ನು ಅಳತೆ ಮಾಡುವಂತೆ ಯೋಹಾನನಿಗೆ ಅಪ್ಪಣೆ ಕೊಟ್ಟ ಬಳಿಕ, ಇಬ್ಬರು ಸಾಕ್ಷಿಗಳು ಏಕಾಏಕಿ ಪ್ರಮುಖ ವೇದಿಕೆಯನ್ನು ಕಾಲಿಡುತ್ತಾರೆ. ಅವರ ಕಾಣಿಸಿಕೊಳ್ಳುವಿಕೆಯು ಹೊಸ ದೃಶ್ಯದ ಭಾಗವಾಗಿರುವದಿಲ್ಲ, ಆದರೆ ಹಳೆಯ ದೃಶ್ಯದ ಮುಂದುವರೆದ ಭಾಗವಾಗಿದೆ. 3ನೇ ವಚನವು **ಇದಲ್ಲದೆ** ಎಂಬ ಪದದಿಂದ ಆರಂಭಗೊಳ್ಳುತ್ತದೆ, ಅದನ್ನು ಹೀಗೆ ಹಿಂದಿನ ವಚನಗಳೊಂದಿಗೆ ಜೋಡಿಸುತ್ತದೆ.

ಯೋಹಾನನಿಗೆ ಅಳತೆ ಮಾಡುವಂತೆ ಆಜ್ಞಾಪಿಸಿದ್ದ ವಾಣಿಯು ಮಾತಾಡುವದನ್ನು ಮುಂದುವರೆಸುತ್ತದೆ. **ಅಧಿಕಾರ** ("ಶಕ್ತಿ," KJV) ಎಂಬ ಪದವು ಅನುವಾದಕರಿಂದ ಸೇರ್ಪಡೆಗೊಳಿಸಿದ್ದಾಗಿದೆ. ಮೂಲ ಗ್ರೀಕ್ ವಾಕ್ಯವು ಕೇವಲ "ನಾನು ನನ್ನ ಇಬ್ಬರು ಸಾಕ್ಷಿಗಳಿಗೆ ಕೊಡುವೆನು" ಎಂದಷ್ಟೆ ಹೇಳುತ್ತದೆ. ಈ ಮಾತುಗಳು *ದೇವರು* ಅಧಿಕಾರದಲ್ಲಿದ್ದಾನೆ ಎಂಬುದನ್ನು ಒತ್ತಿ ಹೇಳುತ್ತವೆ.

ಇಬ್ಬರು ಸಾಕ್ಷಿಗಳು **ಪ್ರವಾದಿಸುವ**ವರಾಗಿದ್ದರು, ಅಂದರೆ ಅವರು ದೇವರಿಗೋಸ್ಕರ ಮಾತಾಡುವವರಾಗಿದ್ದರು. ಅವರು ಕಣ್ಣಾರೆ ಕಂಡದ್ದರ ಕುರಿತಾಗಿ ತನ್ನ "ಸಾಕ್ಷಿ" (μαρτυρία, *marturia*) ಹೇಳುವ ಮೂಲಕ ಸಾಕ್ಷಿಗಳಾಗಿ ಸೇವೆ ಮಾಡಲಿದ್ದರು (ವ. 7). Kiddleನು ಗಮನಕ್ಕೆ ತರುವದೇನೆಂದರೆ "ಸಾಕ್ಷಿ" ಎಂಬುದು "ಒಂದು ರೀತಿಯ ಮಂದವಾದ ಸ್ವಾದವನ್ನು ಹೊಂದಿದ್ದು ಅದು ಆಂಗ್ಲದಲ್ಲಿ ಕಳೆದು ಹೋಗಿರುತ್ತದೆ."[27] ಅದು "ರಕ್ತಸಾಕ್ಷಿ" ಎಂಬ ಪದವು ಬರುವಂಥ ಪದದೊಂದಿಗೆ ಸಂಬಂಧ ಹೊಂದಿದ್ದು, ಅದು ಒಂದು ಧ್ಯೇಯಕ್ಕಾಗಿ ಒಬ್ಬನ ಪ್ರಾಣವನ್ನು ತ್ಯಾಗ ಮಾಡುವದು ಎಂಬ ಅರ್ಥವನ್ನು ಕೊಡುತ್ತದೆ.

ವಾಕ್ಯಭಾಗವು ಇಬ್ಬರು ಸಾಕ್ಷಿಗಳು ನೀಡುವ ಸಾಕ್ಷಿಯಲ್ಲಿರುವ ಅಂಶವು ಏನೆಂದು ತಿಳಿಸುವದಿಲ್ಲ, ಆದರೆ ಪ್ರಕಟನೆ ಪುಸ್ತಕವು ಅನೇಕ ಸಾರಿ "ಯೇಸುವಿನ ಸಾಕ್ಷಿ" ಕುರಿತಾಗಿ ಮಾತಾಡುತ್ತದೆ (1:2, 9; 12:17; 19:10; 20:4) - ಅಂದರೆ, "[ಯೇಸು] ದೇವರ ವಾಕ್ಯದ

ಅಥವಾ ಆಜ್ಞೆಗಳ ಕುರಿತು ತನ್ನ ಜೀವನ, ಉಪದೇಶ, ಮತ್ತು ಮರಣದಲ್ಲಿ ತೋರಿದ ಸಾಕ್ಷಿಯೇ."[28] ಇಬ್ಬರು ಸಾಕ್ಷಿಗಳು ಯೇಸು ಸಾರಿದ ಅದೇ ಸಂದೇಶವನ್ನೇ ಸಾರುವರು. ಅವರ ಸಂದೇಶವು ಸುವಾರ್ತೆಯ ಶುಭಸುದ್ದಿಯನ್ನು ಒಳಗೊಂಡಿರಬಲ್ಲದು, ಆದರೆ ಅದರಲ್ಲಿ ಸುವಾರ್ತೆಯನ್ನು ತಿರಸ್ಕರಿಸಿದವರಿಗೆ ಬಲವಾದ ಖಂಡನೆ ಸಹ ಸೇರಿತ್ತೆಂಬುದನ್ನು ಸನ್ನಿವೇಶವು ಸೂಚಿಸುತ್ತದೆ (ವ. 10; ನೋಡಿರಿ 14:7, 9-11). ಯೇಸುವು "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು" ಎಂದು ಹೇಳಿದ ವೇಳೆ, ಆತನು "ನಂಬದೆ ಹೋಗುವವನು *ದಂಡನೆಗೆ ಗುರಿಯಾಗುವನು*" ಎಂದು ಸೇರ್ಪಡೆಗೊಳಿಸಿದ್ದನು (ಮಾರ್ಕ 16:16; ಒತ್ತಿ ಹೇಳಿದ್ದು ನನ್ನದು).

ಇಬ್ಬರು ಸಾಕ್ಷಿಗಳು **ಸಾವಿರದ ಇನ್ನೂರ ಅರವತ್ತು ದಿನಗಳ** ತನಕ ಪ್ರವಾದಿಸುವರು. "ಸಾವಿರದ ಇನ್ನೂರ ಅರವತ್ತು ದಿನಗಳು" ಎಂಬ ಸಾಂಕೇತಿಕ ಅಂಕತಿಯು ನಾಲ್ವತ್ತೆರಡು ತಿಂಗಳುಗಳ ರೀತಿಯಲ್ಲಿಯೇ ಆಗಿದ್ದು, ಅದು 3½ ವರ್ಷಗಳಾಗಿದೆ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಾಕ್ಷಿ ನೀಡುವದು ಅನುದಿನದ ಪ್ರಕ್ರಿಯೆಯಾಗಿರುವದರಿಂದ "ತಿಂಗಳು" (ವ. 2) ಬದಲಾಗಿ **ದಿನಗಳು** ಪ್ರಸ್ತಾಪಿಸಲ್ಪಟ್ಟಿರಬಹುದೆಂದು ಅಭಿಪ್ರಾಯ ಪಡಲಾಗುತ್ತದೆ. ಸಾಕ್ಷಿಗಳು ಪ್ರವಾದಿಸಿದ ಕಾಲಾವಧಿ ಮತ್ತು ಅಂಗಳ ಹಾಗೂ ಪಟ್ಟಣಗಳು ಅನ್ಯಜನರಿಂದ (ವ. 2) ತುಳಿದಾಡಲ್ಪಡುವ ಕಾಲಾವಧಿಯಷ್ಟೇ ಆಗಿರುತ್ತದೆಂಬುದನ್ನು ಗಮನಿಸುವದು ಆಸಕ್ತಿಯನ್ನು ಕೆರಳಿಸುತ್ತದೆ. ಸಂಕಷ್ಟದ ಸಮಯಗಳ ವೇಳೆಯಲ್ಲಿ, ದೇವರು ತನ್ನ ಜನರನ್ನು ಮರೆಯಾಗಿ ಇಡಲಿಲ್ಲ; ಆತನು ತನ್ನ ಸಾಕ್ಷಿಗಳನ್ನು ಕಳುಹಿಸಿ ಕೊಟ್ಟನು.

ಸಾಕ್ಷಿಗಳು **ಗೋಣೀತಟ್ಟುಗಳನ್ನು ಹೊದ್ದುಕೊಂಡಿದ್ದರು. ಗೋಣೀತಟ್ಟು** ಒರಟಾದ ಬಟ್ಟೆಯಾಗಿದ್ದು, ಸಾಮಾನ್ಯವಾಗಿ ಅದು ಪ್ರಾಣಿಗಳ ಕೂದಲುಗಳಿಂದ ತಯಾರಿಸಲ್ಪಟ್ಟಿರುತ್ತಿತ್ತು. ಪಾಪ ಅಥವಾ ಮರಣ ಸಂಭವಿಸಿದಾಗ ಶೋಕವನ್ನು ಆಚರಿಸುವವರು ಅದನ್ನು ಹೊದ್ದುಕೊಳ್ಳುತ್ತಿದ್ದರು (ಯೆಶಾಯ 22:12; ಯೆರೆಮೀಯ 4:8; ಯೋನ 3:5; ಮತ್ತಾಯ 11:21) ಮತ್ತು ಅದು ಪ್ರವಾದಿಗಳು ರೂಢಿಯಾಗಿ ಧರಿಸುತ್ತಿದ್ದ ತೊಡಿಗೆಯಾಗಿತ್ತು (2 ಅರಸು 1:8, NIV; ಯೆಶಾಯ 20:2; ಜೆಕರ್ಯ 13:4; ಮತ್ತಾಯ 3:4). ಇದು ಪಾಪಭರಿತ ಮನುಷ್ಯರನ್ನು ಪಶ್ಚಾತ್ತಾಪ ಪಡುವಂತೆ ಕರೆ ನೀಡುವವು ಧರಿಸುವದಕ್ಕೆ ಸೂಕ್ತವಾಗಿದ್ದ ಉಡಿಗೆಯಾಗಿತ್ತು. ಇದು ದೇವರ ಜನರು ಆತನ ಸಂದೇಶವನ್ನು ಪ್ರಚುರಪಡಿಸುವದಕ್ಕಾಗಿ ಅನುಭವಿಸಬೇಕಾದ ಕಷ್ಟಗಳನ್ನು ಸಂಕೇತಿಸುವದಾಗಿದೆ. Leon Morrisನು ಹೇಳಿದ್ದೇನೆಂದರೆ, "ಒಂದು ಸುಖವಾಗಿರುವ . . . ಸಭೆಯು ಲೋಕವನ್ನು ರಕ್ಷಣೆಯ ಕಡೆಗಾಗಲಿ ಅಥವಾ ವಿರೋಧ ಮಾಡುವಂತೆ ಆಗಲಿ ಪ್ರಚೋದಿಸುವದಕ್ಕೆ ಶಕ್ತಿಯಿಲ್ಲದ್ದಾಗಿದೆ."[29]

**ವಚನ 4.** ಇಬ್ಬರು ಸಾಕ್ಷಿಗಳು **ಭೂಲೋಕದ ಒಡೆಯನ ಮುಂದೆ ನಿಂತಿರುವ ಎರಡು ಎಣ್ಣೆಯ ಮರಗಳೂ ಎರಡು ದೀಪಸ್ತಂಭಗಳೂ** ಎಂದು ಬಣ್ಣಿಸಲ್ಪಟ್ಟಿದ್ದಾರೆ. **ಭೂಲೋಕದ ಒಡೆಯನು** ಎಂಬ ಪದಗುಚ್ಛವು ಆತನು ಸಮಸ್ತವನ್ನೂ ನಿಯಂತ್ರಿಸುವವನಾಗಿದ್ದಾನೆಂಬುದನ್ನು ಒತ್ತಿ ಹೇಳುತ್ತದೆ. ಆತನ **ಮುಂದೆ ನಿಂತಿರು**ವದು ಎಂದರೆ ಆತನ ಚಿತ್ತವನ್ನು ಮಾಡುವದಕ್ಕೆ ಸಿದ್ಧವಾಗಿರುವದು ಎಂದರ್ಥವಾಗಿದೆ.

ಆದಿ ಕ್ರೈಸ್ತರು 4ನೇ ವಚನದ ಮಾತುಗಳನ್ನು ಜೆಕರ್ಯನ ಪುಸ್ತಕದಿಂದ ಆಯ್ದುಕೊಂಡವುಗಳೆಂದು ಗುರುತಿಸಿರಬಹುದಾಗಿದೆ. ಪ್ರವಾದಿಯು ಹೀಗೆ ಬರೆದನು:

> ಏನು ನೋಡುತ್ತೀ ಎಂದು ಕೇಳಲು ನಾನು - ಇಗೋ, ಏಳು ದೀಪಗಳುಳ್ಳ ಸುವರ್ಣಮಯವಾದ ಒಂದು ದೀಪಸ್ತಂಭವನ್ನು ನೋಡುತ್ತೇನೆ; ಅದರ ಮೇಲಿನ ದೀಪಗಳಿಗೆ

> ಏಳು ನಾಳಗಳಿವೆ; ಅದರ ಮೇಲ್ಗಡೆ ಎಣ್ಣೆಯ ಪಾತ್ರೆಯಿದೆ; ಆ ಪಾತ್ರೆಯ ಬಲಗಡೆಯಲ್ಲಿ ಒಂದು ಎಣ್ಣೆಯ ಮರ, ಎಡಗಡೆಯಲ್ಲಿ ಒಂದು ಎಣ್ಣೆಯ ಮರ, ಅಂತು ಎರಡು ಮರಗಳು ಅದರ ಪಕ್ಕದಲ್ಲಿವೆ ಎಂದು ಹೇಳಿದೆನು (ಜೆಕರ್ಯ 4:2, 3).

ಜೆಕರ್ಯನ ಪುಸ್ತಕದಲ್ಲಿನ ಎರಡು ಎಣ್ಣೆಯ ಮರಗಳು "ಸರ್ವಭೂಲೋಕದೊಡೆಯನ ಸನ್ನಿಧಿ ಸೇವಕರು [ಅಭಿಷೀಕ್ತರು]" ಎಂದು ಗುರುತಿಸಲ್ಪಟ್ಟಿದ್ದಾರೆ (ಜೆಕರ್ಯ 4:14). ಜೆಕರ್ಯನ ಪುಸ್ತಕದಲ್ಲಿನ ಉಲ್ಲೇಖನವು ದೇಶಾಧಿಪತಿಯಾಗಿದ್ದ ಜೆರುಬ್ಬಾಬೆಲನ (ಜೆಕರ್ಯ 4:6, 7), ಆತನ ಜೊತೆಗೆಲಸದವನಾಗಿರುವ ಯಾಜಕನಾದ ಯೆಹೋಶುವನ ಕುರಿತಾಗಿತ್ತೆಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುತ್ತದೆ (ಜೆಕರ್ಯ 3:1; 6:11). ಜೆರುಬ್ಬಾಬೆಲನು ಅರಸನಾದ ಯೆಕೊನ್ಯನ ಮೊಮ್ಮಗನಾಗಿದ್ದನು (1 ಪೂರ್ವಕಾಲವೃತ್ತಾಂತ 3:17-19) ಮತ್ತು ಯೇಸುವಿನ ವರೆಗೆ ಸಾಗಿದ ರಾಜವಂಶಸ್ಥನಾಗಿದ್ದನು (ಮತ್ತಾಯ 1:12, 13; ಲೂಕ 3:27). ಆತನು ಮತ್ತು ಯೆಹೋಶುವ ಜೆಕರ್ಯ 4:14ರಲ್ಲಿ "ಅಭಿಷೀಕ್ತರು" ಎಂದು ಕರೆಯಲ್ಪಟ್ಟಿದ್ದಾರೆ ಯಾಕೆಂದರೆ ಅರಸರು ಮತ್ತು ಯಾಜಕರಿಬ್ಬರೂ ಅಭಿಷೇಕಿಸಲ್ಪಡುತ್ತಿದ್ದರು (1 ಸಮುವೇಲ 10:1; 16:12, 13; ಯಾಜಕಕಾಂಡ 8:12, 30). ಖಂಡಿತವಾಗಿಯೂ, ಈ ಯೆಹೋಶುವ ಹಾಗೂ ಮೋಶೆಯ ಬಲಗೈ ಬಂಟನಾಗಿದ್ದ ಯೆಹೋಶುವನು ಬೇರೆ ಬೇರೆಯಾಗಿದ್ದಾರೆ.

ಜೆರುಬ್ಬಾಬೆಲ ಮತ್ತು ಯೆಹೋಶುವ ಇಬ್ಬರು ಬಾಬೆಲಿನ ಸೆರೆವಾಸದಿಂದ ಕ್ರಿ.ಪೂ. 520ರಲ್ಲಿ ಸಂಭವಿಸಿದ ಮೊದಲ ಹಿಂದಿರುಗಿ ಬರೋಣದ ಅದೇ ಕಾಲದಲ್ಲಿಯೇ ಜೀವಿಸಿದ್ದವರು (ನೋಡಿರಿ ಎಜ್ರನು 2-6; ಹಗ್ಗಾಯ 1; 2). ಮೇದ್ಯರು ಮತ್ತು ಪರ್ಶಿಯದವರು ಬಾಬೆಲನ್ನು ವಶಪಡಿಸಿಕೊಂಡ ವೇಳೆ, ಅವರು ಸೆರೆಯಾಳುಗಳನ್ನು ಅವರ ಸ್ವದೇಶಕ್ಕೆ ಮರಳಿ ಕಳುಹಿಸಲಾರಂಭಿಸಿದ್ದರು. ಹೆಚ್ಚುಕಡಿಮೆ 50,000 ಯೆಹೂದ್ಯರು ಫಿಲಿಷ್ಟಿಯಕ್ಕೆ ಮೊದಲ ಬಾರಿಗೆ ಹಿಂದಿರುಗಿ ಬರೋಣವು (ಎಜ್ರನು 2:64, 65) ಜೆರುಬ್ಬಾಬೆಲ ಮತ್ತು ಯೆಹೋಶುವರ ನಾಯಕತ್ವದಲ್ಲಿ ಆಗಿತ್ತು (ಹಗ್ಗಾಯ 1:1). ಅವರು ಯೆರೂಸಲೇಮಿಗೆ ಬಂದು ತಲುಪಿದಾಗ, ಅವರು ವಿರೋಧವು ಉದ್ಭವವಾಗುವ ವರೆಗೂ ದೇವಾಲಯದ ಮರುನಿರ್ಮಾಣವನ್ನು ಆರಂಭಿಸಿದ್ದರು; ಆ ಬಳಿಕ ಅವರು ನಿಲ್ಲಿಸಿ ಬಿಟ್ಟರು. ಹದಿನೈದು ವರ್ಷಗಳ ನಂತದರಲ್ಲಿ, ಕೆಲಸವನ್ನು ಪೂರ್ತಿಗೊಳಿಸುವಂತೆ ಅವರನ್ನು ಪ್ರೇರಣೆಗೊಳಿಸುವದಕ್ಕಾಗಿ ಪ್ರವಾದಿಗಳಾದ ಹಗ್ಗಾಯ ಮತ್ತು ಜೆಕರ್ಯ ಇವರು ದೇವರಿಂದ ಕಳುಹಿಸಲ್ಪಟ್ಟರು (ಎಜ್ರನು 5:1, 2). ಜೆಕರ್ಯ 4ನೇ ಅಧ್ಯಾಯದಲ್ಲಿನ ಎರಡು ಎಣ್ಣೆ ಮರಗಳ ಹಾಗೂ ದೀಪಸ್ತಂಭದ ದರ್ಶನವು ಕೊಡಲ್ಪಟ್ಟ ಉದ್ದೇಶವು, ಕರ್ತನು ಅವನಿಗೆ ಕೊಟ್ಟಿರುವ ಕೆಲಸವನ್ನು ದೇವರ ಸಹಾಯದೊಂದಿಗೆ ಆತನು ಪೂರ್ತಿಗೊಳಿಸಲು ಶಕ್ತನು ಎಂಬ ಭರವಸವನ್ನು ದೇಶಾಧಿಪತಿಗೆ ಕೊಡುವದೇ ಆಗಿತ್ತು. ಮುಖ್ಯವಾದ ವಚನವೆಂದರೆ ಜೆಕರ್ಯ 4:6: "'ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ ಎಂಬದು ಸೇನಾಧೀಶ್ವರ ಯೆಹೋವನ ನುಡಿ' ಎಂಬೀ ಈ ಮಾತನ್ನು ಯೆಹೋವನು ಜೆರುಬ್ಬಾಬೆಲನಿಗೆ ದಯಪಾಲಿಸಿದ್ದಾನೆ."

ಯಾರಾದರೂ ಹೀಗೆ ಕೇಳಬಹುದು, "ಹಾಗಾದರೆ ಪ್ರಕಟನೆ 11ನೇ ಅಧ್ಯಾಯದಲ್ಲಿನ ಇಬ್ಬರು ಸಾಕ್ಷಿಗಳು ಯಾರಾಗಿದ್ದರು? ಅವರು ಜೆರುಬ್ಬಾಬೆಲ ಹಾಗೂ ಯೆಹೋಶುವ ಆಗಿದ್ದರೋ?" ಇಬ್ಬರು ಸಾಕ್ಷಿಗಳ ಗುರುತಿನ ವಿಷಯದಲ್ಲಿ ಅನಂತರ ಚರ್ಚಿಸಲಾಗುವದು, ಆದರೆ ಅವರು ಜೆರುಬ್ಬಾಬೆಲ ಹಾಗೂ ಯೆಹೋಶುವ *ಆಗಿರಲಿಲ್ಲ.* ಹಳೆಯ ಒಡಂಬಡಿಕೆಯ ಉಲ್ಲೇಖನಗಳಲ್ಲಿರುವ "ಅನಿರೀಕ್ಷಿತ ತಿರುವು" ವಾಚಕನಿಗೆ ತಿಳಿಯಪಡಿಸುವದೇನೆಂದರೆ ಪ್ರಕಟನೆ ಪುಸ್ತಕವು *ಅದೇ ರೀತಿಯ* ಸಂಗತಿಯೊಂದನ್ನು ಕುರಿತು ಮಾತಾಡುತ್ತಿದೆ, ಆದರೆ

*ಒಂದೇ ಸಂಗತಿ* ಆಗಿರುವದಿಲ್ಲ ಎಂಬುದೆ. ಜೆಕರ್ಯನ ದರ್ಶನದಲ್ಲಿ, ಎಣ್ಣೆ ಮರಗಳು *ಒಂದೇ* ದೀಪಸ್ತಂಭಕ್ಕೆ ಎಣ್ಣೆಯನ್ನು ಸರಬರಾಜು ಮಾಡಿದವು. ಯೋಹಾನನ ದರ್ಶನದಲ್ಲಿ, *ಎರಡು* ದೀಪಸ್ತಂಭಗಳಿದ್ದವು. ಎರಡು ದರ್ಶನಗಳಲ್ಲಿರುವ ಇನ್ನೊಂದು ವ್ಯತ್ಯಾಸವೇನೆಂದರೆ, ಜೆಕರ್ಯನ ದರ್ಶನದಲ್ಲಿ, ದೇಶಾಧಿಪತಿ ಹಾಗೂ ಯಾಜಕ ಇವರು ಎಣ್ಣೆಮರಗಳಾಗಿದ್ದರೆ, ದೀಪಸ್ತಂಭವು ದೇವರ ಸಂದೇಶವಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ (ಜೆಕರ್ಯ 4:1-6, 11-14). ಯೋಹಾನನ ದರ್ಶನದಲ್ಲಿ, ಇಬ್ಬರು ಸಾಕ್ಷಿಗಳು ಎಣ್ಣೆಮರಗಳೂ ದೀಪಸ್ತಂಭಗಳೂ ಆಗಿದ್ದರು. ಇಬ್ಬರು ಸಾಕ್ಷಿಗಳು ಜೆರುಬ್ಬಾಬೆಲ ಹಾಗೂ ಯೆಹೋಶುವ ಆಗಿರಲಿಲ್ಲ ಎಂಬುದಾಗಿ ಒಬ್ಬನು ಧೈರ್ಯವಾಗಿ ಹೇಳಬಹುದಾಗಿದೆ. ಬದಲಾಗಿ, ಜೆರುಬ್ಬಾಬೆಲ ಹಾಗೂ ಯೆಹೋಶುವನ *ಪ್ರಕಾರ*, ದೇವರಿಂದ ಆದೇಶ ಮತ್ತು ಶಕ್ತಿಯನ್ನು ಹೊಂದಿಕೊಂಡ ವ್ಯಕ್ತಿಗಳಾಗಿದ್ದರು.

**ವಚನ 5.** 1 ಮತ್ತು 2 ವಚನಗಳಲ್ಲಿ, ದೇವರ ಜನರು ಕಾಪಾಡುವದಕ್ಕೋಸ್ಕರವಾಗಿ ಅಳತೆ ಮಾಡಲ್ಪಟ್ಟಿದ್ದರು. ಕರ್ತನ ದೈವಿಕ ಭದ್ರತೆಯು ಈಗ ಸಾಂಕೇತಿಕ ಪದಗಳಲ್ಲಿ ಬಣ್ಣಿಸಲ್ಪಟ್ಟಿರುತ್ತದೆ: ಇಬ್ಬರು ಸಾಕ್ಷಿಗಳಿಗೆ **ಯಾವನಾದರೂ ಕೇಡನ್ನುಂಟುಮಾಡಬೇಕೆಂದಿದ್ದರೆ ಇವರ ಬಾಯೊಳಗಿಂದ ಬೆಂಕಿ ಹೊರಟು ಇವರ ಶತ್ರುಗಳನ್ನು ದಹಿಸಿ ಬಿಡುವದು; ಇವರಿಗೆ ಯಾವನದಾದರೂ ಕೇಡನ್ನುಂಟುಮಾಡಬೇಕೆಂದಿದ್ದರೆ ಅವನಿಗೆ ಈ ರೀತಿಯಾಗಿ ಕೊಲೆಯಾಗಬೇಕು.** ಇಬ್ಬರು ಸಾಕ್ಷಿಗಳ ಬೋಧನೆಗೆ ಲೋಕವು ತೋರಿಸುವ ಪ್ರತಿಕ್ರಿಯೆಯ ಕುರಿತಾಗಿ, 5ನೇ ವಚನವು ಎರಡು ಸಾರಿ ಮನುಷ್ಯರು **ಇವರಿಗೆ ಕೇಡನ್ನುಂಟುಮಾಡಬೇಕೆಂದಿದ್ದರೆ** ಎಂದು ಹೇಳುತ್ತದೆ. ಇಲ್ಲಿ **ಇದ್ದರೆ** ಎಂಬುದು "ಮಾಡುವಾಗ" ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅವರಿಗೆ ಕೇಡನ್ನುಂಟು ಮಾಡಲಿಚ್ಛಿಸುವವರನ್ನು ಅವರ **ಶತ್ರುಗಳು** ಎಂದು ಕರೆಯಲ್ಪಟ್ಟಿದ್ದಾರೆ. ಒಳ್ಳೇದು ಮತ್ತು ಕೆಟ್ಟದ್ದರ ನಡುವೆ ಕಾದಾಟವು ಯಾವಾಗಲೂ ಇದ್ದೇ ಇರುವದು. ತಪ್ಪಾದದ್ದು ಯಾವಾಗಲೂ ಸತ್ಯವನ್ನು ವಿರೋಧಿಸುವದು. ಹೇಗೂ, ಸಾಕ್ಷಿಗಳಿಗೆ ಹೀಗೆ ಮಾಡುವವನು ತನಗೆ ತಾನೇ ನಾಶನವನ್ನುಂಟು ಮಾಡಿಕೊಳ್ಳುವನಷ್ಟೆ.

ಸಾಕ್ಷಿಗಳ ಶತ್ರುಗಳನ್ನು ದಹಿಸಿ ಬಿಡುವದಕ್ಕೆ ಅವರ ಬಾಯೊಳಗಿಂದ **ಬೆಂಕಿ** ಬರುವದು. ಈ ವಿವರಣೆಯು ನಮಗೆ ಅಹಜ್ಯನು ಪ್ರವಾದಿಯಾದ ಎಲೀಯನನ್ನು ಬಂಧಿಸುವದಕ್ಕೆ ಸೈನಿಕರನ್ನು ಕಳುಹಿಸಿ ಕೊಟ್ಟ ಸಮಯವನ್ನು ಜ್ಞಾಪಕಕ್ಕೆ ತರುತ್ತದೆ. ಆಕಾಶದಿಂದ ಬೆಂಕಿ ಬಿದ್ದು ಐವತ್ತು ಸೈನಿಕರಿದ್ದ ಎರಡು ತಂಡಗಳನ್ನು ದಹಿಸಿ ಬಿಟ್ಟಿತ್ತು (2 ಅರಸು 1:10, 12) ಮೂರನೆಯ ತಂಡವು ದೇವರ ವಕ್ತಾರನಿಗೆ ಗೌರವವನ್ನು ತೋರಿಸುವದಕ್ಕೆ ಮುನ್ನ ಇದು ಸಂಭವಿಸಿತ್ತು.[30] ಹೇಗೂ, ಪ್ರಕಟನೆ 11:15ನೇ ಅಧ್ಯಾಯದಲ್ಲಿನ ಬೆಂಕಿಯು ಸಾಕ್ಷಿಗಳ *ಬಾಯೊಳಗಿಂದ* ಬಂದಿತು, ಹೊರತು ಎಲೀಯನ ದಿನದಲ್ಲಾದಂತೆ ಆಕಾಶದಿಂದ ಬರಲಿಲ್ಲ. ಈ ಸಾಂಕೇತಿಕತೆಯು ಹೆಚ್ಚು ನಿಕಟವಾಗಿ ದೇವರು ಪ್ರವಾದಿಯಾದ ಯೆರೆಮೀಯನಿಗೆ ಹೇಳಿದ ಮಾತುಗಳೊಂದಿಗೆ ಸಂಬಂಧ ಹೊಂದಿರುತ್ತದೆ: "ನೀವು ಹೀಗೆ ಅಂದುಕೊಂಡದ್ದರಿಂದ ಆಹಾ, ನಾನು ನನ್ನ ಪ್ರವಾದಿಯ ಬಾಯಲ್ಲಿನ *ನನ್ನ ಮಾತುಗಳನ್ನು* ಬೆಂಕಿಯನ್ನಾಗಿಯೂ ಈ ಜನರನ್ನು ಸೌದೆಯನ್ನಾಗಿಯೂ ಮಾಡುವೆನು; ಅದು ಅವರನ್ನು ತಿಂದು ಬಿಡುವದು" (ಯೆರೆಮೀಯ 5:14; ಒತ್ತಿ ಹೇಳಿದ್ದು ನನ್ನದು). ಇಬ್ಬರು ಸಾಕ್ಷಿಗಳಿಂದ ನುಡಿಯಲ್ಪಟ್ಟ *ಸಂದೇಶ*ವು "ಲೋಕವನ್ನು ದಹಿಸಿ ಬಿಡುವಂತಹ ಅಪರಾಧ ನಿರ್ಣಯವುಂಟು ಮಾಡಿದ್ದಾಗಿತ್ತು."[31] ದೇವರ ಸಂದೇಶವು ಶಕ್ತಿಶಾಲಿಯಾದದ್ದು (ಅಪೊಸ್ತಲರ ಕೃತ್ಯಗಳು 2:37; ರೋಮಾ 1:16; ಇಬ್ರಿಯ 4:12).

**ವಚನ 6.** ಬೆಂಕಿಯನ್ನು ಉಗುಳುವ ಸಾಮರ್ಥ್ಯದ ಜೊತೆಯಲ್ಲಿ, ಯೋಹಾನನು

ಹೇಳಿದ್ದೇನೆಂದರೆ ಈ ಸಾಕ್ಷಿಗಳಿಗೆ **ತಾವು ಪ್ರವಾದಿಸುವ ದಿನಗಳಲ್ಲಿ ಮಳೆಬೀಳದಂತೆ ಆಕಾಶವನ್ನು ಮುಚ್ಚುವ ಅಧಿಕಾರ ಇವರಿಗೆ ಉಂಟು. ಇದಲ್ಲದೆ ಇವರಿಗೆ ಇಷ್ಟ ಬಂದಾಗಲೆಲ್ಲಾ ನೀರು ರಕ್ತವಾಗುವಂತೆ ಮಾಡುವದಕ್ಕೂ ಸಕಲ ವಿಧವಾದ ಉಪದ್ರವಗಳಿಂದ ಭೂಮಿಯನ್ನು ಪೀಡಿಸುವದಕ್ಕೂ ಅಧಿಕಾರವುಂಟು. ಇವರಿಗೆ ಇಷ್ಟ ಬಂದಾಗಲೆಲ್ಲಾ** ಎಂಬುದರ ಅರ್ಥವು ಅವರು ತಮಗೆ ಮನಸ್ಸು ಬಂದಂತೆ ತಮ್ಮ ಶತ್ರುಗಳನ್ನು ದಂಡಿಸಿದರೆಂದು ಆಗಿರುವದಿಲ್ಲ. ಇಲ್ಲಿ ತಿಳಿಸಲಿಚ್ಛಿಸುವ ಅಂಶವೇನೆಂದರೆ ಅವರು ಅದನ್ನು ಅಗತ್ಯವಾಗುವಾಗಲೆಲ್ಲಾ ಬಳಸುವದಕ್ಕೆ ಶಕ್ತರಾಗಿದ್ದರು ಎಂಬುದೆ.

ಒಬ್ಬನು 6ನೇ ವಚನವನ್ನು ಓದುವಾಗ, ಎಲೀಯ ಹಾಗೂ ಮೋಶೆಯರು ಜ್ಞಾಪಕಕ್ಕೆ ಬರುತ್ತಾರೆ. ಮಳೆ ಬಾರದಂತೆ ಆಕಾಶವನ್ನು ಮುಚ್ಚುವದು ನಮಗೆ ಎಲೀಯನ ಕಾಲದಲ್ಲಿ ಉಂಟಾದ 3½ ವರ್ಷದ ಕ್ಷಾಮವನ್ನು ನೆನಪಿಸುತ್ತದೆ (ಲೂಕ 4:25; ಯಾಕೋಬ 5:17).[32] ನೀರನ್ನು ರಕ್ತವಾಗಿ ಮಾರ್ಪಡಿಸುವದು ಮತ್ತು ಭೂಮಿಯ ಮೇಲೆಲ್ಲಾ ಉಪದ್ರವಗಳುಂಟಾಗುವಂತೆ ಮಾಡುವದು ಮೋಶೆಯು ಫರೋಹನನ್ನು ಎದುರಿಸಿದ ಘಟನೆಯನ್ನು ನಮಗೆ ನೆನಪಿಸುತ್ತದೆ (ವಿಮೋಚನಕಾಂಡ 7:17-20; ನೋಡಿರಿ 1 ಸಮುವೇಲ 4:7, 8).

ಹಾಗಾದರೆ ಈ ಸಾಮ್ಯತೆಗಳಿರುವದರಿಂದ ಇಬ್ಬರು ಸಾಕ್ಷಿಗಳು ಅಕ್ಷರಶಹ ಎಲೀಯ ಹಾಗೂ ಮೋಶೆ ಆಗಿದ್ದರೆಂದು ಅರ್ಥವೋ? ಧರ್ಮೋಪದೇಶಕಾಂಡ 18:15, 18 ಮತ್ತು ಮಲಾಕಿ 4:5, 6ರಲ್ಲಿನ ವಾಗ್ದಾನಗಳ ಆಧಾರದಲ್ಲಿ, ಮೋಶೆ ಹಾಗೂ ಎಲೀಯರು ನೇರವಾಗಿ ಹಿಂದಿರುಗಿ ಬರುವರು ಎಂದು ಯೆಹೂದ್ಯರು ನಂಬುತ್ತಾರೆ. ಹೇಗೂ, ಹೊಸ ಒಡಂಬಡಿಕೆಯಂತೂ ಸ್ಪಷ್ಟವಾಗಿದೆ, ಏನೆಂದರೆ ಎಲೀಯನ ಕುರಿತಾದ ವಾಗ್ದಾನವು ಸ್ನಾನಿಕನಾದ ಯೋಹಾನನಲ್ಲಿ ನೆರವೇರಿತು (ಮತ್ತಾಯ 11:11-14; 17:11-13; ಲೂಕ 1:13, 17), ಮತ್ತು ಮೋಶೆಯ ರೀತಿಯ ಪ್ರವಾದಿಯು ಬರುವನೆಂಬ ವಾಗ್ದಾನವು ಯೇಸುವಿನಲ್ಲಿ ನೆರವೇರಿತು ಎಂಬುದೆ (ಅಪೊಸ್ತಲರ ಕೃತ್ಯಗಳು 3:19-26). ಇಬ್ಬರು ಸಾಕ್ಷಿಗಳು ಹೇಗೆ ಅಕ್ಷರಶಃ ಜೆರುಬ್ಬಾಬೆಲ ಹಾಗೂ ಯೆಹೋಶುವ ಆಗಿರಲಿಲ್ಲವೋ ಅದೇ ರೀತಿ ಎಲೀಯ ಹಾಗೂ ಮೋಶೆ ಸಹ ಆಗಿರುವದಿಲ್ಲ. 8ನೇ ವಚನವು "ಇವರ ಒಡೆಯನು [ಅಂದರೆ, ಇಬ್ಬರು ಸಾಕ್ಷಿಗಳ ಒಡೆಯನು]" "ಶಿಲುಬೆಗೆ ಹಾಕಲ್ಪಟ್ಟನು" ಎಂಬದರ ಬಗ್ಗೆ ಮಾತಾಡುತ್ತದೆ. ಇದು ಆ ಇಬ್ಬರು ಸಾಕ್ಷಿಗಳು *ಕ್ರೈಸ್ತರಾ*ಗಿದ್ದರೆಂಬುದನ್ನು ಸೂಚಿಸುತ್ತದೆ - ಜೆರುಬ್ಬಾಬೆಲ, ಯೆಹೋಶುವ, ಎಲೀಯ, ಮತ್ತು ಮೋಶೆ ಇವರು ಕ್ರೈಸ್ತರಾಗಿರಲಿಲ್ಲ.

ಬದಲಾಗಿ, ಇಬ್ಬರು ಸಾಕ್ಷಿಗಳು ಮೋಶೆ ಹಾಗೂ ಎಲೀಯರ "ಮನೋಭಾವದಲ್ಲಿ" ಬಂದರು. ಅವರು ಮೋಶೆ ಹಾಗೂ ಎಲೀಯರ ರೀತಿಯಲ್ಲಿಯೇ ದೇವರಿಂದ ಆದೇಶಿಸಲ್ಪಟ್ಟಿದ್ದರು. ಅತ್ಯಂತ ಪ್ರಾಮುಖ್ಯಕರವಾಗಿ, ಅವರು ಮೋಶೆ ಹಾಗೂ ಎಲೀಯರ ರೀತಿಯಲ್ಲಿಯೇ ಜಯಶಾಳಿಗಳಾಗಲಿದ್ದರು. ಫರೋಹನು ಮೋಶೆಯನ್ನು ತಡೆಯುವದಕ್ಕೆ ಶಕ್ತನಾಗಲಿಲ್ಲ, ಮತ್ತು ಅರಸನಾದ ಆಹಾಬನು ಎಲೀಯನನ್ನು ನಾಶಗೊಳಿಸಲು ಶಕ್ತನಾಗಲಿಲ್ಲ. ಅದೇ ರೀತಿಯಲ್ಲಿಯೇ, Domitianನ - ಅಥವಾ ಭೂಲೋಕದರ ಬೇರೆ ಯಾವದೇ ಅಧಿಕಾರಿಯಿಂದಾಗಲಿ - ಯಾವ ಪ್ರಯತ್ನವೂ ದೇವರ ಉದ್ದೇಶಗಳನ್ನು ಪೂರ್ತಿಗೊಳಿಸಿದಂತೆ ದೇವರ ಸಾಕ್ಷಿಗಳನ್ನು ತಡೆಯುವದಕ್ಕೆ ಸಾಧ್ಯವಾಗುವದಿಲ್ಲ.

ಇಬ್ಬರು ಸಾಕ್ಷಿಗಳ ಗುರುತಿನ ವಿಷಯವಾಗಿ ನೋಡುವದಾದರೆ, ಪ್ರಕಟನೆ 11:5, 6 ರಲ್ಲಿನ ಭಾಷೆಯು ಸಾಂಕೇತಿಕವಾಗಿರುತ್ತದೆಯೇ, ಹೊರತು ಅಕ್ಷರಶಃ ಅಲ್ಲ ಎಂಬುದು

ಸ್ಪಷ್ಟವಾಗಿರುತ್ತದೆ. ಕ್ರೈಸ್ತ ಸಾಕ್ಷಿಗಳು - ಆಧಿ ಸಭೆಯಲ್ಲಿ ಅದ್ಭುತಕರವಾದ ಶಕ್ತಿಗಳನ್ನು ಹೊಂದಿದ್ದವರು ಸಹ - ಎಂದಿಗೂ ತಮ್ಮ ಬಾಯೊಳಗಿಂದ ಬೆಂಕಿಯು ಬರುವದನ್ನು ಕಾಣಲಿಲ್ಲ, ಎಂದಿಗೂ ಬರಗಾಲವನ್ನುಂಟು ಮಾಡಲಿಲ್ಲ, ಮತ್ತು ನೀರನ್ನು ಎಂದಿಗೂ ರಕ್ತವಾಗಿ ಮಾರ್ಪಡಿಸಲಿಲ್ಲ. ಈ ಸಂಕೇತಗಳು ದೇವರ ಸಾಕ್ಷಿಗಳಿಗೆ ದೇವರಿಂದ ಶಕ್ತಿ ಕೊಡಲ್ಪಟ್ಟಿತ್ತು, ಮತ್ತು ಅದೇ ದೇವರು ಆತನ ವಾಕ್ಯವನ್ನು ಸಾರುವವರನ್ನು ಬಲಗೊಳಿಸುವದನ್ನು ಮುಂದುವರೆಸುತ್ತಾನೆಂಬ ಅಂಶವನ್ನಷ್ಟೆ ಮನದಟ್ಟು ಮಾಡುತ್ತವೆ. ಇಂದು, ನಮಗೆ ಅದ್ಭುತಕರವಾದ ಶಕ್ತಿಗಳು ಇರುವದಿಲ್ಲ,[33] ಆದರೆ ದೇವರು ಈಗಲೂ "ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾಗಿದ್ದಾನೆ" (ಎಫೆಸ 3:20).

*ಹಾಗಾದರೆ ಇಬ್ಬರು ಸಾಕ್ಷಿಗಳು ಯಾರಾಗಿದ್ದಾರೆ?* ಅವರು ನಿಜವಾಗಿಯೂ ಜೆರುಬ್ಬಾಬೆಲ ಹಾಗೂ ಯೆಹೋಶುವ ಅಥವಾ ಮೋಶೆ ಮತ್ತು ಎಲೀಯ ಆಗಿರಲಿಲ್ಲವಾದಲ್ಲಿ, ಅವರು ಬೇರೆ ಇನ್ನಾರು ಆಗಿದ್ದರು? "ಇದಕ್ಕೆ ಸಲಹೆಗಳಿಗೇನೂ ಕೊರತೆಯಿರುವದಿಲ್ಲ,"[34] "ಅಭ್ಯರ್ಥಿಗಳ ಪಟ್ಟಿಗಂತೂ"[35] ಅಂತ್ಯವೇ ಇರುವದಿಲ್ಲ.

ಅನೇಕ ವ್ಯಾಖ್ಯಾನಕಾರರು ಇವರನ್ನು ಇಬ್ಬರು ಅಕ್ಷರಶಃ ವ್ಯಕ್ತಿಗಳೆಂದು ಗುರುತಿಸುತ್ತಾರೆ. ಕೆಲವರು ಗತಕಾಲದಲ್ಲಿದ್ದ ಪೇತ್ರ ಮತ್ತು ಪೌಲರಂತಹ ಇಬ್ಬರು ಅಕ್ಷರಶಃ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಿಚ್ಛಿಸುತ್ತಾರೆ. ಇನ್ನು ಕೆಲವರು ಈಗಿನ ಕಾಲದಲ್ಲಿರುವ ಇಬ್ಬರು ವ್ಯಕ್ತಿಗಳನ್ನು ಆರಿಸಿಕೊಳ್ಳುತ್ತಾರೆ. ಕುಪಂಥಿಯ ಗುಂಪಿನ ನಾಯಕರು ಇಬ್ಬರು ಸಾಕ್ಷಿಗಳನ್ನು ತಾವೇ ಎಂದು ಮತ್ತು ತಮ್ಮ ಬಲಗೈ ಬಂಟರೆಂದು ಹೇಳಿಕೊಳ್ಳುತ್ತಾರೆ. ಇನ್ನಷ್ಟು ಕೆಲವರು ಈ ಇಬ್ಬರು ಸಾಕ್ಷಿಗಳು ಭವಿಷ್ಯದಲ್ಲಿ ಇರುವಂಥ ಇಬ್ಬರು ವ್ಯಕ್ತಿಗಳಾಗಿರುತ್ತಾರೆಂದು ಖಚಿತ ಪಡಿಸಿಕೊಂಡಿರುವಂತೆ ತೋರುತ್ತದೆ; ಸಹಸ್ರವರ್ಷಪೂರ್ವಾಡಳಿತ ವಾದಿಗಳು ತಮ್ಮ ಕಾಲ್ಪನಿಕ ಏಳು ವರ್ಷಗಳ ಸಂಕಷ್ಟ ಕಾಲದಲ್ಲಿ ಇಬ್ಬರು ಅಕ್ಷರಶಃ ವಕ್ತಾರರು ದೇವರಿಗಾಗಿ ಎದ್ದೇಳುವರು ಎಂದು ಬೋಧಿಸುತ್ತಾರೆ. ಇವುಗಳಲ್ಲಿ ಬಹುಪಾಲು ವ್ಯಾಖ್ಯಾನಗಳು ಪ್ರಕಟನೆ ಪುಸ್ತಕವನ್ನು ಆದಿ ಕ್ರೈಸ್ತರಿಗೆ ಆದರಣೆಯನ್ನು ತರುವದರ ಬದಲಾಗಿ ಅವರನ್ನು ಆಶೆ ತೋರಿಸಿ ಪೀಡಿಸುವ ಪುಸ್ತಕವನ್ನಾಗಿ ಮಾರ್ಪಡಿಸುತ್ತವೆ. Kiddleನ ಹೇಳಿಕೆಗಳು ಪ್ರಕಟನೆ ಪುಸ್ತಕವು ಬಿಡಿಸಬೇಕಾದ ಒಂದು ಒಗಟು ಅಲ್ಲ, ಆದರೆ "ನಂಬಿಗಸ್ತರಿಗೆ ಒಂದು ಜೀವನ್ಮರಣಗಳ ಪುಸ್ತಕವಾಗಿತ್ತು"[36] ಎಂಬುದನ್ನು ಪ್ರತಿಯೊಬ್ಬರಿಗೂ ಜ್ಞಾಪಿಸುವದಾಗಿದೆ:

> ಯೋಹಾನನು ಇನ್ನು ಸ್ವಲ್ಪ ಸಮಯದಲ್ಲಿ ತಮ್ಮ ನಂಬಿಕೆಗೋಸ್ಕರ ಮರಣಿಸಲಿದ್ದವರಿಗೆ ಬರೆಯುತ್ತಿದ್ದಾನೆ . . . ವಾಸ್ತವಿಕದಲ್ಲಿ, ಆತನು ಕ್ರೈಸ್ತರಿಗಿದ್ದ ಕಾಲಗಳ ಅತ್ಯಂಥ ದೊಡ್ಡ ಪ್ರಶ್ನೆಗೆ ಉತ್ತರಿಸುವದಕ್ಕೆ ಬರೆದನು: "ಸಭೆಯ ಮೇಲೆ ಸಾಮ್ರಾಜ್ಯದ ಹಿಂಸೆ ಎಂಬ ಭೀತಿಯುಂಟು ಮಾಡುವ ಕತ್ತಿಯು ಇಳಿದು ಬರುವಾಗ, ಏನು ಸಂಭವಿಸುವದು?"[37]

ಇನ್ನು ಕೆಲವು ವ್ಯಾಖ್ಯಾನಕಾರರು ಇಬ್ಬರು ಸಾಕ್ಷಿಗಳನ್ನು ಅಕ್ಷರಶಃ ವ್ಯಕ್ತಿಗಳನ್ನಾಗಿ ಮಾಡುವದು ಮೂರ್ಖತನವಾಗಿರುತ್ತದೆಂದು ಅರಿತುಕೊಳ್ಳುತ್ತಾರೆ, ಆದ್ದರಿಂದ ಅವರು ಸಾಕ್ಷಿಗಳಿಗೆ ಸಾಂಕೇತಿಕ ಮಹತ್ವವನ್ನು ಕೊಡುತ್ತಾರೆ. ಹೇಗೂ, ಅದೇ ವೇಳೆಯಲ್ಲಿ, "ಎರಡು" ಎಂಬ ಸಂಖ್ಯೆಯನ್ನು ಅಕ್ಷರಶಃ ಅರ್ಥನಿರೂಪನೆ ಮಾಡತಕ್ಕದೆಂದು ಕೆಲವರು ನಂಬುತ್ತಾರೆ. ಹೀಗೆ ತಾವು ಒಂದು ಸಾಂಕೇತಿ ಜೋಡಿಯನ್ನು ಧರ್ಮಶಾಸ್ತ್ರ ಮತ್ತು ಪ್ರವಾದಿಗಳೆಂದು, ಅಥವಾ ಹಳೆಯ ಹಾಗೂ ಹೊಸ ಒಡಂಬಡಿಕೆಗಳೆಂದು ಸೂಚಿಸಬೇಕೆಂದು ಭಾವಿಸುತ್ತಾರೆ. ಅನೇಕ ಲೇಖಕರು ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳು ಯೇಸುವಿನ ವಿಷಯವಾಗಿ

ಸಾಕ್ಷಿಯನ್ನು ಹೇಳಿದವು ಎಂಬುದನ್ನು ತೋರಿಸಿ ಕೊಡುತ್ತಾ (ಲೂಕ 24:44; ಯೋಹಾನ 5:39), ಮೋಶೆಯು ಧರ್ಮಶಾಸ್ತ್ರವನ್ನೂ ಎಲೀಯನು ಪ್ರವಾದಿಗಳನ್ನೂ ಪ್ರತಿನಿಧಿಸುತ್ತಾನೆ ಎಂದು ವಾದಿಸುತ್ತಾರೆ. ಇನ್ನು ಕೆಲವರು ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡೂ ಯೇಸುವಿನ ವಿಷಯವಾಗಿ ಸಾಕ್ಷಿ ಹೇಳುತ್ತವೆಂದು ಒತ್ತಿ ಹೇಳುತ್ತಾರೆ (ನೋಡಿರಿ ಯೋಹಾನ 20:30, 31). ಈ ಎಲ್ಲಾ ಅರ್ಥನಿರೂಪಣೆಗಳಲ್ಲೂ ಒಂದಿಷ್ಟು ಸತ್ಯವಿರುತ್ತದೆ, ಆದರೆ ಅರ್ಥವು ಮಾತ್ರ ಬಹುಶಃ ಇವುಗಳಲ್ಲಿ ಯಾವದಕ್ಕಿಂತಲೂ ಸರಳವಾಗಿರಬಹುದಾಗಿದೆ.

ಇಬ್ಬರು ಸಾಕ್ಷಿಗಳು *ಸಾಕ್ಷಿ ಹೇಳಿದರು* (ವ. 7). ಪ್ರಕಟನೆ ಪುಸ್ತಕದಲ್ಲಿ ಸಾಕ್ಷಿ ಹೇಳುವಿಕೆ ಇರುವದಾಗಿತ್ತೋ? ಹೌದು: ಯೋಹಾನನು "ದೇವರ ವಾಕ್ಯಕ್ಕೋಸ್ಕರವೂ *ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ* ಪತ್ಮೋಸ್ ದ್ವೀಪದಲ್ಲಿದ್ದನು" (1:9; ಒತ್ತಿ ಹೇಳಿದ್ದು ನನ್ನದು; ನೋಡಿರಿ 1:2). ಯಜ್ಞವೇದಿಯ ಕೆಳಗಿರುವ ದೇವಜನರು "ದೇವರ ವಾಕ್ಯದ ನಿಮಿತ್ತವಾಗಿಯೂ *ತಾವು ಹೇಳಿದ ಸಾಕ್ಷಿಯ* ನಿಮಿತ್ತವಾಗಿಯೂ ಹತ" ರಾಗಿದ್ದರು (6:9; ಒತ್ತಿ ಹೇಳಿದ್ದು ನನ್ನದು). ಮುಂದಿನ ಅಧ್ಯಾಯದಲ್ಲಿ, ಘಟಸರ್ಪನು (ಸೈತಾನನು) "ದೇವರ ಆಜ್ಞೆಗಳನ್ನು ಕೈಕೊಂಡು ನಡೆದು *ಯೇಸುವಿನ ವಿಷಯವಾದ ಸಾಕ್ಷಿಯನ್ನು* ಹೇಳಿರುವವರಾದ" ನಂಬಿಗಸ್ತ ಕ್ರೈಸ್ತರ ಮೇಲೆ ಯುದ್ಧವನ್ನು ಮಾಡುವನು (12:17; ಒತ್ತಿ ಹೇಳಿದ್ದು ನನ್ನದು; ನೋಡಿರಿ 12:11). ಸಾಕ್ಷಿಯನ್ನು ಹೇಳುವದು ಪ್ರತ್ಯೇಕವಾಗಿ ಆರಿಸಿಕೊಳ್ಳಲ್ಪಟ್ಟ ಕೆಲವೇ ಜನರ ಕೆಲಸವಾಗಿರಲಿಲ್ಲ; ಅದು ಸಭೆಯ ಪ್ರತಿಯೊಬ್ಬ ಸದಸ್ಯನ ಕರ್ತವ್ಯವೂ ಆಗಿತ್ತು.

ಇಬ್ಬರು ಸಾಕ್ಷಿಗಳನ್ನು *ದೀಪಸ್ತಂಭಗಳು* ಎಂದು ಬಣ್ಣಿಸಲಾಗಿದೆ (ವ. 4). ಈ ಮುಂಚೆ ದೀಪಸ್ತಂಭಗಳು ಇದ್ದವೋ? ಹೌದು: ". . . ಆ ಏಳು ದೀಪಸ್ತಂಭಗಳು ಎಂದರೆ ಆ ಏಳು ಸಭೆಗಳು" (1:20). ಕ್ರಿಸ್ತನ ದೇಹದ ಅಂಗವಾಗಿರುವ ಪ್ರತಿಯೊಬ್ಬನೂ ತನ್ನ ಸತ್ಯದ ಬೆಳಕನ್ನು ಪ್ರಕಾಶಗೊಳಿಸಬೇಕು (ಮತ್ತಾಯ 5:14-16; 2 ಕೊರಿಂಥ 4:4, 6; ಎಫೆಸ 5:8; ಫಿಲಿಪ್ಪಿ 2:15).

ಇಬ್ಬರು ಸಾಕ್ಷಿಗಳು ಎಣ್ಣೆಯ ಮರಗಳಿಗೆ ಹೋಲಿಸಲ್ಪಟ್ಟಿದ್ದಾರೆ (ವ. 4), ಅಂದರೆ *ಒಬ್ಬ ಅರಸನಾದ* ಜೆರುಬ್ಬಾಬೆಲ ಮತ್ತು *ಒಬ್ಬ ಯಾಜಕನಾದ* ಯೆಹೋಶುವನಿಗೆ ಹೋಲಿಸಲ್ಪಟ್ಟಿದ್ದಾರೆ. ಮುಂಚೆ ಯಾವದೇ ಅರಸರಾಗಲಿ ಮತ್ತು ಯಾಜಕರಾಗಲಿ ಇದ್ದರೋ? ಹೌದು: 1:6 ಮತ್ತು 5:10 ಎರಡೂ ವಚನಗಳು ಒತ್ತಿ ಹೇಳುವದೇನೆಂದರೆ ದೇವರು "ನಮ್ಮ ದೇವರಿಗೋಸ್ಕರ [ಕ್ರೈಸ್ತರಾದ ನಮ್ಮೆಲ್ಲರನ್ನು] ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದನು." ಸಭೆಯು ರಾಜವಂಶಸ್ತರಾದ ಯಾಜಕವಾಗಿರುತ್ತದೆ.

ಜನರು ಇಬ್ಬರು ಸಾಕ್ಷಿಗಳಿಗೆ *ಕೇಡನ್ನುಂಟುಮಾಡಬೇಕೆಂದು* ಇರುತ್ತಾರೆ (ವ. 5). ಈ ಮುಂಚೆ ಸಾಕ್ಷಿ ಹೇಳುವದಕ್ಕೆ ಪ್ರಯತ್ನಿಸುವವರಿಗೆ ಕೇಡನ್ನುಂಟು ಮಾಡಲು ಮನುಷ್ಯರು ಪ್ರಯತ್ನಿಸಿದ್ದಾರೋ? ಹೌದು: ಯೋಹಾನನು ಸೆರೆವಾಸಕ್ಕಾಗಿ ಗಡಿಪಾರು ಮಾಡಲ್ಪಟ್ಟಿದ್ದನು (1:9). ಸಭೆಯ ಆ ಸಮಯದಲ್ಲಿ ಸಂಕಷ್ಟವನ್ನು ಅನುಭವಿಸಿತ್ತು (1:9; 2:9), ಮತ್ತು ಇನ್ನಷ್ಟು ಘೋರವಾದ ತೊಂದರೆಯು ಮುಂದೆ ಕಾದಿತ್ತು (2:10; 3:10; 7:14).

ಮುಂದಿನ ವಚನವು ನಮಗೆ ಇಬ್ಬರು ಸಾಕ್ಷಿಗಳು *ಕೊಲ್ಲಲ್ಪಡುವರು* ಎಂದು ತಿಳಿಸುತ್ತದೆ (ವ. 7). ಈ ಮುಂಚೆ ಯಾವನಾದರೂ ತನ್ನ ನಂಬಿಕೆಗೋಸ್ಕರ ಕೊಲ್ಲಲ್ಪಟ್ಟಿದ್ದಾನೋ? ಹೌದು: ಅಂತಿಪನು ತನ್ನ ನಂಬಿಕೆಗೋಸ್ಕರ ರಕ್ತಸಾಕ್ಷಿಯಾಗಿ ಹತನಾದನು (2:13). ಬೇರೆ ಕೆಲವು ಕ್ರೈಸ್ತರು ಸಹ "ತಾವು ಹೇಳಿದ ಸಾಕ್ಷಿಯ ನಿಮಿತ್ತವಾಗಿಯೂ" ಹತರಾಗಿದ್ದರು (6:9). ಭವಿಷ್ಯದಲ್ಲಿ ಇನ್ನೂ ಹೆಚ್ಚು ಜನರು ಹತರಾಗಲಿದ್ದರು (6:11).

ಈ ಮುಂಚಿನ ಎಲ್ಲಾ ಪುರಾವೆಗಳ ಆಧಾರದಲ್ಲಿ, ಮತ್ತು ವಾಕ್ಯಭಾಗವನ್ನು "ಮೊದಲ

ಶತಮಾನದ ಕನ್ನಡಕದ ಮುಖಾಂತರ"[38] ನೋಡುವದಾದರೆ, ಯೋಹಾನನ ದಿನಗಳಲ್ಲಿದ್ದ ಕ್ರೈಸ್ತರು ಇಬ್ಬರು ಸಾಕ್ಷಿಗಳನ್ನು ಯಾರಾಗಿದ್ದಾರೆಂದು ನಂಬಿರುತ್ತಿದ್ದರು? ನಿಶ್ಚಯವಾಗಿಯೂ ಅವರ ಮನಸ್ಸಿಗೆ ತೋಚುವ ಮೊದಲ ಆಲೋಚನೆಗಳೆಂದರೆ ಈಗಾಗಲೇ ತಮ್ಮ ನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟಿದ್ದ ಅವರ ಮಿತ್ರರ ಕುರಿತೇ ಆಗಿರುತ್ತಿದ್ದವು. ಬಳಿಕ, ಅವರು ಇದರ ಕುರಿತು ಯೋಚಿಸುತ್ತಲೇ ಇರುವ ವೇಳೆ, ಈ ದೃಶ್ಯಾವಳಿಯು *ಸ್ವತಃ ಅವರ* ಭವಿಷ್ಯತ್ತನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆಂಬುದನ್ನು ಅವರು ಗ್ರಹಿಸಿಕೊಂಡಿರಲಾರರೋ?

ಮೊದಲ ಶತಮಾನದಲ್ಲಿ, ಇಬ್ಬರು ಸಾಕ್ಷಿಗಳು ಬಹುಶಃ ಇನ್ನು ಸ್ವಲ್ಪ ಕಾಲದಲ್ಲಿ ಭಯಂಕರವಾದ ಬಾಧೆಯ ಸಂಕಷ್ಟವನ್ನು ಅನುಭವಿಸಲಿದ್ದ ಎಲ್ಲಾ ನಂಬಿಗಸ್ತರನ್ನು ಪ್ರತಿನಿಧಿಸುವವರಾಗಿದ್ದರು. ಇಬ್ಬರು ಸಾಕ್ಷಿಗಳು ಪ್ರತಿಯೊಂದು ಯುಗದಲ್ಲಿರುವ ನಂಬಿಗಸ್ತರನ್ನು - ಎದುರಾಗುವ ಪರಿಣಾಮಗಳನ್ನು ಲೆಕ್ಕಿಸದೆಯೇ ಸತ್ಯಕ್ಕೋಸ್ಕರ ನಿಲ್ಲುವದಕ್ಕೆ ಸಿದ್ಧರಾಗಿರುವ ಎಲ್ಲರನ್ನೂ - ಪ್ರತಿನಿಧಿಸುತ್ತಲೇ ಇದ್ದಾರೆ.

ಯಾರಾದರೊಬ್ಬರು ಆಕ್ಷೇಪಣೆಯೆತ್ತಿ, "ಆದರೆ ಸಾಕ್ಷಿಗಳು *ಎಲ್ಲಾ* ನಂಬಿಗಸ್ತ ಕ್ರೈಸ್ತರನ್ನು ಪ್ರತಿನಿಧಿಸುವದಕ್ಕಾಗುವದಲ್ಲ, ಯಾಕೆಂದರೆ ಅವರು ಕೇವಲ ಇಬ್ಬರು ಮಾತ್ರವೇ ಇದ್ದರು - ಹೊರತು ಲಕ್ಷಾಂತರ ಜನರಲ್ಲ" ಎಂದು ಹೇಳಬಹುದು. ಪ್ರಕಟನೆ ಪುಸ್ತಕದಲ್ಲಿ ಸಂಖ್ಯೆಗಳ ವಿಷಯದಲ್ಲಿ ವಿಶಿಷ್ಟವಾಗಿರುವ ಪ್ರಕಾರ, "ಎರಡು" ಎಂಬುದು ಅಕ್ಷರಶಃ ಅಲ್ಲ, ಆದರೆ ಸಾಂಕೇತಿಕವಾದದ್ದು. "ಎರಡು" ಬಲಗೊಳಿಸುವ ಸಂಖ್ಯೆಯಾಗಿದೆ (ನೋಡಿರಿ ಪ್ರಸಂಗಿ 4:9-11). ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲೂ, ಒಂದು ವಿಷಯವನ್ನು ಸ್ಥಿರಪಡಿಸುವದಕ್ಕೆ ಇಬ್ಬರು ಸಾಕ್ಷಿಗಳ ಅಗತ್ಯವಿತ್ತು (ಧರ್ಮೋಪದೇಶಕಾಂಡ 17:6; 19:15; ಮತ್ತಾಯ 18:16; 1 ತಿಮೊಥೆ 5:19). ಯೇಸುವು ತನ್ನ ಜೊತೆಗೆಲಸದವರನ್ನು ಇಬ್ಬಿಬ್ಬರಾಗಿ ಕಳುಹಿಸಿ ಕೊಟ್ಟನು (ಮಾರ್ಕ 6:7; ಲೂಕ 10:1); ಒಬ್ಬನಿಗೆ ಕೊರತೆಯಾಗುವದನ್ನು ಮತ್ತೊಬ್ಬನು ಪೂರೈಸಬಹುದಿತ್ತು.

"ಎರಡು" ಅಂಕೆಯು ಅಕ್ಷರಶಃವಾಗಿ ಅರ್ಥೈಸಿಕೊಳ್ಳುವ ಉದ್ದೇಶಕ್ಕಾಗಿ ಆಗಿರಲಿಲ್ಲ ಎಂಬುದನ್ನು 7ನೇ ವಚನವು ದೃಢಪಡಿಸುತ್ತದೆ: "ಮೃಗವು ಇವರ ಮೇಲೆ ಯುದ್ಧ ಮಾಡುವದು." ಇಬ್ಬರು ವ್ಯಕ್ತಿಗಳನ್ನು ಕೊಲ್ಲುವದು "ಒಂದು ಯುದ್ಧ" ಆಗುವದಿಲ್ಲ, ಆದರೆ ನೂರಾರು ಅಥವಾ ಸಾವಿರಾರು ಜನರನ್ನು ಕೊಂದರೆ ಅದು ಒಂದು ಯುದ್ಧವಾಗುತ್ತದೆ. ದುಷ್ಟ ಸೈನ್ಯಗಳು "ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ" *ಎಲ್ಲರ* ಮೇಲೆ ಯುದ್ಧ ಮಾಡುವವು (12:17) ಎಂಬುದನ್ನು ಮುಂದಿನ ಅಧ್ಯಾಯವು ಒತ್ತಿ ಹೇಳುತ್ತದೆ. ಇದು "ಆಜ್ಞೆಗಳನ್ನು ಕೈಕೊಂಡು ನಡೆದು . . . ಸಾಕ್ಷಿಯನ್ನು ಹೇಳುವ" ಎಲ್ಲರನ್ನೂ ಸೂಚಿಸುವದಾಗಿದೆ.

ಕೆಲವು ವ್ಯಾಖ್ಯಾನಕಾರರು ಹೇಳಲ್ಪಟ್ಟಿರುವ ವಿಷಯದಲ್ಲಿರುವ ಮೂಲಭೂತ ಸತ್ಯತೆಯನ್ನು ಒಪ್ಪಿಕೊಳ್ಳುತ್ತಾರೆ, ಆದರೆ ಅನ್ವಯಿಕೆಯನ್ನು ರಕ್ತಸಾಕ್ಷಿಗಳಿಗೆ ಮಾತ್ರವೇ ಸೀಮಿತಗೊಳಿಸುತ್ತಾರೆ. ಸಭಾ ಇತಿಹಾಸಕಾರರ ಪ್ರಕಾರ, ನಂಬಿಕೆಗೋಸ್ಕರ ಮರಣಿಸುವ ಪ್ರತಿಯೊಬ್ಬ ರಕ್ತಸಾಕ್ಷಿಯು, ತನ್ನ ಜೀವಿತದಲ್ಲಿ ಬೇರೆ ಏನೇ ಮಾಡಿದ್ದರೂ ಸರಿಯೇ, ಆತನು ನೇರವಾಗಿ ಪರಲೋಕಕ್ಕೆ ಹೋಗುವನೆಂಬದಾಗಿ ಕೆಲವರು ನಂಬುವವರಾದರು. ಹೇಗೂ, ಪ್ರಕಟನೆ ಪುಸ್ತಕದಲ್ಲಿ ಕೊಡಲಾಗಿರುವ ಒತ್ತು ನಂಬಿಕೆಗೋಸ್ಕರ ಮರಣಿಸುವದಕ್ಕಿಂತಲೂ ಅಧಿಕವಾಗಿ ನಂಬಿಕೆಗೋಸ್ಕರ ಸಾಯುವದಕ್ಕೆ *ಸಿದ್ಧರಾಗಿರುವದರ* ಕುರಿತಾಗಿರುತ್ತದೆ (ನೋಡಿರಿ 2:10). ದೇವರು ತನಗೋಸ್ಕರ ಸಾಕ್ಷಿ ಹೇಳುವ - ಅವರ ಸಾಕ್ಷಿಯ ಪರಿಣಾಮವು ಏನೇ

ಆಗಿದ್ದರೂ ಸರಿಯೇ - ತನ್ನ *ಎಲ್ಲಾ* ಮಕ್ಕಳೊಂದಿಗೆ ಇರುವನು, ಅವರನ್ನು ಕಾಪಾಡುವನು.

## ಇಬ್ಬರು ಸಾಕ್ಷಿಗಳು ಕೊಲ್ಲಲ್ಪಡುವರು (11:7-10)

**[7]ಇವರು ತಮ್ಮ ಸಾಕ್ಷಿಯನ್ನು ಹೇಳಿ ಮುಗಿಸಿದನಂತರ ಅಧೋಲೋಕದಿಂದ ಬರುವ ಮೃಗವು ಇವರ ಮೇಲೆ ಯುದ್ಧಮಾಡಿ ಇವರನ್ನು ಜಯಿಸಿ ಕೊಲ್ಲುವದು. [8]ಈ ಸಾಕ್ಷಿಗಳ ಶವಗಳು ಮಹಾ ಪಟ್ಟಣದ ಬೀದಿಯಲ್ಲಿ ಬಿದ್ದಿರುವವು. ಆ ಪಟ್ಟಣಕ್ಕೆ ಗೂಢಾರ್ಥವಾಗಿ ಸೊದೋಮ್ ಎಂತಲೂ ಐಗುಪ್ತ ಎಂತಲೂ ಹೆಸರುಗಳುಂಟು; ಇವರ ಒಡೆಯನು ಸಹ ಅಲ್ಲಿಯೇ ಶಿಲುಬೆಗೆ ಹಾಕಲ್ಪಟ್ಟನು. [9]ಸಕಲ ಪ್ರಜೆ ಕುಲ ಭಾಷೆ ಜನಾಂಗಗಳಿಗೆ ಸೇರಿದವರು ಈ ಸಾಕ್ಷಿಗಳ ಶವಗಳನ್ನು ಮೂರುವರೆ ದಿನಗಳವರೆಗೂ ನೋಡುತ್ತಾ ಇರುವರು; ಅವುಗಳನ್ನು ಸಮಾಧಿಯಲ್ಲಿ ಇಡಗೊಡಿಸುವದಿಲ್ಲ. [10]ಈ ಇಬ್ಬರು ಪ್ರವಾದಿಗಳು ಭೂನಿವಾಸಿಗಳನ್ನು ಪೀಡಿಸಿದ್ದರಿಂದ ಇವರು ಸತ್ತದ್ದಕ್ಕೆ ಭೂನಿವಾಸಿಗಳು ಸಂತೋಷಿಸಿ ಸಂಭ್ರಮಗೊಂಡು ಒಬ್ಬರಿಗೊಬ್ಬರು ಉಡುಗೋರೆಗಳನ್ನು ಕಳುಹಿಸುವರು.**

ದೇವರು ತನ್ನ ಜನರನ್ನು ಕಾಪಾಡುವನೆಂಬ ವಾಗ್ದಾನದ ಅರ್ಥವು ಅವರಿಗೆ ಎಂದಿಗೂ ಹಿಂಸೆಯ ಬರುವದಿಲ್ಲ ಎಂದಾಗಿರಲಿಲ್ಲ. ಎಲ್ಲರೂ ಅಲ್ಲದಿದ್ದಾಗ್ಯೂ, ಬಹಳಷ್ಟು ಮಂದಿಯು ಬಾಧೆಯನ್ನನುಭವಿಸಲಿದ್ದರು. ಕೆಲವು ಮರಣವನ್ನು ಸಹ ಅನುಭವಿಸಲಿದ್ದರು. ಈ ಸತ್ಯವು ಇಬ್ಬರು ಸಾಕ್ಷಿಗಳ ಕಥೆಯಲ್ಲಿ ಚಿತ್ರಾತ್ಮಕವಾಗಿ ವಿವರಿಸಲ್ಪಟ್ಟಿರುತ್ತದೆ. ಅವರು ತಮ್ಮ ಸಾಕ್ಷಿಯ ನಿಮಿತ್ತವಾಗಿ ಕೊಲ್ಲಲ್ಪಟ್ಟರು. ಇದು ಸಂಭವಿಸಿದ ವೇಳೆ, ಸತ್ಯಕ್ಕೆ ಜಯವಾಗಿರುತ್ತದೆಂದು *ಕಾಣಿಸ*ಲಿಲ್ಲ. ಬದಲಾಗಿ, ಕೆಟ್ಟತನವು ಗೆದ್ದಿರುತ್ತದೆಂಬಂತೆ *ತೋರಿತ್ತು*. ಹೇಗೂ, ತೋರಿಕೆಗಳು ಮೋಸಕರವಾಗಿರಬಲ್ಲವು.

**ವಚನ 7.** ದೇವರು ಇಬ್ಬರು ಸಾಕ್ಷಿಗಳಿಗೆ ನೀಡಿದ ಶಕ್ತಿಯನ್ನು ಬಣ್ಣಿಸಿದ 5 ಮತ್ತು 6 ವಚನಗಳ ತರುವಾಯ, ಮುಂದಿನ ವಚನವು ಅನಿರೀಕ್ಷಿತವೆಂಬಂತೆ ತೋರಬಹುದಾಗಿದೆ: **ಇವರು ತಮ್ಮ ಸಾಕ್ಷಿಯನ್ನು ಹೇಳಿ ಮುಗಿಸಿದನಂತರ ಅಧೋಲೋಕದಿಂದ ಬರುವ ಮೃಗವು ಇವರ ಮೇಲೆ ಯುದ್ಧಮಾಡಿ ಇವರನ್ನು ಜಯಿಸಿ ಕೊಲ್ಲುವದು.**

**ಬರುವ** ಎಂಬುದು ಗ್ರೀಕ್ ಭಾಷೆಯಲ್ಲಿ ವರ್ತಮಾನಕಾಲ ರೂಪದಲ್ಲಿದೆ (τό ἀναβαῖνον, *to anabainon*; ಇದು ἀναβαίνω, *anabainō* ಎಂಬುದರಿಂದ ಬಂದದ್ದು), ಇದು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ದುಷ್ಟ ಶಕ್ತಿಗಳು ಯಾವದು ಒಳ್ಳೇದೋ ಮತ್ತು ಸತ್ಯವೋ ಅದನ್ನು ವಿರೋಧಿಸುವದಕ್ಕಾಗಿ ನಿರಂತರವಾಗಿ ಎದ್ದೇಳುತ್ತಲೇ ಇರುತ್ತವೆ (ನೋಡಿರಿ 17:8). **ಯುದ್ಧ**ದ ಕುರಿತು 12ನೇ ಅಧ್ಯಾಯದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗುವದು; ಆದರೆ ಈ ಕ್ಷಣದಲ್ಲಿ, (1) ಇದೊಂದು ಆತ್ಮೀಕ ಯುದ್ಧವಾಗಿದೆ, ಹೊರತು ಶಾರೀರಿಕವಾದದ್ದಲ್ಲ, ಮತ್ತು (2) ಇದೊಂದು ನಿರಂತರವಾಗಿ ಸಾಗುವ ಯದ್ಧವಾಗಿದೆ, ಹೊರತು ಒಂದೇ ಸಾರಿ ನಡೆದು ಮುಗಿಯುವಂಥ ಕಾದಾಟವಲ್ಲ ಎಂಬುದನ್ನು ಗ್ರಹಿಸಿಕೊಳ್ಳಿರಿ (ನೋಡಿರಿ ಎಫೆಸ 6:12).

ಇಬ್ಬರು ಸಾಕ್ಷಿಗಳ ಸಾವಿಗೆ ಜವಾಬ್ದಾರವಾಗಿರುವವನನ್ನು **ಮೃಗ** ಎಂದು ಕರೆಯಲಾಗಿರುತ್ತದೆ. ಈ ಜೀವಿಯು - ಪುಸ್ತಕದ ಕಡೇ ಅರ್ಧಭಾಗದಲ್ಲಿ ಪ್ರಮುಖ ಕಾರಣಾಂಶವಾಗಿರಲಿದ್ದಾನೆ - ಹೆಚ್ಚುಕಡಿಮೆ ಅನೌಪಚಾರಿಕವಾದ ರೀತಿಯಲ್ಲಿ ಪರಿಚಯಿಸಲ್ಪಡುತ್ತದೆ. "ಮೃಗ" ದ ಕುರಿತಾದ ಮೂವತ್ತಾರು ಉಲ್ಲೇಖನಗಳಲ್ಲಿ 7ನೇ ವಚನವು ಮೊದಲನೆಯದ್ದಾಗಿದೆ. "ಮೃಗ" ಎಂಬ ಪದದ ಮುಂಚೆ ಅಲ್ಲೊಂದು ನಿರ್ದಿಷ್ಟ ಗುಣವಾಚಿ

("the") ಇರುವದರಿಂದ, ಯೋಹಾನನ ವಾಚಕರಿಗೆ "ಮೃಗವು" ಪರಿಚಿತವಾಗಿತ್ತೆಂಬುದಾಗಿ ಅನೇಕರು ಭಾವಿಸಿಕೊಳ್ಳುತ್ತಾರೆ, ಆದರೆ ಈ ಊಹೆಯು ಸತ್ಯವಾಗಿರಬೇಕೆಂಬ ಅವಶ್ಯಕತೆಯಿಲ್ಲ. ಗ್ರೀಕ್ ವಾಕ್ಯವು 3ನೇ ವಚನದಲ್ಲಿ ಅಕ್ಷರಶಃ "ಆ ನನ್ನ ಇಬ್ಬರು ಸಾಕ್ಷಿಗಳು" ಎಂದು ಹೇಳುತ್ತದೆ, ಆದರೆ ಇಬ್ಬರು ಸಾಕ್ಷಿಯ ಸಂಕೇತವು ವಾಚಕರಿಗೆ ಪರಿಚಿತವಾಗಿರಲಿಲ್ಲ ಅನ್ನಿಸುತ್ತದೆ: ಇಬ್ಬರು ಸಾಕ್ಷಿಗಳ ಚಿತ್ರಣವು 11ನೇ ಅಧ್ಯಾಯದ ಮುಂಚೆಯಾಗಲಿ ಅಥವಾ ನಂತರವಾಗಲಿ ಕಂಡು ಬರುವದಿಲ್ಲ.

ಮೃಗದ ಕುರಿತಾದ ವಿವರಗಳು 13 ಮತ್ತು 17 ಅಧ್ಯಾಯಗಳ ತನಕವೂ ಕೊಡಲ್ಪಡುವದಿಲ್ಲ (13:1, 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ನಮೂನೆಯು ಪ್ರಕಟನೆ ಪುಸ್ತಕದಲ್ಲಿ ಅಸಹಜವಾದದ್ದೇನಲ್ಲ. 2 ಮತ್ತು 3 ಅಧ್ಯಾಯಗಳಲ್ಲಿ, ಅನೇಕ ವಿಷಯಗಳು ವಿವರಣೆಯಿಲ್ಲದೆಯೇ ಪರಿಚಯಿಸಲ್ಪಡುತ್ತಾದರೂ ಪುಸ್ತಕದ ನಂತರದ ಭಾಗದಲ್ಲಿ ಅವುಗಳ ಪ್ರಧಾನವಾಗಿರುತ್ತವೆ - ಉದಾಹರಣೆಗೆ, "ಪರಲೋಕದಿಂದ ಇಳಿದು ಬರುವ ಯೆರೂಸಲೇಮ್" (3:12; ನೋಡಿರಿ 21:2). ಅದೇ ರೀತಿಯಲ್ಲಿಯೇ, 14:8ನೇ ವಚನವು ಬಾಬೆಲಿನ ಬೀಳುವಿಕೆಯನ್ನು ಘೋಷಿಸುತ್ತದೆ, ಹಾಗಿದ್ದರೂ ಬಾಬೆಲ ಪಟ್ಟಣವು 17ನೇ ಅಧ್ಯಾಯದಲ್ಲಷ್ಟೆ ಪರಿಯಿಸಲ್ಪಡುತ್ತದೆ (ನೋಡಿರಿ 17:5) ಮತ್ತು ಅದು 18ನೇ ಅಧ್ಯಾಯವು ಬರುವ ತನಕವೂ ನಾಶಗೊಳಿಸಲ್ಪಟ್ಟಿರುವದಿಲ್ಲ (ನೋಡಿರಿ 18:2, 10, 21).

ಅನೇಕ ಸಾರಿ ಮೃಗವು ಅಧೋಲೋಕದೊಳಗಿಂದ ಬರುವ ಅರಸನೇ (9:11) ಆಗಿರುತ್ತದೆಂದು ಭಾವಿಸಿಕೊಳ್ಳಲಾಗುತ್ತದೆ, ಆದರೆ ಈ ಸಂಬಂಧಗೊಳಿಸುವಿಕೆಯಂತೆಯೇ ಇರಬೇಕೆಂಬ ಅವಶ್ಯಕತೆಯಿಲ್ಲ (9:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅನೇಕ ಲೇಖಕರು ಮೃಗವನ್ನು "ಕ್ರಿಸ್ತವಿರೋಧಿ" ಎಂದು ಗುರುತಿಸುತ್ತಾರೆ. ಮೃಗವು ಯಾರೆಂಬುದರ ಕುರಿತು ನಂತರದ ವ್ಯಾಖ್ಯೆಗಳಲ್ಲಿ ಚರ್ಚಿಸಲಾಗುವದು. ಈ ಕ್ಷಣಕ್ಕಾದರೋ, ಮೃಗವನ್ನು ದೇವರ ಬಲಿಷ್ಠ ಶತ್ರು ಎಂಬುದಾಗಿ ಗುರುತಿಸಿದರೆ ಸಾಕಾಗುತ್ತದೆ.

ದರ್ಶನದಲ್ಲಿ, ಶತ್ರುವು **ಅಧೋಲೋಕದಿಂದ** ಬಂದಿತು. ಐದನೆಯ ತುತೂರಿ ಮತ್ತು ಮಿಡತೆಗಳ ಕುರಿತ ವ್ಯಾಖ್ಯೆಗಳಲ್ಲಿ, ಅಧೋಲೋಕವು "ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ" (ಮತ್ತಾಯ 25:41) "ಬೆಂಕಿಗಂಧಕಗಳುರಿಯುವ ಕೆರೆ" (20:10) ಅಲ್ಲ ಎಂಬುದನ್ನು ಒತ್ತಿ ಹೇಳಲಾಗಿರುತ್ತದೆ. ಬದಲಾಗಿ, ಈ ಸಂಕೇತವು ಭೂಮಿಯ ಮೇಲ್ಭಾಗದ ವರೆಗೆ ತಲುಪುವ ಒಂದು ಭೂಗರ್ಭದಲ್ಲಿರುವ ಸುರಂಗವನ್ನೊಳಗೊಂಡ ಕೂಪವನ್ನು, ದುರಾತ್ಮಗಳು ನ್ಯಾಯತೀರ್ಪಿಗಾಗಿ ಕಾದುಕೊಂಡಿರುವ ಸ್ಥಳವನ್ನು ಬಣ್ಣಿಸುತ್ತದೆ - ದುಸ್ವಪ್ನಕಾರಿ ಜೀವಿಗಳು ಹಿಂಡುಹಿಂಡಾಗಿರುವಂಥ ಒಂದು ಭೂಮ್ಯಾಂತರ್ಗತದಲ್ಲಿರುವ ಗುಹೆ (9:1, 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ವಸಂತ ಕಾಲವು ಬರುವದು ನಿದ್ರಾವಸ್ಥೆಯಲ್ಲಿರುವ ಜೀವಿಗಳನ್ನು ಸಹ ಎಚ್ಚರಗೊಳ್ಳುವಂತೆ ಮಾಡುವ ಪ್ರಕಾರವೇ, ದೇವರ ವಾಕ್ಯವನ್ನು ಬೋಧಿಸುವದು ಮೃಗವನ್ನು ಎಚ್ಚರಗೊಳಿಸುತ್ತದೆ - ಮತ್ತು ಆತನು ಭಯಾನಕ ಕೂಪದಿಂದ ಭಯಂಕರ ಉದ್ದೇಶದೊಂದಿಗೆ ರಭಸವಾಗಿ ನುಗ್ಗಿ ಬರುತ್ತಾನೆ. ಆತನು ಹವಾಮಾನವನ್ನು ನಿಯಂತ್ರಿಸಿ ಬಲವಾದ ಅದ್ಭುತಗಳನ್ನು ಮಾಡಿದಂಥ ಬೆಂಕಿಯನ್ನು ಉಗುಳುವ ವ್ಯಕ್ತಿಗಳ ವಿರುದ್ಧ ಯಶಸ್ವಿಯಾಗುವ ಸಾಧ್ಯತೆಯಿರುತ್ತದೋ? ಹೌದು: ಮೃಗವು **ಇವರನ್ನು ಜಯಿಸಿ ಕೊಲ್ಲುವದು** ಎಂದು ಯೋಹಾನನು ಹೇಳಿದನು.

ಕೆಲವರು "ದೇವರೇ, ನೀನು ಏಕೆ ಅದನ್ನು ನಡೆಯುವಂತೆ ಬಿಟ್ಟೆ?" ಎಂದು ಗೋಳಾಡುವ

ಪ್ರಲೋಭನೆಗೆ ಒಳಗಾಗಬಹುದಾಗಿದೆ. 7ನೇ ವಚನದ ಆರಂಭದ ಭಾಗವು ಆ ಪ್ರಶ್ನೆಗೆ ಭಾಗಶಃ ಉತ್ತರವನ್ನು ಕೊಡುತ್ತದೆ: ಸಾಕ್ಷಿಗಳು **ತಮ್ಮ ಸಾಕ್ಷಿಯನ್ನು ಹೇಳಿ ಮುಗಿಸಿದ**ವರಾಗಿದ್ದರು. "ಮುಗಿಸಿ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (τελέω, *teleō* ಎಂಬುದರಿಂದ ಬಂದದ್ದು) ಸೂಚಿಸುವದೇನೆಂದರೆ "ಸಾಕ್ಷಿಯು ತನ್ನ ಮುಕ್ತಾಯವನ್ನು ಅಥವಾ ಗುರಿಯನ್ನು ಸಾಧಿಸಿ[ತ್ತು]."[39] ಮೃಗವು ಇಬ್ಬರು ಸಾಕ್ಷಿಗಳನ್ನು ಕೊಲ್ಲುವದಕ್ಕೆ ಶಕ್ತವಾಗಿತ್ತು, ಆದರೆ ಅದಕ್ಕೆ ಮುಂಚೆ ಅವರು ತಮ್ಮ ಕೆಲಸವನ್ನು ಪೂರ್ತಿಗೊಳಿಸಿ ಬಿಟ್ಟಿದ್ದರು. ಸರಳವಾಗಿ ಹೇಳುವದಾದರೆ, ಮೃಗವು ಪ್ರವಾದಿಗಳನ್ನು ಕೊಂದಿತ್ತೇ, ಹೊರತು ಅವರ ಸಾಕ್ಷಿಯನ್ನಲ್ಲ.

ಸಾಂಕೇತಿಕತೆ ಹಾಗೂ ವಾಸ್ತವಿಕತೆಗಳ ನಡುವೆ ಒಂದು ಕ್ಲುಪ್ತವಾದ ವಿವರಣೆಯು ಇಲ್ಲಿ ಸೂಕ್ತವೇನಿಸುತ್ತದೆ: ಯೋಹಾನನ ದರ್ಶನದಲ್ಲಿ, ಸಾಕ್ಷಿಗಳು ಮೃಗದಿಂದ ದಾಳಿಗೆ ತುತ್ತಾಗುವ ಮುನ್ನವೇ ತನ್ನ ಬೋಧನೆಯನ್ನು *ಪೂರ್ತಿಗೊಳಿಸಿದ್ದರು.* ವಾಸ್ತವಿಕದಲ್ಲಿ, ದುಷ್ಟ ಶಕ್ತಿಗಳು ಈಗಲೂ ದೇವರ ವಾಕ್ಯದ ಉಪದೇಶಕರು ಬೋಧನೆಯನ್ನು *ಮಾಡುತ್ತಿರುವಾಗ* ಈಗಲೂ ಅವರ ಮೇಲೆ ನಿರಂತರವಾಗಿ ದಾಳಿಯನ್ನು ಮಾಡುತ್ತಲೇ ಇರುತ್ತವೆ. 6:9-11ರಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುವ ಕ್ರೈಸ್ತರ ಕೊಲ್ಲಲ್ಪಡುವಿಕೆಯು ಮುಂದುವರೆಯುವದಾಗಿದೆ ಎಂಬುದನ್ನು ಪರಿಗಣಿಸಿರಿ. ಇಲ್ಲಿ ಯಾವದೇ ತದ್ವಿರುದ್ಧತೆಯು ಇರುವದಿಲ್ಲ. ಒಂದು ಸಾಂಕೇತಿಕತೆಯಾಗಿದ್ದರೆ, ಮತ್ತೊಂದು ವಾಸ್ತವಿಕತೆಯಾಗಿದೆ - ಆದರೆ ಅಂತ್ಯ ಫಲಿತವು ಒಂದೇ ಆಗಿರುತ್ತದೆ.

ಈ ಮುಂಚೆ ಯೋಹಾನನ ದಿಗಳಲ್ಲಿ, ಈ ಇಬ್ಬರು ಸಾಕ್ಷಿಗಳು ವಾಕ್ಯವನ್ನು ಪ್ರಚುರಪಡಿಸುತ್ತಿರುವ ಸಕಲ ನಂಬಿಗಸ್ತ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೆಂದು ಅಭಿಪ್ರಾಯವನ್ನು ತಿಳಿಸಲಾಗಿರುತ್ತದೆ. ಈ ಯೋಚನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡವರಾಗಿ, 7ನೇ ವಚನವನ್ನು ಮೊದಲ ಶತಮಾನದ ಸನ್ನಿವೇಶದಲ್ಲಿ ಇಡೋಣ: ಕ್ರೈಸ್ತ ಬೋಧಕರು ಮತ್ತು ಉಪದೇಶರನ್ನು ಕೊಲ್ಲಲಾಗುತ್ತಿತ್ತೋ? ಹೌದು. ಇದು ಅವರ ಸಾಕ್ಷಿಯನ್ನು ನಾಶಗೊಳಿಸಿತೋ? ಇಲ್ಲ: ದೇವರ ವಾಕ್ಯವು ಇಂದಿನ ತನಕವೂ ಬದುಕುಳಿದಿರುತ್ತದೆ - ಮತ್ತು ಈ ಲೋಕವು ಇರುವ ತನಕವೂ ಸಹಿಸಿಕೊಂಡು ನಿಲ್ಲುವದು. ದೇವರ ವೈರಿಗಳು ಸುವಾರ್ತೆಯ ಪ್ರಗತಿಯನ್ನು ನಿಲ್ಲಿಸುವದಕ್ಕೆ ಶಕ್ತರಾಗಲಿಲ್ಲ - ಅವರು ಎಂದಿಗೂ ಶಕ್ತರಾಗುವದೂ ಇಲ್ಲ. ಸತ್ಯವು ಜಯ ಹೊಂದುವದೆಂದು ದೇವರು ಶಾಸನ ಹೊರಡಿಸಿದ್ದಾನೆ (ನೋಡಿರಿ ಯೆಶಾಯ 55:11).

**ವಚನ 8. ಈ ಸಾಕ್ಷಿಗಳ ಶವಗಳು ಮಹಾ ಪಟ್ಟಣದ ಬೀದಿಯಲ್ಲಿ ಬಿದ್ದಿರುವವು.** 8 ಮತ್ತು 9 ವಚನಗಳಲ್ಲಿ **ಶವಗಳ** ಬಗ್ಗೆ ಮೂರು ಸಾರಿ ಉಲ್ಲೇಖಿಸಲಾಗುತ್ತದೆ. ಮೂಲ ಭಾಷೆಯಲ್ಲಿ, ಮೊದಲ ಎರಡು ಉಲ್ಲೇಖನಗಳು ಏಕವಚನವಾದ πτῶμα (*ptōma,* "ಶವ") ಎಂದಿದ್ದರೆ, ಮೂರನೆಯ ಉಲ್ಲೇಖನದಲ್ಲಿ πτώματα (*ptōmata,* "ಶವಗಳು") ಎಂದಿರುತ್ತದೆ. ಸ್ಪಷ್ಟವಾಗಿರುವ ಪ್ರಕಾರ, ಮೊದಲ ಎರಡು ಉಲ್ಲೇಖನಗಳು ಸಾಕ್ಷಿಗಳ ಕೆಲಸದ ಮತ್ತು ಅಂತ್ಯಾವಸ್ಥೆಯ ಏಕರೂಪತೆಯನ್ನು ಸೂಚಿಸುತ್ತದೆ - ನಾವು ಒಂದೇ ರೀತಿಯಲ್ಲಿ ಹಲವಾರು ಜನರ ಹೃದಯಗಳ ಮೇಲೆ ಪ್ರಭಾವವುಂಟಾದ ವೇಳೆ ನಾವು "ಅವರ ಹೃದಯ" (ಏಕವಚನ) ಎಂದು ಹೇಳುವ ರೀತಿಯಲ್ಲಿಯೇ ಆಗಿದೆ.

ಇಬ್ಬರು ಸಾಕ್ಷಿಗಳ ಶವಗಳು **ಬೀದಿಯಲ್ಲಿ** (πλατεῖα, *plateia*) ಬಿದ್ದಿದ್ದವು. *Plateia* ಎಂಬುದು ಒಂದು ವಿಸ್ತಾರವಾದ ಬೀದಿಯನ್ನು ಸೂಚಿಸುತ್ತದೆ ಮತ್ತು ಅದು πλατύς (*platus*) ಎಂಬ ಪದಕ್ಕೆ ಸಂಬಂಧಪಟ್ಟದ್ದಾಗಿದೆ, ಅದರರ್ಥವು ಒಂದು "ವಿಸ್ತಾರ" ಅಥವಾ "ಅಗಲ" ಎಂದಾಗಿದೆ (ಮತ್ತಾಯ 7:13). *Plateia* ಎಂಬುದು ಒಂದು ಪಟ್ಟಣದಲ್ಲಿರುವ ಪ್ರಮುಖ

ಬೀದಿಯನ್ನು ಕರೆಯುವ ಹೆಸರಾಗಿತ್ತು.

ಈ ನಿರ್ದಿಷ್ಟವಾದ ಬೀಯು **ಮಹಾ ಪಟ್ಟಣದಲ್ಲಿತ್ತು**. "ಮಹಾ" (μεγάλη, *megalē*) ಎಂಬ ಪದವು 11ನೇ ಅಧ್ಯಾಯದಲ್ಲಿ ಅನೇಕ ಸಾರಿ ಕಾಣಿಸಿಕೊಳ್ಳುತ್ತದೆ. ಇದು ಅಧ್ಯಾಯದಲ್ಲಿ ಮತ್ತು ಪ್ರಕಟನೆ ಪುಸ್ತಕದುದ್ದಕ್ಕೂ ಮುಖ್ಯವಾದ ಪದವಾಗಿದೆ. ಈ ಮಹಾ ಪಟ್ಟಣಕ್ಕೆ **ಗೂಢಾರ್ಥವಾಗಿ ಸೊದೋಮ್ ಎಂತಲೂ ಐಗುಪ್ತ ಎಂತಲೂ ಹೆಸರುಗಳುಂಟು.** "ಗೂಢಾರ್ಥವಾಗಿ" ಎಂಬುದು ಗ್ರೀಕ್ ಪದವಾಗಿರುವ πνευματικῶς (*pneumatikōs*) ಎಂಬುದರಿಂದ ಅನುವಾದಿಸಲ್ಪಟ್ಟಿರುತ್ತದೆ. ಇದು "ಆತ್ಮೀಕವಾಗಿ" (KJV), "ರೂಪಕವಾಗಿ" (RSV), "ಸಾಂಕೇತಿಕವಾಗಿ" (NIV) ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ. ಒಬ್ಬನು ಯಾವ ಪದವನ್ನು ಬಳಸಲು ಇಷ್ಟಪಟ್ಟರೂ ಸರಿಯೇ, ಇಲ್ಲಿ ಸಾಂಕೇತಿಕವಾದ ಭಾಷೆಯು ಬಳಸಲ್ಪಟ್ಟಿದೆ ಎಂಬುದನ್ನು ಈ ವಾಕ್ಯಭಾಗವು ತಿಳಿಸುತ್ತದೆ.

ಅನೇಕರು ಈ ಪಟ್ಟಣವು ಅಕ್ಷರಶಃ, ಶಾರೀರಿಕವಾದ ಯೆರೂಸಲೇಮ್ ಪಟ್ಟಣ ಎಂದು ಭಾವಿಸುತ್ತಾರೆ ಯಾಕೆಂದರೆ ವಾಕ್ಯಭಾಗವು ಅದನ್ನು **ಇವರ ಒಡೆಯನು ಸಹ ಅಲ್ಲಿಯೇ ಶಿಲುಬೆಗೆ ಹಾಕಲ್ಪಟ್ಟನು** ಎಂದು ಗುರುತಿಸುತ್ತದೆ. ಈ ಸಾಂಕೇತಿಕತೆಯು ಯೆರೂಸಲೇಮ್ ಪಟ್ಟಣದಿಂದ ಬರುವದಾಗಿದೆ ಆದರೆ Michael Wilcockನು ಒಂದು ಸೂಕ್ತವಾದ ಪ್ರಶ್ನೆಯನ್ನೇ ಕೇಳುತ್ತಾನೆ: ಸೊದೋಮ್ ಮತ್ತು ಐಗುಪ್ತ ಎಂಬ ಹೆಸರುಗಳು ರೂಪಕಾರ್ಥದಲ್ಲಿ ಬಳಸಲ್ಪಟ್ಟಿರುವದಾದರೆ, "'ಇವರ ಒಡೆಯನು ಸಹ ಅಲ್ಲಿಯೇ ಶಿಲುಬೆಗೆ ಹಾಕಲ್ಪಟ್ಟನು' ಎಂಬುದು ಸಹ ರೂಪಕಾರ್ಥವೇಕೆ ಆಗಿರಬಾರದು?"[40] ಇಬ್ರಿಯ ಪುಸ್ತಕದ ಲೇಖಕನು ಗಮನಕ್ಕೆ ತಂದ ಪ್ರಕಾರ, ದೇವರ ಮಗನು ಒಂದಕ್ಕಿಂತ ಅಧಿಕ ಬಾರಿ ಶಿಲುಬೆಗೆ ಹಾಕಲ್ಪಟ್ಟಿದ್ದಾನೆ (ಇಬ್ರಿಯ 6:6).

G. B. Cairdನು ಅಭಿಪ್ರಾಯ ಪಡುವದೇನೆಂದರೆ, "ಯೋಹಾನನು *ಮಹಾ ಪಟ್ಟಣ* ಎಂಬ ಇದೇ ಪದವನ್ನು, ಇನ್ನೂ ಏಳು ಸಾರಿ ಬಳಸುತ್ತಾನೆ [16:19; 17:18; 18:10, 16, 18, 19, 21], ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಅಲ್ಲಿ ರೋಮ್ ನಗರವನ್ನು ಉದ್ದೇಶಿಸಿ ಹೇಳಲಾಗಿರುತ್ತದೆಂಬುದನ್ನು ಸನ್ನಿವೇಶವು ಸ್ಪಷ್ಟಗೊಳಿಸುತ್ತದೆ."[41] ವಿಶೇಷವಾಗಿ, ಉಳಿದ ಏಳು ಸಂದರ್ಭಗಳಲ್ಲಿ ಆ ಪದವು "ಬಾಬೆಲ" ನ್ನು ಸೂಚಿಸುತ್ತದೆ ಮತ್ತು "ಬಾಬೆಲ" ರೋಮ್ ನಗರಕ್ಕೆ ಬಳಸಲಾಗುವ ಗೂಢಲಿಪಿಯ ಪದವಾಗಿರುತ್ತದೆ. ರೋಮ್ ನಗರವು ಇಬ್ಬರು ಸಾಕ್ಷಿಗಳ ಕಥನಕ್ಕೆ ಸರಿಯಾಗಿಯೇ ಹೊಂದಿಕೊಳ್ಳುತ್ತದೆ (ನೋಡಿರಿ 18:24).

ಹೇಗೂ, 11ನೇ ಅಧ್ಯಾಯದ "ಮಹಾ ಪಟ್ಟಣ" ವನ್ನು ವಿಶ್ವದ ಒಂದೇ ಸ್ಥಳಕ್ಕೆ ಮಿತಿಗೊಳಿಸುವ ವಿಷಯದಲ್ಲಿ ಒಬ್ಬನು ಎಚ್ಚರವಾಗಿರತಕ್ಕದ್ದು. Martin Franzmann ಹೇಳಿದ್ದೇನೆಂದರೆ "'ಮಹಾ ಪಟ್ಟಣ'ವು . . . 'ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕರಿಸುವ' ([ಇಬ್ರಿಯ] 10:29) ಪ್ರತಿಯೊಂದು ಮತ್ತು ಯಾವದೇ ಸ್ಥಳಕ್ಕೆ ಒಂದು ಸಂಕೇತವಾಗಿರುತ್ತದೆ."[42]

8ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಮೂರು ಸ್ಥಳಗಳು "ಮಹಾ ಪಟ್ಟಣ" ದ *ಗುಣಸ್ವಭಾವ*ವನ್ನು ಕುರಿತು ಮಾತಾಡುತ್ತದೆ: ಅದು "ಸೊದೋಮಿನ ದುರಾಚಾರಕ್ಕೆ, ಐಗುಪ್ತದ ಫರೋಹನ ನಿರಂಕುಶತನಕ್ಕೆ, ಮತ್ತು ಯೆರೂಸಲೇಮಿನ ಕುರುಡು ಅವಿಧೇಯತನಕ್ಕೆ ಉತ್ತರಾಧಿಕಾರಿ."[43] ಹೆಚ್ಚು ಪ್ರಾಮುಖ್ಯವಾಗಿ, ಮೂರು ಸ್ಥಳಗಳು ಪಟ್ಟಣದ *ಅಂತ್ಯಾವಸ್ಥೆ* ಕುರಿತು ಮಾತಾಡುತ್ತವೆ: ಸೊದೋಮ್, ಐಗುಪ್ತ, ಮತ್ತು ಯೆರೂಸಲೇಮ್ ಪಟ್ಟಣಗಳೆಲ್ಲಾ

ದೇವರ ನ್ಯಾಯತೀರ್ಪನ್ನು ಅನುಭವ ಮಾಡಿದವು - ಮತ್ತು "ಮಹಾ ಪಟ್ಟಣ" ವು ಸಹ ನ್ಯಾಯತೀರ್ಪಿಗೆ ಗುರಿಯಾಗುವದು!

**ವಚನ 9.** ಯೋಹಾನನು ಮುಂದುವರೆಸುತ್ತಾನೆ, **ಸಕಲ ಪ್ರಜೆ ಕುಲ ಭಾಷೆ ಜನಾಂಗಗಳಿಗೆ ಸೇರಿದವರು ಈ ಸಾಕ್ಷಿಗಳ ಶವಗಳನ್ನು ಮೂರುವರೆ ದಿನಗಳವರೆಗೂ ನೋಡುತ್ತಾ ಇರುವರು; ಅವುಗಳನ್ನು ಸಮಾಧಿಯಲ್ಲಿ ಇಡಗೊಡಿಸುವದಿಲ್ಲ. ಸಕಲ ಪ್ರಜೆ ಕುಲ ಭಾಷೆ ಜನಾಂಗಗಳಿಗೆ ಸೇರಿದವರು** ಎಂಬ ಪದಗುಚ್ಛವು "ಎಲ್ಲಾ ಕಡೆಗಳಲ್ಲಿರುವ ಸಕಲ ಮನುಷ್ಯರು" ಎಂಬ ಸಾಮಾನ್ಯ ಅರ್ಥದಲ್ಲಿ ಬಳಸಲ್ಪಟ್ಟಿದೆ. ಈ ವಾಕ್ಯಭಾಗದಲ್ಲಿ, ಪದಗಳು "ಭೂನಿವಾಸಿಗಳು" (ವ. 10) ಎಂಬ ಪದಗುಚ್ಛದೊಂದಿಗೆ ಪರ್ಯಾಯವಾಗಿ ಬಳಸಲ್ಪಟ್ಟಿವೆ. ಭೂನಿವಾಸಿಗಳು ಎಂದರೆ ಅವಿಶ್ವಾಸಿಗಳು, ಕ್ರೈಸ್ತೇತರರು ಆಗಿದ್ದರು. ಶವಗಳನ್ನು ಯಾರು ಸಮಾಧಿಗಳಲ್ಲಿಡುವದಕ್ಕೆ ಬಯಸಿದ್ದರೆಂಬುದನ್ನು ಇಲ್ಲಿ ತಿಳಿಸಲಾಗಿರುವದಿಲ್ಲ ಯಾಕೆಂದರೆ ಆ ವಿವರಣೆಯು ದೃಶ್ಯಕ್ಕೆ ಏನನ್ನೂ ಕೂಡಿಸುವದಾಗಿರುವದಿಲ್ಲ. ಸಮಾಧಿಯಲ್ಲಿ ಇಡುವದಕ್ಕೆ ಬಯಸಿದವರು ಮಿತ್ರರಾಗಿರಬಹುದು ಅಥವಾ ಅನುತಾಪ ಪಡುವ ಕ್ರೈಸ್ತೇತರರು ಸಹ ಆಗಿರಬಹುದಾಗಿದೆ. ಈ ಕಡೆಯ ಸಾಧ್ಯತೆಗೆ ಅಪೊಸ್ತಲರ ಕೃತ್ಯಗಳು 19:31ರಿಂದ ಬೆಂಬಲ ಸಿಕ್ಕುತ್ತದೆ, ಅದರಲ್ಲಿ ಪೌಲನ ಕ್ರೈಸ್ತೇತರ ಮಿತ್ರರು ಎಫೆಸದಲ್ಲಿ ಗಲಬೆಕೋರರಿಂದ ಆತನನ್ನು ತಪ್ಪಿಸಿ ಕಾಪಾಡುವದಕ್ಕೆ ಪ್ರಯತ್ನಿಸಿದರು. ಇಬ್ಬರು ಸಾಕ್ಷಿಗಳ ಶವಗಳನ್ನು ಸಮಾಧಿಯಲ್ಲಿಡುವದಕ್ಕೆ ಅನುಮತಿಸುವದರ ಬದಲಾಗಿ ಭೂನಿವಾಸಿಗಳು ಅವರ ಶವಗಳನ್ನು ಕ್ರಿಮಿಗಳಿಗೆ, ಕಾಡು ನಾಯಿಗಳಿಗೆ, ಮತ್ತು ಮಾಂಸ ತಿನ್ನುವ ಪಕ್ಷಿಗಳಿಗೆ ತುತ್ತಾಗುವಂತೆ ಬೀದಿಯ ನಡುವೆ ಬಿಟ್ಟರು. ಒಬ್ಬ ಮನುಷ್ಯನಿಗೆ ಬರುವಂಥ ಅತ್ಯಂಥ ದೊಡ್ಡ ದುರಂತಗಳಲ್ಲೊಂದು ಎಂದರೆ ಅವನ ಶವವು ಸಮಾಧಿ ಮಾಡಲ್ಪಡದೆಯೇ ಉಳಿಯುವದೇ ಆಗಿದೆ (ನೋಡಿರಿ ಕೀರ್ತನೆ 79:1-3; ಯೆಶಾಯ 5:25; ಯೆರೆಮೀಯ 8:1, 2).

**ವಚನ 10. ಈ ಇಬ್ಬರು ಪ್ರವಾದಿಗಳು ಭೂನಿವಾಸಿಗಳನ್ನು ಪೀಡಿಸಿದ್ದರಿಂದ ಇವರು ಸತ್ತದ್ದಕ್ಕೆ ಭೂನಿವಾಸಿಗಳು ಸಂತೋಷಿಸಿ ಸಂಭ್ರಮಗೊಂಡು ಒಬ್ಬರಿಗೊಬ್ಬರು ಉಡುಗೋರೆಗಳನ್ನು ಕಳುಹಿಸಿದರು.** ಇಬ್ಬರು ಸಾಕ್ಷಿಗಳ ಶವಗಳು ಬೀದಿಯಲ್ಲಿಯೇ ಎಸೆಯಲ್ಪಟ್ಟಾಗ, ಲೋಕದಲ್ಲೆಲ್ಲಾ ಇರುವ ಅವಿಶ್ವಾಸಿಗಳು ಒಂದಾಗಿ ಕೂಡಿ ಅವುಗಳನ್ನು ದೃಷ್ಟಿಸಿ ಸಂಭ್ರಮ ಪಡುವದಕ್ಕೆ ಬಂದರು. ಕೆಲವರು ಉಡುಗೋರೆಗಳು ಎಂದರೆ ಅವರ ಹಬ್ಬದೂಟದ ಇಷ್ಟವಾಗುವ ಪಾಲುಗಳು ಆಗಿದ್ದವೆಂದು ಯೋಚಿಸುತ್ತಾರೆ (ನೋಡಿರಿ ಎಸ್ತೇರಳು 9:19). ಅಪೊಸ್ತಲನ ಮಾತುಗಳು ಒಂದು ವಿಕೃತವಾದ ಚಿತ್ರಣವನ್ನು ನೀಡುತ್ತವೆ. Henry Sweteನು ಹೀಗೆ ಹೇಳಿದನು, "ವಿಕ್ಷಕರ ಸಂಭ್ರಮವು . . . ಒಮ್ಮೆಗೆ ಪೈಶಾಚಿಕ ಹಾಗೂ ಹುಡುಗಾಟಿಕೆ ರೀತಿಯದ್ದಾಗಿತ್ತು."[44] ಸತ್ಯವು ಬಿದ್ದು ಹೋಗುವಂತೆ ಕಾಣಿಸುವಾಗ ತಪ್ಪು ಸಂಭ್ರಮಿಸುತ್ತದೆ; ತನಗೆ ಜಯವಾಗಿದೆ ಎಂದು ಭಾವಿಸಿಕೊಳ್ಳುವಾಗ ಕೆಟ್ಟತನವು ಹಿಗ್ಗುತ್ತದೆ.[45]

ಭೂನಿವಾಸಿಗಳು ಸಂಭ್ರಮ ಪಡುತ್ತಿದ್ದುದಕ್ಕೆ ಕಾರಣವೇನೆಂದರೆ **ಈ ಇಬ್ಬರು ಪ್ರವಾದಿಗಳು ಭೂನಿವಾಸಿಗಳನ್ನು ಪೀಡಿಸಿದ್ದ**ರು. ದೇವರ ವಕ್ತಾರರು ಪೀಡಿಸುವ *ಉದ್ದೇಶಕ್ಕೋಸ್ಕರವಾಗಿ* ಸಾರಲಿಲ್ಲ. ಅವರ ಉದ್ದೇಶವು ಆತ್ಮಗಳನ್ನು ರಕ್ಷಿಸಬೇಕೆಂಬುದೆ ಆಗಿತ್ತು (ರೋಮಾ 1:16). ಅಷ್ಟುಮಾತ್ರವಲ್ಲದೆ, ಅವರು ದೇವರ ವಾಕ್ಯವನ್ನು ತಿಳಿಯಪಡಿಸಿದ *ರೀತಿಯನ್ನು* ನೋಡಿದರೆ ಅವರು ಪೀಡಿಸಿದರೆಂಬುದಕ್ಕೆ ಯಾವದೇ ಸೂಚನೆಗಳು ಸಿಕ್ಕುವದಿಲ್ಲ. ಅವರು "ಪ್ರೀತಿಯಿಂದ ಸತ್ಯವನ್ನು" ತಿಳಿಸಿದ್ದಿರಬಹುದಾಗಿದೆ (ಎಪೆಸ 4:15). ಹೇಸಿಗೆ ಹುಟ್ಟಿಸುವವರಾಗಿರದೆಯೇ ಆಕ್ರಮಶೀಲರಾಗಿರುವದಕ್ಕೆ ಸಾಧ್ಯವಿದೆ. ಬದಲಾಗಿ, ಮನುಷ್ಯರಿಗೆ ಪೀಡಿಸಿದ್ದು *ಸತ್ಯವೇ* ಆಗಿತ್ತು

- ಯಾಕೆಂದರೆ ಸತ್ಯವು ಅವರಲ್ಲಿ ಮುಜುಗರವನ್ನು ಹುಟ್ಟಿಸಿತ್ತು, ಅವರ ಮನಸ್ಸಾಕ್ಷಿಯನ್ನು ಬಡಿದೆಬ್ಬಿಸಿತ್ತು, ಮತ್ತು ಅವರ ಜೀವಿತಗಳನ್ನು ಖಂಡಿಸಿತ್ತು. ಪಾಪಿಗಾಗುವ ಇನ್ನೊಂದು ವಿಧವಾದ ಪೀಡನೆ ಕುರಿತು ಪೈಶಾಚಿಕ ಮಿಡತೆಗಳ ವಿಷಯವಾದ ವಿಭಾಗದಲ್ಲಿ ಈಗಾಗಲೇ ವ್ಯಾಖ್ಯಾನಿಸಲಾಗಿರುತ್ತದೆ (9:3, 5). ಆ ಪೀಡೆಯು ಪಾಪಿಯ ಮೇಲೆ ಪಾಪದ ನಿಮಿತ್ತವಾಗುವ ಪರಿಣಾಮವಾಗಿತ್ತು. ವಾಕ್ಯದ ಬೋಧನೆಯಿಂದುಂಟಾಗುವ ಪೀಡೆಯು ಅದೇ ರೀತಿಯದ್ದಲ್ಲ, ಆದರೆ ಅದಕ್ಕೆ ಪೂರಕವಾಗಿರುತ್ತದೆ: ಕೆಲವು ಸಾರಿ, ಈಗಾಗಲೇ ತಪ್ಪು ಪಾಪದ ದೆಸೆಯಿಂದ ನೋವಿಗೊಳಗಾಗುತ್ತಿದ್ದರೆ ಅವರಿಗೆ ಅವರ ಕೃತ್ಯಗಳು ದೇವರಿಗೆ ಇಷ್ಟವಿಲ್ಲ ಮತ್ತು ಅವರು ಆ ರೀತಿಯಲ್ಲಿ ಜೀವಿಸುವದು *ಬೇಕಾಗಿಯೇ* ಇಲ್ಲ ಎಂಬುದಾಗಿ ಹೇಳುವಾಗ, ಅವರು ಕೋಪಗೊಂಡವರಾಗುತ್ತಾರೆ.

ಶಾಸ್ತ್ರಗಳಲ್ಲಿ ಈ ವಿಧದ "ಪೀಡೆ" ಯ ಉದಾಹರಣೆಗಳು ಬಹಳಷ್ಟು ತುಂಬಿರುತ್ತವೆ: ಅರಸನಾದ ಆಹಾಬನು ಎಲೀಯನನ್ನು ಕಂಡಾಗ, ಅವನಿಗೆ ಹೀಗೆ ಹೇಳಿದನು, "ಇಸ್ರಾಯೇಲ್ಯರಿಗೆ ಆಪತ್ತನ್ನು ಬರಮಾಡಿದವನೇ, ನೀನು ಬಂದಿಯಾ" (1 ಅರಸು 18:17). ಇಸ್ರಾಯೇಲ್ಯರ ತೊಂದರೆಗಳಿಗೆ ಸ್ವತಃ ಆಹಾಬನ ಪಾಪಗಳೇ ಕಾರಣವಾಗಿದ್ದವು; ಆದರೆ ಅರಸನ ಪ್ರಕಾರವಾದರೋ, ಅದಕ್ಕೆ ಎಲೀಯನೇ ಹೊಣೆಗಾರನಾಗಿದ್ದನು. ಸ್ನಾನಿಕನಾದ ಯೋಹಾನನು ಅರಸನಾದ ಹೆರೋದನನ್ನು ಅವನು ಹೆರೋದ್ಯಳನ್ನು ಕಾನೂನುಬಾಹಿರವಾಗಿ ಮದುವೆ ಮಾಡಿಕೊಂಡದ್ದೂ ಸೇರಿದಂತೆ ಅವನ ಸ್ವಚ್ಛಂದ ಜೀವನಶೈಲಿಯನ್ನು ಖಂಡನೆ ಮಾಡಿದಾಗ, ಯೋಹಾನನ ಸಂದೇಶವು ಹೆರೋದ್ಯಳಿಗೆ ಪೀಡೆಯನ್ನುಂಟು ಮಾಡಿತ್ತು (ಮತ್ತಾಯ 14:3; ಮಾರ್ಕ 6:17, 19, 22-24) - ಮತ್ತು ಯೋಹಾನನ ತಲೆಯನ್ನು ತಟ್ಟೆಯಲ್ಲಿಟ್ಟು ಆಕೆಗೆ ಕೊಡುವ ತನಕವೂ ಆಕೆಯು ವಿಶ್ರಮಿಸಿಕೊಳ್ಳಲಿಲ್ಲ. ಯೇಸುವು ಫರಿಸಾಯರ ಸಂಪ್ರದಾಯಗಳನ್ನು ಖಂಡಿಸುವ ಮೂಲಕವಾಗಿ ಅವರನ್ನು "ಪೀಡಿಸಿದ್ದನು" - ಮತ್ತು ಅವರು ಅವನನ್ನು ಕೊಲ್ಲಬೇಕೆಂದು ಸಂಚು ರೂಪಿಸಿದರು (ನೋಡಿರಿ ಮತ್ತಾಯ 12:14; 15:12; 21:45). ಅಪೊಸ್ತಲರ ಸಂದೇಶವು ಹಿರೀ ಸಭೆಯವರಿಗೆ ಪೀಡೆಯುಂಟು ಮಾಡಿತ್ತು (ಅಪೊಸ್ತಲರ ಕೃತ್ಯಗಳು 5:33), ಅದೇ ರೀತಿಯಲ್ಲಿ ಸ್ತೇಫನನು ಹಿರೀ ಸಭೆಯ ಮುಂದೆ ಮಾಡಿದ ಮಹಾ ಸಂದೇಶವು ಅವರಿಗೆ ಪೀಡೆಯುಂಟು ಮಾಡಿತ್ತು (ಅಪೊಸ್ತಲರ ಕೃತ್ಯಗಳು 7:54, 57, 58). ಪೌಲನು ದೇಶಾಧಿಪತಿಯ ಮುಂದೆ "ಸುನೀತಿ ದಯೆ ಮುಂದಣ ನ್ಯಾಯ ವಿಚಾರಣೆ ವಿಷಯವಾಗಿ ಪ್ರಸ್ತಾಪಿಸುತ್ತಿದ್ದಾಗ ಫೇಲಿಕ್ಸನು ಭಯಗ್ರಸ್ತನಾದನು" (ಅಪೊಸ್ತಲರ ಕೃತ್ಯಗಳು 24:25).

ಅಪೊಸ್ತಲ ಪೌಲನು ತನ್ನ ಬೋಧನೆಯನ್ನು "ಕ್ರಿಸ್ತನ ಪರಿಮಳ" ಎಂದು ಕರೆದನು ಮತ್ತು ಅದನ್ನು ಸ್ವೀಕರಿಸಿಕೊಳ್ಳುವವರಿಗೆ ಆತನ ಸಂದೇಶವು "ಜೀವದಿಂದ ಹುಟ್ಟಿ ಜೀವವನ್ನು ಹುಟ್ಟಿಸುವ ವಾಸನೆಯಾಗಿಯೂ" ಇರುತ್ತದೆ, ಆದರೆ ಅದನ್ನು ತಿರಸ್ಕರಿಸುವವರಿಗೆ ಅದು "ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ ವಾಸನೆಯಾಗಿಯೂ" ಇರುತ್ತದೆಂದು ಹೇಳಿದನು (2 ಕೊರಿಂಥ 2:14-16). Eugene Petersonನು ಪೌಲನು ಮಾತುಗಳನ್ನು ಹೀಗೆ ಭಾವಾನುವಾದಗೊಳಿಸುತ್ತಾನೆ: ". . . ನಾವು ದೇವರ ಬಳಿಗೆ ಏರಿ ಹೋಗುವ ಸುವಾಸನೆಯನ್ನು ಬೀರುತ್ತೇವೆ, ಅದು ರಕ್ಷಣೆಯ ಮಾರ್ಗದಲ್ಲಿರುವವರಿಂದ ಗುರುತಿಸಲ್ಪಡುತ್ತದೆ - ಅದು ಜೀವದಿಂದ ಕೂಡಿದ ಪರಿಮಳ. ಆದರೆ ನಾಶನದ ಮಾರ್ಗದಲ್ಲಿರುವವರೋ ನಮ್ಮನ್ನು ಕೊಳೆಯುತ್ತಿರುವ ಶವದಿಂದ ಬರುವ ದುರ್ವಾಸನೆ ಎಂಬಂತೆ ಕಾಣುತ್ತಾರೆ."[46]

ಮನುಷ್ಯರು ಸತ್ಯದ ನಿಮಿತ್ತವಾಗಿ ಪೀಡೆಗೊಳಗಾಗುವಾಗ, ಅವರು ಪ್ರತ್ಯಾಕ್ರಮಣವನ್ನು

ಮಾಡುತ್ತಾರೆ. "ಒಂದು ಕಚ್ಚಲ್ಪಟ್ಟಿರುವ ಮನಸ್ಸಾಕ್ಷಿಯು ಮರಳಿ ಕಚ್ಚುವದು; ಚುಚ್ಚಲ್ಪಟ್ಟಿರುವ ಮನಸ್ಸಾಕ್ಷಿಯು ಪ್ರತಿಯಾಗಿ ಕಚ್ಚುವದು."[47] ಕ್ರೈಸ್ತರು ದೇವರ ಆದೇಶಕ್ಕೆ ವಿಧೇಯರಾಗುವದಾದರೆ (ಮತ್ತಾಯ 28:18-20), ಅವರು ಕೆಟ್ಟದ್ದಾಗಿ ನಡಿಸಿಕೊಳ್ಳಲ್ಪಡುವದನ್ನು ಭರವಸದಿಂದ ಎದುರು ನೋಡಬಹುದಾಗಿದೆ. ಯೇಸು ತನ್ನ ಶಿಷ್ಯರಿಗೆ ಹೀಗೆ ಎಚ್ಚರಿಸಿದನು, "ನನ್ನ ಹೆಸರಿನ ನಿಮಿತ್ತ ಎಲ್ಲರೂ ನಿಮ್ಮನ್ನು ಹಗೆಮಾಡುವರು" (ಮತ್ತಾಯ 10:22; ನೋಡಿರಿ 24:9; ಲೂಕ 21:17; ಯೋಹಾನ 16:33). ಪೌಲನು ಸ್ಪಷ್ಟವಾಗಿ "ಕ್ರಿಸ್ತನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು" ಎಂದು ಹೇಳಿದನು (2 ತಿಮೊಥೆ 3:12).

Robert Mounceನು ಬರೆದದ್ದೇನೆಂದರೆ "ಲೋಕವು ದೇವರ ಸಂದೇಶದ ಕಡೆಗೆ ಯಾವಾಗಲೂ ಹಗೆತನವನ್ನು ತೋರಿಸಿರುತ್ತದೆ," ಮತ್ತು ಬಳಿಕ ಈ ಸತ್ಯವನ್ನು ಸೇರ್ಪಡೆಗೊಳಿಸಿ ಹೇಳುತ್ತಾನೆ, "ಇದು ದಿನೇ ದಿನೇ ದುಷ್ಟತನವು ಹೆಚ್ಚಾಗುತ್ತಿರುವ ಈ ಲೋಕದಲ್ಲಿ ಆರಾಮವಾಗಿ ಅಸ್ತಿತ್ವದಲ್ಲಿರುವ ಸಮಕಾಲಿನ ಸಭೆಯನ್ನು ಸ್ವಲ್ಪ ಚಿಂತೆಗೀಡು ಮಾಡತಕ್ಕದ್ದು."[48] Thomas Torranceನು ಅದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ:

> ಯೇಸು ಕ್ರಿಸ್ತನ ಸಭೆಯು ಏಕೆ ಇಂದು ತನ್ನ ಸುತ್ತಲಿನ ಸಂಗತಿಗಳನ್ನು ಚಿಂತೆಯಿಲ್ಲದೆ ನೋಡುತ್ತಾ ಕುಳಿತಿರುತ್ತದೆ? ಕ್ರೈಸ್ತ ಜನರು ಏಕೆ ಈ ದುಷ್ಟ ಹಾಗೂ ಕಳವಳಕಾರಿ ಲೋಕದಲ್ಲಿ ಸುಖವಾಗಿಯೂ ಕಳವಳವಿಲ್ಲದೆಯೂ ಜೀವಿಸುತ್ತಾರೆ? ಖಂಡಿತವಾಗಿಯೂ ಅದಕ್ಕೆ ಕಾರಣವೇನೆಂದರೆ ನಾವು ದೇವರ ವಾಕ್ಯಕ್ಕೆ ಸತ್ಯವಂತರಾಗಿರುವದಿಲ್ಲ ಎಂಬುದೆ.[49]

## ಇಬ್ಬರು ಸಾಕ್ಷಿಗಳು ಪುನಃ ಜೀವವನ್ನು ಪಡೆಯುತ್ತಾರೆ (11:11-13)

**[11]ಮೂರುವರೆ ದಿನಗಳಾದ ಮೇಲೆ ದೇವರಿಂದ ಜೀವಾತ್ಮ ಬಂದು ಆ ಶವಗಳಲ್ಲಿ ಹೋಗಲು ಅವು ಕಾಲೂರಿ ನಿಂತವು. ಅವರನ್ನು ನೋಡಿದವರಿಗೆ ಮಹಾ ಭಯವು ಹಿಡಿಯಿತು. [12]ಆ ಮೇಲೆ ಅವರಿಗೆ - ಇಲ್ಲಿ ಮೇಲಕ್ಕೆ ಬನ್ನಿರಿ ಎಂದು ಆಕಾಶದ ಮಹಾ ವಾಣಿಯು ಹೇಳಿತು. ಅದನ್ನು ಅವರು ಕೇಳಿ ಮೇಘ ವಿಮಾನದಲ್ಲಿ ಪರಲೋಕಕ್ಕೆ ಏರಿಹೋದರು; ಅವರ ಶತ್ರುಗಳು ಅವರನ್ನು ನೋಡುತ್ತಾ ಇದ್ದರು. [13]ಅದೇ ಗಳಿಗೆಯಲ್ಲಿ ಮಹಾ ಭೂಕಂಪವುಂಟಾಗಿ ಆ ಪಟ್ಟಣದ ಹತ್ತರಲ್ಲೊಂದಂಶವು ಬಿದ್ದುಹೋಯಿತು; ಆ ಭೂಕಂಪದಿಂದ ಏಳು ಸಾವಿರ ಮಂದಿ ಸತ್ತು ಹೋದರು. ಉಳಿದವರು ಭಯಗ್ರಸ್ತರಾಗಿ ಪರಲೋಕ ದೇವರನ್ನು ಘನಪಡಿಸಿದರು.**

**ವಚನ 11.** ಎರಡು ಜೀವರಹಿತ ದೇಹಗಳ ಸುತ್ತ ನಡೆಯುತ್ತಿದ್ದ ಹಬ್ಬದ ವಾತಾವರಣಕ್ಕೆ ಬೇಸರ ತರುವಂತದ್ದಾಗಿತ್ತು. ಮೃತ ಶರೀರಗಳ ಸುತ್ತ ಪ್ರಾಕೃತ ರಜಾಕಾಲವು ಸುಳಿಯಂತೆ ಸುತ್ತುತ್ತಿದ್ದರೆ, ಎಲ್ಲವೂ ಕಳೆದು ಹೋಯಿತೆನೋ ಎಂಬಂತೆ ತೋರಿತ್ತು. ದೇವರ ಸಂದೇಶಕರನ್ನು ಶಾಂತಗೊಳಿಸಲಾಗಿತ್ತು; ಕೆಡುಕಿನ ಕ್ರೂರ ನಗುವು ಮಾತ್ರವೇ ಕೇಳಿಸಬಹುದಾಗಿತ್ತು. ಹೇಗೂ, ಯಾವಾಗಲೂ ಕೊನೆಯಲ್ಲಿ ಜಯಿಸುವದು ದೇವರೇ. ದುಷ್ಟ ಜನರು ಒಳ್ಳೇದರ ಹಾಗೂ ಪರಿಶುದ್ಧವಾದದ್ದರ ಸಾವಿನಲ್ಲಿ ಸಂಭ್ರಮಿಸುವಾಗ, "ಅವರ ಔತಣ ಕೂಟವು ಇನ್ನೇನು ಚೆನ್ನಾಗಿ ಸಾಗುವದೆನ್ನುವಷ್ಟರಲ್ಲಿ ಯಾವಾಗಲೂ ಭಂಗ ಪಡಿಸಲ್ಪಡುತ್ತದೆ."[50]

ನಾಟಕೀಯವಾದ ಘಟನಾವಳಿಯು **ಮೂರುವರೆ ದಿನಗಳಾದ ಮೇಲೆ** ಎಂಬ ಮಾತುಗಳಿಂದ ಆರಂಭಗೊಳ್ಳುತ್ತದೆ. ಪುನಃ ಇಲ್ಲಿ "3½" ಎಂಬ ಸಾಂಕೇತಿಕ ಸಂಖ್ಯೆಯು ಇದ್ದು

ಅದು ಸಂಕಷ್ಟ, ಕಷ್ಟ, ಮತ್ತು ಪರಿಶೋಧನೆ ಇವುಗಳೊಂದಿಗೆ ಸಂಬಂಧಿಸಿದ್ದಾಗಿದೆ. 10 ಮತ್ತು 11 ವಚನಗಳಲ್ಲಿ ಬಳಸಲಾಗಿರುವ ಅಂಕಿಯು ಈ ಮುಂಚೆ ಬಳಸಲಾಗಿದ್ದ ಅಂಕೆಯೊಂದಿಗೆ ತದ್ವಿರುದ್ಧವಾಗಿರುತ್ತದೆ: ಸಾಕ್ಷಿಗಳು 3½ *ವರ್ಷಗಳ* ಕಾಲ ಸಾಕ್ಷಿ ಹೇಳಿದರು (ವ. 3), ಆದರೆ ಕೇವಲ 3½ *ದಿನಗಳ* ಕಾಲದ ವರೆಗೆ ಮಾತ್ರವೇ ಸತ್ತವರಾಗಿದ್ದರು. ಇವುಗಳಲ್ಲಿ ಯಾವ ಅಂಕಿಯೂ ಅಕ್ಷರಶಃವಲ್ಲ; ಇಲ್ಲಿ ತದ್ವಿರುದ್ಧತೆಯು ದೀರ್ಘ ಕಾಲಾವಧಿ ಹಾಗೂ ಒಂದು ಕ್ಲುಪ್ತ ಕಾಲಾವಧಿಗಳ ನಡುವಿನದ್ದಾಗಿದೆ. ಈ ತದ್ವಿರುದ್ಧತೆಯು ತೋರಿಸಿ ಕೊಡುವದೇನೆಂದರೆ ದುಷ್ಟರ ಜಯವು ಕ್ಷಣಿಕವಾದದ್ದು ಎಂಬುದೆ.

ಮೂರುವರೆ ದಿನಗಳಾದ ಮೇಲೆ, **ದೇವರಿಂದ ಜೀವಾತ್ಮವು ಬಂದು** ಸಾಕ್ಷಿಗಳೊಳಗೆ **ಹೋಗಲು ಅವು ಕಾಲೂರಿ ನಿಂತವು**. ಅನೇಕ ವರ್ಷಗಳ ಮುಂಚೆ ಪ್ರವಾದಿಯಾದ ಯೆಹೆಜ್ಕೇಲನಿಗೆ ಬಿಳಿಚಿಕೊಂಡ ಒಣ ಮೂಳೆಗಳಿಂದ ತುಂಬಿದ್ದ ಕಣಿವೆಯು ತೋರಿಸಲ್ಪಟ್ಟಿತ್ತು, ಆ ಮೂಳೆಗಳು ಹತಾಶೆಯಿಂದ ಸೋತು ಹೋಗಿದ್ದ ಇಸ್ರಾಯೇಲ್ಯರನ್ನು ಪ್ರತಿನಿಧಿಸುತ್ತಿದ್ದವು. ಪ್ರವಾದಿಯು ನೋಡುತ್ತಲೇ ಇರುವ ವೇಳೆ, ಮೂಳೆಗಳು ಪಟಪಟನೆ ಶಬ್ದ ಮಾಡಲಾರಂಭಿಸಿದವು. ಮೂಳೆಗಳೆಲ್ಲಾ ಒಂದುಗೂಡಿ ಅಸ್ತಿಪಂಜರದ ರೂಪಗೊಂಡವು. ಅಸ್ತಿಪಂಜರದೊಳಗಿಂದ ಸ್ನಾಯುಗಳು ಹಾಗೂ ಚರ್ಮಗಳು ಹೊರಹೊಮ್ಮಿದವು. ಅಂತಿಮವಾಗಿ, "ಶ್ವಾಸವು ಅವುಗಳಲ್ಲಿ ಹೊಕ್ಕಿತ, ಬದುಕಿದವು, ಕಾಲೂರಿ ನಿಂತವು" (ಯೆಹೆಜ್ಕೇಲ 37:10; ನೋಡಿರಿ ಆದಿಕಾಂಡ 2:7; 6:17; 7:15, 22). ಯೆಹೆಜ್ಕೇಲನ ದರ್ಶನದ ಒತ್ತು ಏನಾಗಿತ್ತೆಂದರೆ, ಪರಿಸ್ಥಿತಿಯು ಎಷ್ಟೇ ನಿರಾಶೆದಾಯಕವಾಗಿ ಕಂಡರೂ ಸರಿಯೇ, ದೇವರು ಪರಿಸ್ಥಿತಿಗೆ ಪುನಃ ಜೀವವನ್ನು ತುಂಬಿಸಬಲ್ಲನು. ಅದೇ ರೀತಿಯಲ್ಲಿಯೇ, ಹಿಂಸೆಯನ್ನು ಎದುರಿಸುತ್ತಿದ್ದ ಕ್ರೈಸ್ತರಿಗೆ ಯೋಹಾನನು ದರ್ಶನವು ಹೇಳಿದ್ದೇನೆಂದರೆ, "ಅದು ಎಷ್ಟೇ ಘೋರವಾಗುತ್ತಾ ಹೋದರೂ ಸರಿಯೇ, ನಿರೀಕ್ಷೆಯು ಯಾವಾಗಲೂ ಇದ್ದೇ ಇದೆ. ದೇವರ ಜನರು ಜಯ ಹೊಂದುವರು!"

ರೋಮನ್ನರಿಂದ ಎಷ್ಟೇ ಸಾವಿರ ಜನರು ಕೊಲ್ಲಲ್ಪಟ್ಟಾಗ್ಯೂ, ಎಷ್ಟು ಕ್ರೈಸ್ತರು ಕಾಡು ಮೃಗಗಳಿಂದ ಕೊಲ್ಲಲ್ಪಟ್ಟರೂ ಸರಿಯೇ ಅಥವಾ ಕಂಬಕ್ಕೆ ಕಟ್ಟಿ ಸುಡಲ್ಪಟ್ಟರೂ ಸರಿಯೇ, ವರ್ತುಲ ಕ್ರೀಡಾರಂಗದ ಮರಳಿನ ನೆಲದಲ್ಲಿ ಎಷ್ಟೇ ರಕ್ತವು ಇಂಗಿ ಹೋದರೂ ಸರಿಯೇ, ರೋಮನ್ ಸರ್ಕಾರವು ಸತ್ಯದ ಪ್ರಗತಿಯನ್ನು ನಿಲ್ಲಿಸುವದಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಯೋಹಾನನ ದರ್ಶನವು ವಾಗ್ದಾನ ಮಾಡಿತ್ತು. ಅದು ಸಭೆಯನ್ನು ನಾಶಗೊಳಿಸುವದಕ್ಕೆ ಸಾಧ್ಯವಾಗಲಿಲ್ಲ.

ಇಲ್ಲಿ ಒಂದು ವಿಶಾಲವಾದ ಅನ್ವಯಿಕೆಯನ್ನು ಸಹ ಮಾಡಬಹುದಾಗಿದೆ: ದೇವರ ಯೋಜನೆಗಳ ಹಾಗೂ ಉದ್ದೇಶಗಳನ್ನು ಈ ಭೂಮಿಯ ಮೇಲಿನ ಯಾವ ಶಕ್ತಿಯೂ ಹಳಿ ತಪ್ಪಿಸುವದಕ್ಕೆ ಸಾಧ್ಯ*ವಿಲ್ಲ*. ಇಷ್ಟೊಂದು ವರ್ಷಗಳಿಂದಲೂ, ಅನೇಕರು ಪ್ರಯತ್ನಿಸಿದ್ದಾರೆ ಮತ್ತು ಎಲ್ಲರೂ ವಿಫಲರಾಗಿದ್ದಾರೆ. ಈ ದರ್ಶನವು "ಇತಿಹಾಸವು ದೃಢಪಡಿಸುವದನ್ನೇ ತಿಳಿಸುವದಾಗಿದೆ, ಏನೆಂದರೆ ಸಭೆಯ ಬಾಯಿ ಮುಚ್ಚಿಸುವದಕ್ಕೆ ಸಾಧ್ಯವಿಲ್ಲ ಎಂಬದೆ."[51] William Cullen Bryantನ ಚಿರಸ್ಮರಣೀಯವಾದ ಮಾತುಗಳಲ್ಲಿ ಹೇಳುವದಾದರೆ, "ಭೂಮಿಗೆ ಅಂಟಿಕೊಳ್ಳುವಂತೆ ತುಳಿಯಲ್ಪಟ್ಟ ಸತ್ಯವು ಪುನಃ ಎದ್ದೇಳುವದು."[52]

ಯೆಶಾಯನು ಹೀಗೆ ಬರೆದನು, "ಹುಲ್ಲು ಒಣಗಿಹೋಗುವದು, ಹೂವು ಬಾಡಿ ಹೋಗುವದು, ನಮ್ಮ ದೇವರ ಮಾತೋ ಸದಾಕಾಲವೂ ಇರುವದು" (ಯೆಶಾಯ 40:8). ಯೇಸುವು ಹೀಗೆ ಹೇಳಿದನು, "ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ

ಮಾತುಗಳು ಅಳಿದು ಹೋಗುವದೇ ಇಲ್ಲ" (ಮತ್ತಾಯ 24:35). ನಾಶಗೊಳಿಸಲಾಗದ ವಾಕ್ಯವು ರಾಜ್ಯದ "ಬೀಜ" ಆಗಿರುವದರಿಂದ (ಲೂಕ 8:11), ಯೇಸುವಿನ ಮಾತುಗಳ ಅರ್ಥವು ಆತನ ರಾಜ್ಯವಾದ ಸಭೆಯನ್ನು (ಮತ್ತಾಯ 16:18, 19) ಸಹ ಎಂದಿಗೂ ನಾಶಗೊಳಿಸುವದಕ್ಕೆ ಸಾಧ್ಯವಿಲ್ಲ ಎಂದಾಗಿರುತ್ತದೆ. ಅಲ್ಲದೆ "ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18).

ಇಬ್ಬರು ಸಾಕ್ಷಿಗಳು ಮೂರುವರೆ ದಿನಗಳಿಂದ ನಿದ್ರೆಯಲ್ಲಿದ್ದು ಈಗ ಎಚ್ಚರಗೊಂಡರೋ ಎಂಬಂತೆ ನಿಂತುಕೊಂಡಾಗ ಸಂಭ್ರಮ ಪಡುತ್ತಿದ್ದವರ ಮೇಲೆ ಉಂಟಾದ ಪ್ರಭಾವವು ಬಹು ಅಮೋಘವಾಗಿತ್ತು: **ಅವರನ್ನು ನೋಡಿದವರ ಮಹಾ ಭಯವು ಹಿಡಿಯಿತು.** ಭೂನಿವಾಸಿಗಳು ಭಯ ಪಡುವದಕ್ಕೆ ಕಾರಣವಿತ್ತು. "ಕೊಲೆ ಮಾಡುವದು ಮನುಷ್ಯನು ಮಾಡುವ ಕಟ್ಟಕಡೇ ಪ್ರಯತ್ನವಾಗಿರುತ್ತದಾದ್ದರಿಂದ, ಸತ್ತವರೊಳಗಿಂದ ಎದ್ದು ಬರುವವರನ್ನು ಏನು ಮಾಡುವದಕ್ಕೆ ಸಾಧ್ಯವಿರುತ್ತದೆ!"[53] ಸತ್ಯಕ್ಕೆ ಇರುವಂತಯ ಚೇತರಿಸಿಕೊಳ್ಳುವ ಶಕ್ತಿಯನ್ನು ಕಂಡು ಲೋಕವು ಯಾವಾಗಲೂ ಆಶ್ಚರ್ಯಗೊಳ್ಳುತ್ತದೆ ಮತ್ತು ಮೂಕವಿಸ್ಮಿತಗೊಳ್ಳುತ್ತದೆ.

**ವಚನ 12.** ಬಳಿಕ ಸಾಕ್ಷಿಗಳಿಗೆ **ಇಲ್ಲಿ ಮೇಲಕ್ಕೆ ಬನ್ನಿರಿ ಎಂದು ಆಕಾಶದ ಮಹಾ ವಾನಿಯು ಹೇಳಿತು**. ದೇವರು ಯಾವಾಗಲೂ ಒಂದು ಕಡೇ ಮಾತನ್ನು ಹೊಂದಿದ್ದಾನೆ - ಮತ್ತು ತನ್ನ ಸಾಕ್ಷಿಗಳಿಗೆ ಆತನು ನುಡಿದ ಕಡೇ ಮಾತು "ಇಲ್ಲಿ ಮೇಲಕ್ಕೆ ಬನ್ನಿರಿ" ಎಂದಾಗಿತ್ತು. **ಅದನ್ನು ಅವರು ಕೇಳಿ ಮೇಘ ವಿಮಾನದಲ್ಲಿ ಪರಲೋಕಕ್ಕೆ ಏರಿಹೋದರು.** ಸಾಕ್ಷಿಗಳು ಪರಲೋಕಕ್ಕೆ ಏರಿ ಹೋಗುವಂತದ್ದು ಮೇಘಗಳಲ್ಲಿ ಏರಿ ಪರಲೋಕಕ್ಕೆ ಹೋದ ಯೇಸುವಿನ ಪರಲೋಕಾರೋಹಣವನ್ನು (ಅಪೊಸ್ತಲರ ಕೃತ್ಯಗಳು 1:9) ಮತ್ತು ಎಲೀಯನ ಪರಲೋಕಾರೋಹಣವನ್ನು ಜ್ಞಾಪಿಸುವದಾಗಿದೆ (2 ಅರಸು 2:11). ಇಬ್ಬರು ಸಾಕ್ಷಿಗಳು ಪರಲೋಕಕ್ಕೆ ಏರಿಹೋಗುತ್ತಿರುವ ವೇಳೆ, **ಅವರ ಶತ್ರುಗಳು ಅವರನ್ನು ನೋಡುತ್ತಾ ಇದ್ದರು**.

ಆದಿ ಕ್ರೈಸ್ತರಿಗೆ ಅವರು ತಮ್ಮ ನಂಬಿಕೆಗೋಸ್ಕರ ಮರಣಿಸಬೇಕಾಗಿ ಬಂದಾಗ್ಯೂ, ಅದು ನಿರರ್ಥಕವಾಗುವದಿಲ್ಲ; ದೇವರ ಕೆಲಸವು ಮುಂದುವರೆಯುವದು ಎಂಬ ಭರವಸವು ಆ ಮೂಲಕ ಉಂಟಾಗಿತ್ತು. ಅಷ್ಟುಮಾತ್ರವಲ್ಲದೆ, ಅವರು ಕರ್ತನಿಂದ ಮರೆತು ಹೋಗಲ್ಪಡುವದಿಲ್ಲ ಎಂಬ ಭರವಸವನ್ನು ಸಹ ಕೊಡಲ್ಪಟ್ಟರು. ಆತನು ಅವರನ್ನು ಜೀವಂತವಾಗಿ ಎಬ್ಬಿಸಿ ತನ್ನೊಂದಿಗೆ ಇರುವಂತೆ ಮನೆಗೆ ಕರೆದೊಯ್ಯುವನು.

12ನೇ ವಚನವು ಕರ್ತನು ಹಿಂದಿರುಗಿ ಬರುವಾಗ ಸಂಭವಿಸುವ ದೇಹದ ಪುನರುತ್ಥಾನವನ್ನು ಚಿತ್ರಿಸುತ್ತದೆಂದು ಯೋಚಿಸುತ್ತಾರೆ (1 ಕೊರಿಂಥ 15:51-54; 1 ಥೆಸಲೋನಿಕ 4:17, 18). ಹೇಗೂ, ಬಹಳ ಸಂಭಾವ್ಯವಾದದ್ದೇನೆಂದರೆ, ಇದು ಅನಂತದರಲ್ಲಿ ಉಲ್ಲೇಖಿಸಲ್ಪಟ್ಟಿರುವ "ಮೊದಲ ಪುನರುತ್ಥಾನ" ವನ್ನು ಬಣ್ಣಿಸುತ್ತದೆ (ಪ್ರಕಟನೆ 20:5, 6): ಕ್ರೈಸ್ತ ಯುಗದ ವೇಳೆ ಕ್ರಿಸ್ತನೊಂದಿಗೆ ಜೀವಿಸುತ್ತಾ ಆಳ್ವಿಕೆಯನ್ನು ಮಾಡುವದು (20:4-6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಎರಡನೆಯ ಅರ್ಥನಿರೂಪನೆಯು ಮೂರು ಕಾರಣಗಳಿಗಾಗಿ ಆರಿಸಿಕೊಳ್ಳಲ್ಪಡುತ್ತದೆ: (1) 12ನೇ ವಚನವು ಈಗಲೂ ತುತೂರಿಯ (ಎಚ್ಚರಿಕೆಯ) ವಿಭಾಗದಲ್ಲಿಯೇ ಇರುತ್ತದೆ, ಮತ್ತು ಏಳನೆಯ ಹಾಗೂ ಕಡೇ ತುತೂರಿಯು 11:14, 15 ವಚನಗಳ ವರೆಗೂ ಊದಲ್ಪಡುವದಿಲ್ಲ. (2) ನಂತರದಲ್ಲಿ ಬರುವ ವಚನಗಳು ತುತೂರಿಯ (ಎಚ್ಚರಿಕೆಯ) ಭಾಷೆಯಲ್ಲಿ ಹೇಳಲಾಗಿರುತ್ತವೆ. 13ನೇ ವಚನದಲ್ಲಿ, ಪಟ್ಟಣದ ಹತ್ತರಲ್ಲೊಂದಂಶ "ಮಾತ್ರವೇ" ಬಿದ್ದು ಹೋಗುತ್ತದೆ; ಏಳು ಸಾವಿರ ಮಂದಿ "ಮಾತ್ರವೇ" ಕೊಲ್ಲಲ್ಪಟ್ಟರು, ಅದೇ ವೇಳೆಯಲ್ಲಿ ಮನುಷ್ಯರಲ್ಲಿ ಬಹುಪಾಲು ಮಂದಿ ("ಉಳಿದವರು") ಸಾಯಲಿಲ್ಲ. (3) ಈ ದೃಶ್ಯವು

ಸಾಂಕೇತಿಕ ಭಾಷೆಯನ್ನು ಬಳಸುವ ದರ್ಶನದಲ್ಲಿರುತ್ತದೆ.

12ನೇ ವಚನವು ದೇಹದ ಪುನರುತ್ಥಾನವನ್ನು ಕುರಿತು ಮಾತಾಡುತ್ತಿದೆ ಎಂದು ನಂಬುವಂಥ ವ್ಯಾಖ್ಯಾನಕಾರರು 13ನೇ ವಚನವನ್ನು ಕ್ರಿಸ್ತನು ಬರುವ ಸಮಸ್ತವು ನಾಶಗೊಳ್ಳುವದನ್ನು ಬಣ್ಣಿಸುತ್ತದೆಂದು ಅರ್ಥನಿರೂಪಣೆ ಮಾಡುತ್ತಾರೆ. ಇದೇ ನಂಬಿಕೆಯುಳ್ಳ ಇನ್ನು ಕೆಲವರು ಕಾಲಾನುಕ್ರಮದ ಪ್ರಕಾರವಾಗಿ 13ನೇ ವಚನವು 12ನೇ ವಚನಕ್ಕೆ ಮುಂಚೆ ಬರುವದಾಗಿದೆ ಎಂದು ಹೇಳುತ್ತಾರೆ. ಈ ಕ್ರಮಾನುಸಾರವು ಸಾಧ್ಯವಿದೆ, ಆದರೆ ವಾಕ್ಯವನ್ನು ಓದುವ ಸ್ವಾಭಾವಿಕವಾದ ರೀತಿ ಇದಾಗಿರುವದಿಲ್ಲ.

ಹಾಗಿದ್ದರೂ, 12ನೇ ವಚನದಲ್ಲಿ ಬಣ್ಣಿಸಲ್ಪಟ್ಟಿರುವ ಪುನರುತ್ಥಾನ ಹಾಗೂ ಆರೋಹಣಗಳು ಕ್ರೈಸ್ತರಿಗೆ ದೇಹದ ಪುನರುತ್ಥಾನದ ಕುರಿತು ನಿರೀಕ್ಷೆಯನ್ನು ಕೊಡುತ್ತವೆ ಬಹುಶಃ ನಂಬಿಗಸ್ತರ ಆತ್ಮಗಳು "ಕ್ರಿಸ್ತನ ಜೊತೆಯಲ್ಲಿರುವದಕ್ಕೆ" (ಫಿಲಿಪ್ಪಿ 1:23) ಹೊರಟು ಹೋಗುವಾಗ ಈ ವಚನವು *ಭಾಗಶಃ* ನೆರವೇರುವದೆಂದು ಒಬ್ಬನು ಹೇಳಬಹುದಾಗಿದೆ. ನಮ್ಮ ದುರ್ಬಲ ದೇಹಗಳು ಶಕ್ತಿಯಲ್ಲಿ ಎಬ್ಬಿಸಲ್ಪಡುವಾಗ, ನಮ್ಮ ಲಯವಾಗುವ ದೇಹಗಳು ನಿರ್ಲಯವಾಗಿ ಎಬ್ಬಿಸಲ್ಪಡುವಾಗ, ಹೀನಾವಸ್ಥೆಯಲ್ಲಿರುವ ನಮ್ಮ ದೇಹಗಳು ಮಹಿಮೆಯಲ್ಲಿ ಎಬ್ಬಿಸಲ್ಪಡುವಾಗ *ಅಂತಿಮವಾದ* ನೆರವೇರಿಕೆಯು ಸಂಭವಿಸುವದು (1 ಕೊರಿಂಥ 15:42-44, 52, 53).

**ವಚನ 13. ಅದೇ ಗಳಿಗೆಯಲ್ಲಿ ಮಹಾ ಭೂಕಂಪವುಂಟಾಗಿ ಆ ಪಟ್ಟಣದ ಹತ್ತರಲ್ಲೊಂದಂಶವು ಬಿದ್ದುಹೋಯಿತು; ಆ ಭೂಕಂಪದಿಂದ ಏಳು ಸಾವಿರ ಮಂದಿ ಸತ್ತು ಹೋದರು.** 6ನೇ ಅಧ್ಯಾಯದಲ್ಲೊಂದು ಭೂಕಂಪವು ಇತ್ತು, ಆದರೆ ಅಲ್ಲಿರುವ ಭೂಕಂಪವು ಲೋಕಾಂತ್ಯದ ವೇಳೆಯಲ್ಲಿ ಸಂಭವಿಸುವದಾಗಿತ್ತು, ಅದು ಭೂಮಿಯನ್ನು ಸಂಪೂರ್ಣ ನಾಶಗೊಳಿಸುವಂಥದ್ದು (6:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಧ್ಯಾಯ 11ರಲ್ಲಿರುವ ಭೂಕಂಪವು ಕೇವಲ ಭಾಗಶಃ ಹಾನಿಯನ್ನಷ್ಟೆ ಮಾಡುತ್ತದೆ. ದೇವರು ಈಗಲೂ ಪಶ್ಚಾತ್ತಾಪವಿಲ್ಲದವರ ಮನವೊಲಿಸುವದಕ್ಕೆ ಪ್ರಯತ್ನಿಸುವವನಾಗಿದ್ದನು, ಆದ್ದರಿಂದ ಅಲ್ಲೊಂದು ತುತೂರಿ ರೀತಿಯ ಎಚ್ಚರಿಕೆಯಿರುತ್ತದೆ: ಮಹಾ ಪಟ್ಟಣದ ಹತ್ತರಲ್ಲೊಂದಂಶದ ನಾಶನ ಹಾಗೂ ಏಳು ಸಾವಿರ ಜನರ ಮರಣ.

**ಹತ್ತರಲ್ಲೊಂದು** ಅಂಶದ ಪ್ರಕಟನೆ ಪುಸ್ತಕದೊಳಗೆ ಒಂದೇ ಸಾರಿ ಪ್ರಸ್ತಾಪಿಸಲ್ಪಟ್ಟಿದ್ದು ಅದ 13ನೇ ವಚನದಲ್ಲಿಯೇ ಆಗಿದೆ. Mounceನು ಅಭಿಪ್ರಾಯ ಪಟ್ಟದ್ದೇನೆಂದರೆ ಇದು "[ಪಟ್ಟಣದ] ಗಣನೀಯ ಭಾಗವೇ ಆಗಿತ್ತು ಆದರೆ ಅದನ್ನು ನಿಷ್ಕ್ರಿಯಗೊಳಿಸುವಷ್ಟು ಸಾಕಾದದ್ದಾಗಿರಲಿಲ್ಲ."[54] Jim McGuigganನು ಅಭಿಪ್ರಾಯ ಪಟ್ಟದ್ದೇನೆಂದರೆ, "ಹತ್ತರಲ್ಲೊಂದಂಶ ಎಂಬುದು . . . ಒಂದು ಹಣ ಸಂದಾಯದ ಒಂದು ಭಾಗದಂತಿದ್ದು ಉಳಿದದ್ದು ಅನಂತರದಲ್ಲಿ ಬರುವದಾಗಿದೆ ಎಂಬಂತೆ ತೋರುವ ರೀತಿ ಮಾತಾಡುತ್ತದೆ"[55] (ನೋಡಿರಿ ಅಧ್ಯಾಯ 18).

ಅಷ್ಟುಮಾತ್ರವಲ್ಲದೆ, **ಏಳು ಸಾವಿರ** ಸಾಂಕೇತಿಕ ಅಂಕಿಯು ಪ್ರಸ್ತಾಪಿಸಲ್ಪಟ್ಟಿರುವದು ಈ ವಚನದಲ್ಲಿ ಮಾತ್ರವೇ ಆಗಿರುತ್ತದೆ. "ಏಳು" ಮತ್ತು "ಸಾವಿರ" ಎರಡೂ ಸಂಪೂರ್ಣತೆಯನ್ನು ಸಂಕೇತಿಸುವ ಸಂಖ್ಯೆಗಳಾಗಿವೆ. ಬಹುಶಃ ಈ ಸೂಚನವು ದೇವರು ಮನುಷ್ಯರಿಗೆ ಕೊಡುವ ಎಚ್ಚರಿಕೆಗಳನ್ನು ಪೂರ್ತಿಗೊಳಿಸುತ್ತದೆಂಬ ವಾಸ್ತವಾಂಶವನ್ನು ಸೂಚಿಸುತ್ತಿರಬಹುದಾಗಿದೆ. ಈ ಎಚ್ಚರಿಕೆಯ ತರುವಾಯ, ಏಳನೆಯ ತುತೂರಿಯು ಊದಲ್ಪಡುವದಾಗಿದೆ (ವಚನಗಳು 14, 15). ಆಗ ಪಶ್ಚಾತ್ತಾಪ ಪಡುವದಕ್ಕೆ ಕಾಲವು ಮಿಂಚಿ ಹೋಗಿರುತ್ತದೆ.

ಕೆಲವರು "ಏಳು ಸಾವಿರ" ಸಂಖ್ಯೆಗೆ ಯಾವದೇ ಸಾಂಕೇತಿಕ ಮಹತ್ವಪೂರ್ಣತೆಯು ಇರುವದಿಲ್ಲ ಎಂದು, ಅದು ಒಂದು ಗಣನೀಯವಾದ ಪಟ್ಟಣದಲ್ಲಿದ್ದ ಜನಸಂಖ್ಯೆಯಲ್ಲಿ ಕೇವಲ

ಒಂದು ಅಂದಾಜು ಹತ್ತರಲ್ಲೊಂದು ಅಂಶವಷ್ಟೇ ಆಗಿತ್ತೆಂದು ನಂಬುತ್ತಾರೆ. ಇನ್ನು ಕೆಲವರು ಎತ್ತಿ ತೋರಿಸುವದೇನೆಂದರೆ, ಎಲೀಯನ ದಿನದಲ್ಲಿ ಏಳು ಸಾವಿರ ಮಂದಿ ಬಾಳನ ವಿಗ್ರಹಕ್ಕೆ ಅಡ್ಡ ಬೀಳದೆ ಇದ್ದರೆಂಬುದೆ (1 ಅರಸು 19:18); ಪ್ರಕಟನೆ 11ನೇ ಅಧ್ಯಾಯದಲ್ಲಿನ ಏಳು ಸಾವಿರ ಸಂಖ್ಯೆಯು 1 ಅರಸು 19ರಲ್ಲಿರುವ ಏಳು ಸಾವಿರಕ್ಕೆ "ತದ್ವಿರುದ್ಧವಾದ ಪ್ರತಿರೂಪ" ಆಗಿದೆ ಎಂದು ಅವರು ನಂಬುತ್ತಾರೆ.

ತುತೂರಿಯ ಸರಣಿಯುದ್ದಕ್ಕೂ ಇರುವ ರೀತಿಯಲ್ಲಿಯೇ, ದೇವರು ಪ್ರಾಥಮಿಕವಾಗಿ ಬದುಕುಳಿಯುವವರಲ್ಲಿ ಆಸಕ್ತಿಯನ್ನು ಹೊಂದಿದ್ದನು. ಆತನ ನ್ಯಾಯತೀರ್ಪುಗಳು ಅವರ ಮೇಲೆ ಯಾವ ಪರಿಣಾಮವನ್ನು ಹೊಂದಿದ್ದವು? ಯೋಹಾನನು ಹೀಗೆ ಬರೆಯುತ್ತಾನೆ, **ಉಳಿದವರು ಭಯಗ್ರಸ್ತರಾಗಿ ಪರಲೋಕ ದೇವರನ್ನು ಘನಪಡಿಸಿದರು.** ಈ ಹೇಳಿಕೆಯ ಅರ್ಥವೇನಾಗಿರುತ್ತದೆ? 9ನೇ ಅಧ್ಯಾಯದಲ್ಲಿ, "ನರಕದಿಂದ ಸೇನೆಯು" ಬಂದಾಗ "ಮನುಷ್ಯರೊಳಗೆ ಮೂರನೆಯ ಭಾಗವು" ಕೊಲ್ಲಲ್ಪಟ್ಟ ವೇಳೆ, ಕೊಲ್ಲಲ್ಪಡದೆ ಉಳಿದವರು "ಮಾನಸಾಂತರಮಾಡಿಕೊಳ್ಳ*ಲಿಲ್ಲ*" (9:18, 20; ಒತ್ತಿ ಹೇಳಿದ್ದು ನನ್ನದು). 11ನೇ ಅಧ್ಯಾಯದಲ್ಲಾದ ಭೂಕಂಪವು ಅದಕ್ಕಿಂತ ವ್ಯತ್ಯಾಸವಾದ ಫಲಿತವನ್ನುಂಟು ಮಾಡಿತ್ತೋ? ಬದುಕುಳಿದವರು ಪಶ್ಚಾತ್ತಾಪ ಪಟ್ಟರೋ? ಅವರು ಕರ್ತನವರಾಗಿ ಪರಿವರ್ತನೆಗೊಂಡರೋ?

9:20, 21ರ ಮತ್ತು ಅದೇ ರೀತಿಯ ವಾಕ್ಯಭಾಗಗಳ ಬೆಳಕಿನಲ್ಲಿ, ಭಯಗ್ರಸ್ತರಾಗಿ ದೇವರನ್ನ ಘನಪಡಿಸುವದು ಬದುಕುಳಿದವರಲ್ಲಾದ ನಿಜವಾದ ಪಶ್ಚಾತ್ತಾಪವನ್ನು ಮತ್ತು ನಿಜವಾದ ಪರಿವರ್ತನೆಯನ್ನು ಸೂಚಿಸುತ್ತದೆಂಬುದನ್ನು ನಂಬುವದಕ್ಕೆ ಕಷ್ಟವಾಗುತ್ತದೆ. ಉದಾಹರಣೆಗೆ, 13:3ನೇ ವಚನವು "*ಭೂಲೋಕದವರೆಲ್ಲರು* ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು" ಅದನ್ನು ಹಿಂಬಾಲಿಸಿದರೆಂದು ಘೋಷಿಸುತ್ತದೆ (ಒತ್ತಿ ಹೇಳಿದ್ದು ನನ್ನದು). ಆ ಹೇಳಿಕೆಯಿಂದ 11:13ರಲ್ಲಿ ಒಂದು ಸಮೂಹ ಪರಿವರ್ತನೆಯು ಸಂಭವಿಸಿತ್ತೋ ಎಂಬಂತೆ ಅನ್ನಿಸುವದೇ ಇಲ್ಲ. ಅರಸನಾದ ನೆಬೂಕದ್ನೆಚ್ಚರನು ಆಗಾಗ ಯೆಹೋವನಿಗೆ ಘನವನ್ನು ಸಲ್ಲಿಸುವಂತೆ ಪ್ರೇರಣೆ ಹೊಂದುತ್ತಿದ್ದನು (ದಾನಿಯೇಲ 2:47; 3:28; 4:1-37), ಆದರೆ ನೆಬೂಕದ್ನೆಚ್ಚರನು ಸತ್ಯವಾದ ನಂಬಿಕೆಗೆ ಪರಿವರ್ತನೆಗೊಂಡಿದ್ದನು ಎಂಬುದನ್ನು ನಿಶ್ಚಯವಾಗಿಯೂ ಯಾರೂ ವಾದಿಸುವದಿಲ್ಲ. ಕೆಲವರು 11ನೇ ಅಧ್ಯಾಯದಲ್ಲಿನ ಕಲ್ಪಿತವಾದ "ಸಮೂಹ ಪರಿವರ್ತನೆ" ಯನ್ನು ಯೆಹೂದ್ಯರಿಗಷ್ಟೆ ಸೀಮಿತಗೊಳಿಸುತ್ತಾರೆ, ಆದರೆ ದೇವರಿಗೆ ಬೇರೆ ಯಾವದೇ ಕುಲದ ಜನಾಂಗದಲ್ಲಿ ಹೊಂದಿರುವ ಆಸಕ್ತಿಗಿಂತಲೂ ಅಧಿಕವಾದ ಆಸಕ್ತಿಯನ್ನೇನೂ ಈಗ ಯೆಹೂದ್ಯರಲ್ಲಿ ಹೊಂದಿರುವೇ ಇಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಗೊಳಿಸಲಾಗಿರುತ್ತದೆ (2:9; 7:4-8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). Jim McGuigganನು ಪ್ರಕಟನೆ 11ರಲ್ಲಿ ಬದುಕುಳಿಯುವವರ ವಿಷಯದಲ್ಲಿ ನೋಡುವದಾದರೆ, "ಅವರು ಪರಿವರ್ತನೆಗೊಂಡಿರಲಿಲ್ಲ - ಕೇವಲ ಭಯಗ್ರಸ್ತರಾಗಿದ್ದರಷ್ಟೆ"[56] ಎಂದು ಹೇಳಿದ್ದು ಬಹುಶಃ ಸರಿಯಾಗಿಯೇ ಇರುತ್ತದೆ.

ಇನ್ನೊಂದು ಕಡೆಯಲ್ಲಿ, ಪ್ರಕಟನೆ ಪುಸ್ತಕದಲ್ಲಿ ವಾಕ್ಯಭಾಗಗಳು ಸೇರಿದಂತೆ ಬೈಬಲಿನೊಳಗೆ ಬೇರೆ ಕಡೆಗಳಲ್ಲಿ, ಈ 13ನೇ ವಚನದಲ್ಲಿ ಬಳಸಲಾಗಿರುವ ಪದವು ಪಶ್ಚಾತ್ತಾಪವನ್ನು ಸೂಚಿಸುವದು *ನಿಜವೇ* ಆಗಿದೆ ಎಂದು ಕೆಲವರು ಎತ್ತಿ ತೋರಿಸುತ್ತಾರೆ (ನೋಡಿರಿ ಯೆಹೋಶುವ 7:6, 19; ಯೆಶಾಯ 42:12; ಯೆರೆಮೀಯ 13:16; 1 ಪೇತ್ರ 2:12; ಪ್ರಕಟನೆ 14:7; 15:4; 16:9). ಬಹುಶಃ *ಬಹಳಷ್ಟು* ಜನರು ದೇವರ ಎಚ್ಚರಿಕೆಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸದೆ ಇದ್ದಾಗ್ಯೂ, *ಕೆಲವರಾದರೂ* ಪ್ರತಿಕ್ರಿಯಿಸುವೆಂಬ

ನಿರೀಕ್ಷೆಯು ವ್ಯಕ್ತಪಡಿಸಲ್ಪಡುತ್ತಿರಬಹುದಾಗಿದೆ. 13ನೇ ವಚನದ ಕಡೇ ಭಾಗದಲ್ಲಿ ಅದೇ ಅರ್ಥವು ಇರುತ್ತದೋ ಇಲ್ಲವೋ, ಅನುಭವವಂತೂ ಅದನ್ನು ಸತ್ಯವೆಂದು ತೋರಿಸುತ್ತದೆ. ಭಕ್ತಿಹೀನರ ಮಧ್ಯದಲ್ಲಿ ಸಹ, ಕೆಲವರಿಗೆ ಈಗಲೂ ಸ್ಪರ್ಶಿಸಲ್ಪಡಬಹುದಾದ ಹೃದಯಗಳಿರುತ್ತವೆ ಎಂಬುದಕ್ಕಾಗಿ ದೇವರಿಗೆ ಸ್ತೋತ್ರ.

## ಏಳನೆಯ ತುತೂರಿಯು ಊದಲ್ಪಡುತ್ತದೆ (11:14-18)

**[14]ಎರಡನೆಯ ವಿಪತ್ತು ಕಳೆದುಹೋಯಿತು; ಇಗೋ, ಮೂರನೆಯ ವಿಪತ್ತು ಬೇಗನೆ ಬರುತ್ತದೆ. [15]ಏಳನೆಯ ದೇವದೂತನು ತುತೂರಿಯನ್ನೂದಿದನು. ಆಗ ಪರಲೋಕದಲ್ಲಿ ಮಹಾ ಶಬ್ದಗಳುಂಟಾಗಿ – ಲೋಕದ ರಾಜ್ಯಾಧಿಕಾರವು ನಮ್ಮ ಕರ್ತ ನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು; ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು [16]ಎಂದು ಹೇಳಿದವು. ತರುವಾಯ ದೇವರ ಸಮಕ್ಷಮದಲ್ಲಿ ತಮ್ಮ ತಮ್ಮ ಸಿಂಹಾಸನಗಳ ಮೇಲೆ ಕೂತಿರುವ ಇಪ್ಪತ್ತುನಾಲ್ಕು ಮಂದಿ ಹಿರಿಯರು ಆತನಿಗೆ ಅಡ್ಡಬಿದ್ದು – [17]ಕರ್ತನೇ, ಸರ್ವಶಕ್ತನಾದ ದೇವರೇ, ಸದಾ ಇರುವಾತನೇ, ನೀನು ನಿನ್ನ ಮಹಾ ಅಧಿಕಾರವನ್ನು ವಹಿಸಿ ಕೊಂಡು ಆಳಿದ್ದರಿಂದ ನಿನಗೆ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುತ್ತೇವೆ. [18]ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವೂ ಪ್ರಕಟವಾಯಿತು. ಸತ್ತವರು ತೀರ್ಪುಹೊಂದುವ ಸಮಯ ಬಂದದೆ; ನೀನು ನಿನ್ನ ದಾಸರಾದ ಪ್ರವಾದಿಗಳಿಗೂ ದೇವ ಜನರಿಗೂ ನಿನ್ನ ನಾಮಕ್ಕೆ ಭಯಪಡುವ ದೊಡ್ಡವರಿಗೂ ಚಿಕ್ಕವರಿಗೂ ಪ್ರತಿಫಲವನ್ನು ಕೊಟ್ಟು ಲೋಕನಾಶಕರನ್ನು ನಾಶಮಾಡುವಿ ಎಂದು ಆತನನ್ನು ಆರಾಧಿಸಿದರು.**

ಬಹಳ ವೇಗವಾಗಿ ಒಂದಾದ ಮೇಲೊಂದರಂತೆ, ಮೊದಲ ಆರು ತುತೂರಿಗಳು ಊದಲ್ಪಟ್ಟವು. ನಾಲ್ಕನೆಯ ತುತೂರಿಯ ನಂತರದಲ್ಲಿ, ಯೋಹಾನನು "ಒಂದೇ ಗರುಡಪಕ್ಷಿಯು ಆಕಾಶಮಧ್ಯದಲ್ಲಿ ಹಾರಾಡುತ್ತಿತ್ತು. ಅದು – ಅಯ್ಯೋ, ಅಯ್ಯೋ, ಅಯ್ಯೋ, ಊದಬೇಕಾಗಿರುವ ಮೂವರು ದೇವದೂತರ ಮಿಕ್ಕಾದ ತುತೂರಿಯ ಧ್ವನಿಗಳು ಉಂಟಾಗುವಾಗ ಭೂನಿವಾಸಿಗಳೊಗೆ ಎಂಥಾ ವಿಪತ್ತುಗಳು ಸಂಭವಿಸುವವು ಎಂದು ಮಹಾ ಶಬ್ದದಿಂದ ಹೇಳುವದನ್ನು ಕೇಳಿದನು" (8:13). ಐದನೆಯ ತುತೂರಿಯು ಮೂರು "ವಿಪತ್ತುಗಳ"ಲ್ಲಿ ಮೊದಲನೆಯದ್ದನ್ನು ಪರಿಚಯಿಸಿತ್ತು: ಅಧೋಲೋಕದಿಂದ ಪೀಡಿಸುವ ಮಿಡತೆಗಳು ಬಂದವು. ಬಳಿಕ ಎರಡನೆಯ ಘೋಷನೆಯು ಬಂದಿತು: "ಮೊದಲನೆಯ ವಿಪತ್ತು ಕಳೆದು ಹೋಯಿತು; ಇಗೋ, ಇನ್ನೂ ಎರಡು ವಿಪತ್ತುಗಳು ಬರಬೇಕು" (9:12). ಈ ಘೋಷಣೆಯ ಬಳಿಕ ಆರನೆಯ ತುತೂರಿಯು ಊದಲ್ಪಡುತ್ತದೆ: ನಾಲ್ಕು ದೇವದೂತರು "ನರಕದಿಂದ ಬಂದ ಕುದುರೆ ಸವಾರರು" ಆಗಿ ಮಾರ್ಪಟ್ಟರು.

ಭಯಾನಕ ಸೈನ್ಯವು ಕಣ್ಣಿಗೆ ಮರೆಯಾಗುತ್ತಿದ್ದಂತೆ, ವಾಚಕನು ಏಳನೆಯ ತುತೂರಿಗಾಗಿ – ಮತ್ತು ಮೂರನೆಯ ವಿಪತ್ತಿಗಾಗಿ – ಸಿದ್ಧನಾಗಿರುತ್ತಾನೆ. ಬದಲಾಗಿ, ಮಧ್ಯಂತರ ವಿರಾಮ ಬಂದಿತ್ತು, ಆದರೆ ಕಡೇ ತುತೂರಿಯು ಮರೆತು ಹೋಗಲ್ಪಟ್ಟಿರುವದಿಲ್ಲ. ಒಬ್ಬ ಬಲಿಷ್ಠನಾದ ದೇವದೂತನು ". . . ಆಣೆಯಿಟ್ಟು ಇನ್ನು ಸಾವಕಾಶವಿರುವದಿಲ್ಲ; ಏಳನೆಯ ದೇವದೂತನು ಶಬ್ದ ಮಾಡುವ ದಿನಗಳಲ್ಲಿ ಅಂದರೆ ಅವನು ತುತೂರಿಯನ್ನು ಊದುವದಕ್ಕಿರುವ ಸಮಯದಲ್ಲಿ ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದ ಸಂಕಲ್ಪವನ್ನು . . . ನೆರವೇರಿಸುವನು ಎಂದು ಹೇಳಿದನು" (10:6, 7). ಹೆಚ್ಚುಕಡಿಮೆ ಎರಡು ಅಧ್ಯಾಯಗಳ ವರೆಗೂ, ಏಳನೆಯ

ದೇವದೂತನು ಕೈಯಲ್ಲಿ ತುತೂರಿಯನ್ನು ಹಿಡಿದು ಊದುವದಕ್ಕೆ ಸಿದ್ಧತೆಯುಳ್ಳವನಾಗಿ ನಿಂತಿದ್ದನು. ಅಂತಿಮವಾಗಿ, 11ನೇ ಅಧ್ಯಾಯದ ಅಂತ್ಯದ ಸಮೀಪಕ್ಕೆ ಬರುತ್ತಿದ್ದಂತೆ, ಎದುರುನೋಡುತ್ತಿದ್ದ ಪ್ರಕಟನೆಯು ಮಾಡಲ್ಪಟ್ಟಿತು: “ಎರಡನೆಯ ವಿಪತ್ತು ಕಳೆದುಹೋಯಿತು; ಇಗೋ, ಮೂರನೆಯ ವಿಪತ್ತು ಬೇಗನೆ ಬರುತ್ತದೆ” (ವ. 14). ಬಳಿಕ, ಬಹಳವಾಗಿ ಕಾಯ್ದ ತರುವಾಯ, “ಏಳನೆಯ ದೇವದೂತನು ತುತೂರಿಯನ್ನೂದಿದನು . . .” (ವ. 15).

ಇಲ್ಲಿಯ ತನಕ, ಪ್ರತಿಯೊಂದು ತುತೂರಿಯ ದರ್ಶನವು ಅದಕ್ಕಿಂತ ಮುಂಚಿನ ದರ್ಶನಕ್ಕಿಂತಲೂ ಹೆಚ್ಚು ಭಯಾನಕವಾಗಿ ಇರುವದಾಗಿತ್ತು: ರಕ್ತದಲ್ಲಿ ಕಲಸಿದ್ದ ಆನೆಕಲ್ಲು ಮತ್ತು ಬೆಂಕಿ (8:7), ನೀರು ರಕ್ತವಾಗಿ ಮಾರ್ಪಟ್ಟಿತು (8:8, 9), ನೀರು ವಿಷವಾಗಿ ಮಾರ್ಪಟ್ಟಿದ್ದು (8:10, 11), ವಿಶ್ವವು ಕತ್ತಲಾಗಿ ಹೋಗಿದ್ದು (8:12), ಪೀಡಿಸುವ ಮಿಡತೆಗಳು (9:1-11), ನರಕದಿಂದ ಬಂದ ಸೇನೆಯು (9:13-19). ಕಡೇ ತುತೂರಿ ಹಾಗೂ ಮೂರನೆಯ ವಿಪತ್ತು ಯಾವ ಭಯಂಕರವಾದ ದುರಂತಗಳನ್ನು ಬಯಲುಗೊಳಿಸಲಿದ್ದವು? “ವಿಪತ್ತುಗಳ” ಪ್ರಕಟನೆಯನ್ನು ಮಾಡುವ ವೇಳೆ ಒಂದೊಂದು ಹೊಸ “ವಿಪತ್ತು” ಸಹ ಮುಂಚಿನ ವಿಪತ್ತಿಗಿಂತ ಘೋರವಾಗಿರಲಿದೆ ಎಂಬ ಸೂಚ್ಯಾರ್ಥವು ಕಂಡು ಬರುತ್ತದೆ. ಏಳನೆಯ ತುತೂರಿಯ ದೃಶ್ಯದಲ್ಲಿ ಒಂದು “ವಿಪತ್ತುಭರಿತ” ಅಂಶವು ಅಡಕವಾಗಿರುತ್ತದೆ: 18ನೇ ವಚನವು ದೇವರ ಕೋಪ ಹಾಗೂ ದುಷ್ಟರ ನಾಶನದ ಕುರಿತು ಮಾತಾಡುತ್ತದೆ. ಅದರ ಜೊತೆಯಲ್ಲಿ, ಏಳನೆಯ ತುತೂರಿಯು ಪ್ರಕಟನೆ ಪುಸ್ತಕದ ಕಡೇ ಅರ್ಧಭಾಗಕ್ಕೆ ಪರಿಚಯವನ್ನು ಒದಗಿಸುವದಾಗಿದೆ, ಅದರಲ್ಲಿ ಏಳು ಕೋಪದ ಪಾತ್ರೆಗಳು ಸೇರಿರುತ್ತವೆ (ಅಧ್ಯಾಯಗಳು 15; 16). ಒಂದು ದೃಶ್ಯದಲ್ಲಿ, ಮೂರನೆಯ ವಿಪತ್ತು ಅತ್ಯಂಥ ದುರಂತಕರ “ಯಾಕೆಂದರೆ ಅದರಿಂದ ಯಾವದೇ ವಿನಂತಿಯು ಇರುವದಿಲ್ಲ.”[57]

ಹಾಗಿದ್ದರೂ, ಪ್ರಕಟನೆ 11:14-18ರಲ್ಲಿ ದೇವರ ಯೋಜನೆಗಳ ಹಾಗೂ ದೇವರ ಜನರ ಜಯದ ಮೇಲೆ ಒತ್ತು ಕೊಡಲಾಗಿರುತ್ತದೆ. ಹೀಗೆ ಒಬ್ಬನಿಗೆ ನೆನಪಾಗುವದೇನೆಂದರೆ ಮೊದಲ ಆರು ತುತೂರಿಗಳನ್ನು ಪರಿಚಯಿಸಿದ ದೃಶ್ಯಗಳಲ್ಲೊಂದು ಉದ್ದೇಶವಿತ್ತು ಎಂಬುದೆ: ತನಗೆ ನಂಬಿಗಸ್ತರಾಗಿ ಉಳಿಯುವವನಾಗಿ ದೇವರ ಯೋಜನೆಯನ್ನು ಸಾಧಿಸುವದು. 10ನೇ ಅಧ್ಯಾಯದ ಬಲಿಷ್ಠ ದೇವದೂತನು ಈ ಮುಂಚೆ ಏಳನೆಯ ದೇವದೂತನು ಶಬ್ದ ಮಾಡುವಾಗ, “ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದ ಸಂಕಲ್ಪ” ವನ್ನು “ನೆರವೇರಿಸುವನು” ಎಂದು ಆಣೆಯಿಟ್ಟು ಹೇಳಿದ್ದನು (10:6, 7). “ದೇವರು ಗುಪ್ತವಾಗಿಟ್ಟಿದ್ದ ಸಂಕಲ್ಪ” ಎಂಬುದು “ಯೇಸುವಿನಲ್ಲಿ ಮತ್ತು ಮೂಲಕ ದೇವರು ಮಾಡಿದ್ದ ವಿಮೋಚನೆಯ ಯೋಜನೆಗಳ”ನ್ನು ಸೂಚಿಸುತ್ತದೆ (10:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರ ವಿಮೋಚನೆಯ ಯೋಜನೆಯು “ವಿಮೋಚನೆಯ ದಿನ” (ಎಫೆಸ 4:30) ಬರುವ ತನಕ ನೆರವೇರುವದಿಲ್ಲ, ಆಗ ರಕ್ಷಣೆ ಹೊಂದಿದವರೆಲ್ಲರೂ ಆತನ ಸಿಂಹಾಸನದ ಸುತ್ತಲು ಸೇರಿ ಬರುವರು. ಆದದರಿಂದ ಪ್ರಕಟನೆ 11:15-19 ವಚನಗಳು ಮುಂದೆ ವಿಮೋಚಿಸಲ್ಪಟ್ಟವರಿಗಾಗಿ ಕಾದಿರುವ ಸಂತೋಷದ ಒಂದು ಕ್ಲುಪ್ತವಾದ, ಆದರೆ ರೋಮಾಂಚನಕಾರಿಯಾದ ಮಿನುಗು ನೋಟವನ್ನು ನಮಗೆ ಒದಗಿಸುತ್ತದೆ.

11:15-19 ವಚನಗಳು ಕೇವಲ ರೋಮನ್ ಸಾಮ್ರಾಜ್ಯದ ಮೇಲೆ ದೇವರ ಧ್ಯೇಯಕ್ಕೆ ಸಿಕ್ಕುವ ಜಯದ ಒಂದು ಚಿತ್ರಣವಷ್ಟೇ ಆಗಿರುವ ಸಾಧ್ಯತೆಯಿದೆ, ಆದರೆ ಬಳಸಲ್ಪಟ್ಟಿರುವ ಭಾಷೆಯು ಸಕಲ ಸಂಗತಿಗಳು ಸಮಾಪ್ತಿಗೆ ಬರುವದಕ್ಕೆ ಉತ್ತಮವಾಗಿ ಸರಿಹೊಂದುತ್ತದೆ. ಉದಾಹರಣೆಗೆ, ದೇವರನ್ನು ಇರುವವನು ಮತ್ತು ಇದ್ದವನು, ಆದರೆ ಮುಂದೆ ಬರಲಿರುವವನು ಅಲ್ಲ ಒಂದು ಗುರುತಿಸುವಿಕೆಯು (ವ. 17) ಖಂಡಿತವಾಗಿಯೂ ಕಥನದಲ್ಲಿ ಲೋಕಾಂತ್ಯವು

ಬಂದಿರುತ್ತದೆಂಬ ಅನಿಸಿಕೆಯನ್ನುಂಟು ಮಾಡುವದಾಗಿದೆ (ವ. 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪ್ರಕಟನೆ ಪುಸ್ತಕದಲ್ಲಿ, ವಾಚಕನನ್ನು ಪುನಃ ಪುನಃ ಅಂತ್ಯಕ್ಕೆ ಕರೆದು ತರಲಾಗುತ್ತದೆ - ಮತ್ತು ಬಳಿಕ ಪುನಃ ಒಂದು ಸ್ವಲ್ಪ ವ್ಯತ್ಯಾಸವಾದ ದೃಷ್ಟಿಕೋನದಿಂದ ಆರಂಭಕ್ಕೆ ಕರೆದೊಯ್ಯಲ್ಪಡುತ್ತಾನೆ. ಈ "ಕಡೇ ಸಂಗತಿಗಳ" ದೃಶ್ಯದ ಬಳಿಕ 12ನೇ ಅಧ್ಯಾಯದಲ್ಲಿ ಯೇಸುವಿನ ಜನನದ ಕುರಿತ ಒಂದು ವಿವರಣೆಯು ಬರುತ್ತದೆ.

**ವಚನ 14.** ಒಬ್ಬ ಬಲಿಷ್ಠ ದೇವದೂತನು ಹೀಗೆ ಘೋಷಿಸುವದನ್ನು ಯೋಹಾನನು ಕೇಳಿಸಿಕೊಂಡನು, **ಎರಡನೆಯ ವಿಪತ್ತು ಕಳೆದುಹೋಯಿತು; ಇಗೋ, ಮೂರನೆಯ ವಿಪತ್ತು ಬರುತ್ತದೆ. ಎರಡನೆಯ ವಿಪತ್ತು** ಯಾವದೆಂದರೆ ಆರನೆಯ ತುತೂರಿಯು ಊದಲ್ಪಟ್ಟಾಗ ಬಿಡುಗಡೆಗೊಳಿಸಲ್ಪಟ್ಟ ವಿನಾಶಕಾಗಿ ಸೇನೆಯಾಗಿತ್ತು. ಆ ತುತೂರಿಯು ದೇವರು ಮಾನವರಿಗೆ ಕೊಡುವ ಕಡೇ ಸಾಮಾನ್ಯ ಎಚ್ಚರಿಕೆಯಾಗಿತ್ತು. ಏಳು ಪಾತ್ರೆಗಳು ಇನ್ನೂ ಬರಲಿದ್ದವು (ಅಧ್ಯಾಯಗಳು 15; 16), ಆದರೆ ಪಾತ್ರೆಗಳಲ್ಲಿ ಮುಖ್ಯ ಒತ್ತು ದಂಡನೆಯ ಕುರಿತಾಗಿರುವದೇ, ಹೊರತು ಎಚ್ಚರಿಕೆಯ ಮೇಲಲ್ಲ. Merrill C. Tenneyನು ಹೀಗೆ ಬರೆದನು, "ತಿದ್ದುವಿಕೆಯನ್ನು ತಿರಸ್ಕರಿಸುವದಾದರೆ ಅದು ಮುಂದೆ ನಾಶನವಾಗಿ ಮಾರ್ಪಡುತ್ತದೆ. ಮನುಷ್ಯರು ಪಶ್ಚಾತ್ತಾಪ ಪಡದಿದ್ದಲ್ಲಿ, ಅವರನ್ನು ಕಿತ್ತು ಹಾಕತಕ್ಕದ್ದು; ಯಾಕೆಂದರೆ ದೇವರು ಪಾಪವನ್ನು ಸದಾಕಾಲವೂ ಸಹಿಸಿಕೊಂಡಿರಲಾರನು. ಒಂದಿಲ್ಲಾ ಒಂದು ಕಾಲಘಟ್ಟದಲ್ಲಿ . . . ಆತನು ಕೆಟ್ಟತನವನ್ನು ನಿರ್ಮೂಲಗೊಳಿಸಿ ನೀತಿಯನ್ನು ಸ್ಥಾಪಿಸುವದಕ್ಕೆ ಮಧ್ಯಪ್ರವೇಶಿಸಲೇ ಬೇಕಾಗುತ್ತದೆ."[58] Tenneyನು ತನ್ನ ಅಂಶವನ್ನು ಪ್ರಳಯಪೂರ್ವ ಕಾಲದ ಜಗತ್ತು, ಸೊದೋಮ್ ಮತ್ತು ಗೊಮೋರ, ಬಾಬೆಲ, ಮತ್ತು ಯೆರೂಸಲೇಮ್ ಇವುಗಳನ್ನು ಉಲ್ಲೇಖಿಸುವ ಮೂಲಕ ದೃಷ್ಟಾಂತಪಡಿಸುತ್ತಾನೆ.

**ಮೂರನೆಯ ವಿಪತ್ತು** ಎಂದರೆ ಏಳನೆಯ ತುತೂರಿಯೇ ಆಗಿರಲಿದೆ. ಏಳನೆಯ ದೇವದೂತನು ಶಬ್ದ ಮಾಡುವಾಗ "ದೇವರು ಮರೆಯಾಗಿಟ್ಟಿದ್ದ ಸಂಕಲ್ಪವು ನೆರವೇರುವನ್ನು ನೆರವೇರಿಸುವನು" (10:7). ಅದು ನಡೆಯುವಾಗ, ಪಶ್ಚಾತ್ತಾಪ ಪಡುವದಕ್ಕೆ ಇರುವ ಸದವಕಾಶವು ಶಾಶ್ವತವಾಗಿ ಇಲ್ಲವಾಗುವದು.

ಪಶ್ಚಾತ್ತಾಪ ಪಡುವದು - ಮತ್ತು ಅದನ್ನು ತಕ್ಷಣವೇ ಮಾಡುವದು ಏಕೆ ಪ್ರಾಮುಖ್ಯವಾದದ್ದು? ಏಕೆಂದರೆ ದೇವರ ತಾಳ್ಮೆಯು ಸದಾಕಾಲವೂ ಕಾಯುವಂತದ್ದಲ್ಲ. ಒಂದು ಹಂತದಲ್ಲಿ, ಇನ್ನು ಮುಂದೆ ಪ್ರಯತ್ನಿಸುವದಕ್ಕೆ ಯಾವ ಫಲಿತವೂ ಇಲ್ಲ ಎಂದು ನಿರ್ಧರಿಸುವನು. Wilcockನು ಹೇಳಿದ್ದೇನೆಂದರೆ, "ಇಲ್ಲಿ ಮುಗಿದು ಹೋಗುವದು [ದೇವರ] ತಾಳ್ಮೆ ಅಲ್ಲ, ಆದರೆ ಪ್ರತಿಕ್ರಿಯಿಸುವದಕ್ಕೆ ಮಾನವನಿಗಿರುವ ಸಾಮರ್ಥ್ಯವೇ ಮುಗಿದು ಹೋಗುತ್ತದೆ. ಇನ್ನು ಮುಂದೆ ಇನ್ನಷ್ಟು ಸದವಕಾಶಗಳನ್ನು ಕೊಡುವದಕ್ಕೆ ಅರ್ಥವೇ ಇಲ್ಲ ಎನ್ನುವಂಥ ಹಂತಕ್ಕೆ ತಲುಪಲಾಗುತ್ತದೆ, ಯಾಕೆಂದರೆ ಮನುಷ್ಯನು ತನ್ನನ್ನು ಪಶ್ಚಾತ್ತಾಪ ಪಡುವದಕ್ಕೆ ಸಾಧ್ಯವಾಗದಷ್ಟು ಮಿತಿಮೀರಿ ತನ್ನನ್ನು ಕಠಿಣ ಪಡಿಸಿಕೊಂಡಿರುತ್ತಾನೆ."[59] ಬಳಿಕ "ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು" (2 ಪೇತ್ರ 3:10).

**ವಚನ 15.** W. B. Westನು 15ನೇ ವಚನವನ್ನು "ಇಡೀ ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ಮುಖ್ಯ ವಚನವಾಗಿದೆ"[60] ಎಂದು ಪರಿಗಣಿಸಿದನು: ಏಳನೆಯ ದೇವದೂತನು

ತುತೂರಿಯನ್ನೂದಿದನು. **ಆಗ ಪರಲೋಕದಲ್ಲಿ ಮಹಾ ಶಬ್ದಗಳುಂಟಾಗಿ - ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು; ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು ಎಂದು ಹೇಳಿದವು.** ಯೋಹಾನನು 4 ಮತ್ತು 5 ಅಧ್ಯಾಯಗಳಲ್ಲಿನ ಸಿಂಹಾಸನದ ದೃಶ್ಯಕ್ಕೆ ಹಿಂದಿರುಗಿ ಬಂದಿರುತ್ತಾನೆ. ಮಹಾ ಶಬ್ದಗಳು ನಾಲ್ಕು ಜೀವಿಗಳ ಶಬ್ದವಾಗಿರಬಹುದಾಗಿದೆ (4:6-9) ಅಥವಾ ಒಟ್ಟಾಗಿ ಹಾಡಿದ ಪರಲೋಕದ ಹಾಡು ಆಗಿರಬಹುದಾಗಿದೆ (5:11, 12; 7:9, 10). ಯಾರು ಮಾತಾಡಿದರು ಎಂಬುದಕ್ಕಿಂತಲೂ ರಾಜ್ಯದ ಕುರಿತಾಗಿ ಮಾತಾಡಿದ ಮಾತುಗಳೇ ಪ್ರಾಮುಖ್ಯವಾಗಿರುತ್ತವೆ.

15ನೇ ವಚನದಲ್ಲಿ ಏಕವಚನ ಬಳಸಲ್ಪಟ್ಟಿದೆ: **ಲೋಕದ ರಾಜ್ಯಾಧಿಕಾರ**. KJVಯಲ್ಲಿ "ರಾಜ್ಯಾಧಿಕಾರಗಳು" ಎಂದು ಬಹುವಚನದಲ್ಲಿರುತ್ತದೆ, ಆದರೆ ಹಸ್ತಪ್ರತಿಗಳಲ್ಲಿ ಪುರಾವೆಯು "ರಾಜ್ಯಾಧಿಕಾರ" ಎಂಬುದರ ಪರವಾಗಿರುತ್ತದೆ. **ನಮ್ಮ ಕರ್ತನ ರಾಜ್ಯ** ಎಂಬ ಪದಗುಚ್ಛದಲ್ಲಿರುವ "ರಾಜ್ಯ" ಎಂಬ ಪದವು ಮೂಲ ವಾಕ್ಯದಲ್ಲಿ ಕಂಡು ಬರುವದಿಲ್ಲ, ಆದರೆ ವ್ಯಾಕರಣ ಪದವಿನ್ಯಾಸದಲ್ಲಿ ಸೂಚ್ಯಾರ್ಥವಾಗಿರುತ್ತದೆ. "ಕರ್ತನು" ("ಒಡೆಯನು," "ಪ್ರಭು") ಎಂಬ ಪದವು ತಂದೆಯನ್ನಾಗಲಿ ಅಥವಾ ಮಗನನ್ನಾಗಲಿ ಸೂಚಿಸಬಹುದಾಗಿದೆ. ಈ ವಾಕ್ಯಭಾಗದಲ್ಲಿ, ಇದು ತಂದೆಯನ್ನು ಸೂಚಿಸುತ್ತದೆ. **ಆತನ ಕ್ರಿಸ್ತನಿಗೆ** ಅಥವಾ "ಆತನು ಅಭಿಷೇಕಿಸಿದವನು" ಎಂಬುದು ಹಳೆಯ ಒಡಂಬಡಿಕೆಯಲ್ಲಿ ಮೆಸ್ಸೀಯನಿಗೆ ಬಳಸುವ ಪದವಾಗಿದ್ದು (ನೋಡಿರಿ ಕೀರ್ತನ 2:2) ಯೇಸುವಿನಲ್ಲಿ ನೆರವೇರಿರುತ್ತದೆ.

**ರಾಜ್ಯವನ್ನಾಳುವನು** ಎಂಬ ಪದಗುಚ್ಛದಲ್ಲಿ, "ಅವನು" ಎಂಬುದು ತಂದೆಯನ್ನು ಸೂಚಿಸುತ್ತದೋ ಅಥವಾ ಮಗನನ್ನೋ? ಕೆಲವರು, 1 ಕೊರಿಂಥ 15:24-28ರ ಆಧಾರದಲ್ಲಿ, "ಅವನು" ಎಂದರೆ ತಂದೆಯೇ ಎಂದು ದೃಢವಿಶ್ವಾಸದಿಂದ ವಾದಿಸುತ್ತಾರೆ - ಮತ್ತು ಅವರು ಹೇಳುವದು ಸರಿಯೇ ಇರಬಹುದಾಗಿದೆ. ಇನ್ನೊಂದು ಕಡೆಯಲ್ಲಿ, ವಾಕ್ಯಭಾಗವು ರಾಜ್ಯಾಧಿಕಾರವು ಜಂಟಿಯಾಗಿ "ನಮ್ಮ ಕರ್ತನಿಗೂ" ಮತ್ತು "ಆತನು ಅಭಿಷೇಕಿಸಿದವನಿಗೂ" ಉಂಟಾಯಿತೆಂಬುದನ್ನು ಒತ್ತಿ ಹೇಳಿರುತ್ತದೆ, ಅದು ಜಂಟಿಯಾದ ಆಳ್ವಿಕೆಯನ್ನು ಸೂಚಿಸುತ್ತದೆ. Robert Mounceನು ವ್ಯಕ್ತಪಡಿಸಿದ ನಂಬಿಕೆಯೇನೆಂದರೆ "ಏಕವಚನವು . . . ಈ ಜಂಟಿ ಸಾರ್ವಭೌಮತೆಯ ಏಕತೆಯನ್ನು ಒತ್ತಿ ಹೇಳುತ್ತದೆ."[61] G. R. Beasley-Murrayನು ಹೇಳಿದ್ದೇನೆಂದರೆ ತಂದೆಯೋ ಅಥವಾ ಮಗನೋ ಎಂಬ ಪ್ರಶ್ನೆಯು ಯೋಹಾನನಿಗೆ ಅಷ್ಟೇನೂ ಪ್ರಾಮುಖ್ಯವೇ ಆಗಿರಲಿಲ್ಲ, "ಯಾಕೆಂದರೆ ಆತನ ದೃಷ್ಟಿಯಲ್ಲಾದರೋ ಕರ್ತನು ಮತ್ತು ಕ್ರಿಸ್ತನು ಮುರಿಯಲಾಗದ ಐಕ್ಯವಾಗಿರುತ್ತಾರ."[62]

ಲೋಕದ ಅನೇಕ ಸಾಮ್ರಾಜ್ಯಗಳು ದೇವರ ಆಳ್ವಿಕೆಯನ್ನು ಯುಗಯುಗಳಿಂದಲೂ ವಿರೋಧಿಸುತ್ತಲೇ ಬಂದಿವೆ (ನೋಡಿರಿ ಅಧ್ಯಾಯ 13). ಇವುಗಳಲ್ಲಿ ಅತ್ಯಂಥ ಹೆಚ್ಚು ಬಲಶಾಲಿಯಾದ ಸಾಮ್ರಾಜ್ಯವೆಂದರೆ ಅದು ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆ ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯವೇ ಆಗಿತ್ತು: ಅದು ರೋಮನ್ ಸಾಮ್ರಾಜ್ಯ. ಆ ಸಾಮ್ರಾಜ್ಯಗಳ ಬಂಡಾಯದ ಕುರಿತು 11:18ರಲ್ಲಿ, ಕೀರ್ತನೆ 2:1-5ರ ಪರಿಭಾಷೆಯನ್ನು ಬಳಸಿಕೊಂಡು ಉಲ್ಲೇಖಿಸಲಾಗುವದು: "ಜನಾಂಗಗಳು ಕೋಪಿಸಿಕೊಂಡವು . . ."

ಖಂಡಿತವಾಗಿಯೂ, "ಮಾನವ ಇತಿಹಾಸದಲ್ಲಿ ಮನುಷ್ಯರನ್ನು ಆಳ್ವಿಕೆ ಮಾಡಿದ ಅನೇಕ ವೈವಿಧ್ಯವಾದ ಸಾಮ್ರಾಜ್ಯಗಳ ಹಿಂದೆ, ಅಧಿಕಾರದ ಏಕೈಕ ಮೂಲ ಇರುತ್ತದೆ":[63] ಸೈತಾನನು, "ಇಹಲೋಕಾಧಿಪತಿ" (ಯೋಹಾನ 12:31). ದೇವರು ಸೈತಾನನಿಗೆ ಅಧಿಕಾರವನ್ನು ಹೊಂದುವಂತೆ ಅನುಮತಿಸಿದ್ದಾನೆ, ಮತ್ತು ಸೈತಾನನ ಹಾಗೂ ಆತನ ಪ್ರತಿನಿಧಿಗಳು

ಲೋಕದಲ್ಲಿ ಆತನ ಸ್ವಂತ ಉದ್ದೇಶಗಳಿಗಾಗಿ ಅಧಿಕಾರವನ್ನು ಚಲಾಯಿಸುವಂತೆ ದೇವರು ಅನುಮತಿಸಿದ್ದಾನೆ. 15ನೇ ವಚನವು ಒಂದು ದಿನ ದೇವರು ಎಲ್ಲಾ ಬಂಡಾಯವನ್ನು ಅಡಗಿಸಿ **ಯುಗಯುಗಾಂತರಗಳಲ್ಲಿಯೂ** ಆಳ್ವಿಕೆ ಮಾಡುವನೆಂದು ನಿರೀಕ್ಷಿಸುತ್ತದೆ.

**ವಚನ 16.** ಜಯವನ್ನು ಘೋಷಿಸಿದ ಬಳಿಕ, ವಾಕ್ಯಭಾಗವು ಒಂದು ಪ್ರಶಂಸಾಘೋಷವನ್ನು ಮುಂದುವರೆಸುತ್ತದೆ. ಅವರು ಈ ಮುಂಚೆ ಮಾಡಿದ್ದ ಪ್ರಕಾರವೇ, **ದೇವರ ಸಮಕ್ಷಮದಲ್ಲಿ ತಮ್ಮ ತಮ್ಮ ಸಿಂಹಾಸನಗಳ ಮೇಲೆ ಕೂತಿರುವ ಇಪ್ಪತ್ತುನಾಲ್ಕು ಮಂದಿ ಹಿರಿಯರು ಆತನಿಗೆ ಅಡ್ಡಬಿದ್ದು** ಆರಾಧಿಸಿದರು (4:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 4ನೇ ಅಧ್ಯಾಯದಲ್ಲಿ, ಅವರು ಆತನನ್ನು ಸೃಷ್ಟಿಕರ್ತನಾಗಿ ಆರಾಧಿಸಿದ್ದರು (4:10, 11); 5ನೇ ಅಧ್ಯಾಯದಲ್ಲಿ, ಅವರು ಆತನನ್ನು ವಿಮೋಚಕನೆಂದು ಆರಾಧಿಸಿದ್ದರು (5:8-10); ಈಗ ಅವರು ಆತನನ್ನು ಜಯಶಾಲಿ ಮತ್ತು ಅರಸನೆಂದು ಸಾರಿದರು (11:17, 18). 17 ಮತ್ತು 18 ವಚನಗಳಲ್ಲಿರುವ ಅವರ ಸ್ತುತಿ ಗೀತೆಯು "ಪ್ರಕಟನೆ ಪುಸ್ತಕದ ಉಳಿದ ಭಾಗಕ್ಕೆ ಒಂದು 'ಪರಿವಿಡಿ' ಯನ್ನು ಒದಗಿಸಬಹುದಾಗಿದೆ."[64]

**ವಚನ 17.** ಹಿರಿಯರು ಮೊದಲು ದೇವರ ಸರ್ವೋಚ್ಛವಾದ ಆಳ್ವಿಕೆಯ ಕುರಿತು ಮಾತಾಡುತ್ತಾರೆ: **ಕರ್ತನೇ, ಸರ್ವಶಕ್ತನಾದ ದೇವರೇ, ಸದಾ ಇರುವಾತನೇ, ನೀನು ನಿನ್ನ ಮಹಾ ಅಧಿಕಾರವನ್ನು ವಹಿಸಿಕೊಂಡು ಆಳಿದ್ದರಿಂದ ನಿನಗೆ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುತ್ತೇವೆ** (ನೋಡಿರಿ 19:6, 15, 16). 1ನೇ ಆಧ್ಯಾಯದಲ್ಲಿ, ದೇವರು "ವರ್ತಮಾನ ಭೂತ*ಭವಿಷ್ಯತ್ಕಾಲಗಳಿರುವಾತನು"* ಎಂದು ಆರಾಧಿಸಲ್ಪಟ್ಟನು (1:4; ಒತ್ತಿ ಹೇಳಿದ್ದು ನನ್ನದು). ನಾಲ್ಕು ಜೀವಿಗಳು 4ನೇ ಅಧ್ಯಾಯದಲ್ಲಿ ದೇವರನ್ನು ಸ್ತುತಿಸಿದವು; ಅವರು ಆತನ ಕುರಿತಾಗಿ "ದೇವರಾದ ಕರ್ತನು ಸರ್ವಶಕ್ತನು, ವರ್ತಮಾನ ಭೂತ *ಭವಿಷ್ಯತ್ಕಾಲಗಳಲ್ಲಿರುವಾತನು*" ಎಂದು ಹೇಳಿದವು (4:8; ಒತ್ತಿ ಹೇಳಿದ್ದು ನನ್ನದು). ಹೇಗೂ, 11:17ರಲ್ಲಿ, ವರ್ಣನಾತ್ಮಕ ಪದಗುಚ್ಛವಾದ "ಭವಿಷ್ಯತ್ಕಾಲಗಳಲ್ಲಿರುವಾತನು" ಎಂಬದನ್ನು ಕೈ ಬಿಡಲಾಗಿರುತ್ತದೆ. KJVಯಲ್ಲಿ "ಬರುವಾತನು" ಎಂದು ಇರುತ್ತದೆ, ಆದರೆ ಆ ಪದಗುಚ್ಛವನ್ನು ಸೇರ್ಪಡೆಗೊಳಿಸುವದಕ್ಕೆ ಹಸ್ತಪ್ರತಿಯಲ್ಲಿನ ಪುರಾವೆಯ ಬೆಂಬಲವಿರುವದಿಲ್ಲ. ಈ ಪದಗುಚ್ಛವು ಕೈ ಬಿಡಲ್ಪಟ್ಟಿದೆ ಯಾಕೆಂದರೆ ಯೋಹಾನನು ದರ್ಶನದಲ್ಲಿ, ಕರ್ತನು ದುಷ್ಟರನ್ನು ದಂಡಿಸಿ ನಂಬಿಗಸ್ತರಿಗೆ ಪ್ರತಿಫಲಗಳನ್ನು ಕೊಡುವದಕ್ಕಾಗಿ *ಈಗಾಗಲೇ ಬಂದಿರುವಂಥ* ಕಾಲಕ್ಕೆ ಕರೆದೊಯ್ಯಲ್ಪಟ್ಟಿದ್ದನು.

ಬಹುಶಃ 15 ಮತ್ತು 17ವಚನಗಳು ಕಲಿಸದಂಥ ಎರಡು ವಿಚಾರಗಳ ಕುರಿತು ಒತ್ತಿ ಹೇಳಬೇಕಾಗಿರುತ್ತದೆ: ಮೊದಲನೆಯದಾಗಿ, ಕ್ರೈಸ್ತ ಯುಗದ ಅಂತ್ಯದ ತನಕವೂ ದೇವರು ಆಳ್ವಿಕೆ ಮಾಡಿಲ್ಲ, ಮತ್ತು ಮಾಡುವದಿಲ್ಲ ಎಂಬುದಾಗಿ ಆ ವಚನಗಳು ಕಲಿಸುವದಿಲ್ಲ. 17ನೇ ವಚನದಲ್ಲಿರುವ ἐβασίλευσας (*ebasileusas*, ಇದು βασιλεύω, *basileuō* ಎಂಬುದರಿಂದ ಬಂದದ್ದು) ಎಂಬುದು ಅನಿಶ್ಚಿತಭೂತಕಾಲ ರೂಪದಲ್ಲಿರುತ್ತದೆ; ಇಲ್ಲಿ ಸೂಕ್ತವಾದ ಅನುವಾದವೆಂದರೆ "ಆಳ್ವಿಕೆ *ಮಾಡಿದನು"* ಎಂಬುದೆ (KJV). ದೇವರು ಬಾಯಿ ಮಾತಿನಿಂದ ಜಗತ್ತನ್ನು ಉಂಟು ಮಾಡಿದ ಸಮಯದಿಂದಲೂ ಸಕಲ ಸೃಷ್ಟಿಯ ಮೇಲೆ ಆಳ್ವಿಕೆ ಮಾಡಿರುತ್ತಾನೆ (ನೋಡಿರಿ ವಿಮೋಚನಕಾಂಡ 15:18; 1 ಪೂರ್ವಕಾಲವೃತ್ತಾಂತ 29:11; ಕೀರ್ತನೆ 10:16; 29:10). 4 ಮತ್ತು 5 ಅಧ್ಯಾಯಗಳ ಸಿಂಹಾಸನದ ದೃಶ್ಯವು ನಮಗೆ ಕಲಿಸುವದೇನೆಂದರೆ ದೇವರು *ಈಗಲೂ* ಆಳ್ವಿಕೆಯನ್ನು ಮಾಡುತ್ತಿದ್ದಾನೆ, ಈಗಲೂ ಅಧಿಕಾರದಲ್ಲಿದ್ದಾನೆ ಎಂಬುದೆ.

ಎರಡನೆಯದಾಗಿ, 15 ಮತ್ತು 17 ವಚನಗಳು ಈಗಿನ ಯುಗಾಂತ್ಯದ ವೇಳೆ ದೇವರ ರಾಜ್ಯವು ಸ್ಥಾಪಿಸಲ್ಪಡುವದೆಂದು ಕಲಿಸುವದ*ದಿಲ್ಲ*. "ರಾಜ್ಯ" ಎಂಬ ಪದದ ಮೂಲಭೂತ ಅರ್ಥವೇನೆಂದರೆ "ಆಳ್ವಿಕೆ, ರಾಜ್ಯಭಾರ, ಸಾರ್ವಭೌಮತೆ." ದೇವರು ತನ್ನ ಸೃಷ್ಟಿಯ ಮೇಲೆ ಯಾವಾಗಲೂ ಆಳ್ವಿಕೆ ಮಾಡುತ್ತಿದ್ದಾನಾದ್ದರಿಂದ, ಆತನಿಗೆ ಯಾವಾಗಲೂ ಒಂದು ರಾಜ್ಯವು ಇದ್ದೇ ಇತ್ತು. ಅಷ್ಟುಮಾತ್ರವಲ್ಲದೆ, ಹಳೆಯ ಒಡಂಬಡಿಕೆಯ ಪ್ರವಾದಿಗಳಿಂದ ವಾಗ್ದಾನ ಮಾಡಲ್ಪಟ್ಟ ವಿಶೇಷವಾದ ಮೆಸ್ಸೀಯನ ರಾಜ್ಯವು ಈಗಾಗಲೇ ಸ್ಥಾಪಿಸಲ್ಪಟ್ಟಿರುತ್ತದೆ. ಪ್ರಕಟನೆ ಪುಸ್ತಕದ ಆರಂಭಿಕ ವಚನಗಳಲ್ಲಿ, ಯೋಹಾನನು ತನ್ನನ್ನು "ರಾಜ್ಯದಲ್ಲಿ . . . ನಿಮ್ಮೊಂದಿಗೆ ಪಾಲುಗಾರನು" ಎಂದು ಹೇಳಿಕೊಂಡನು (1:9).

ಮೆಸ್ಸೀಯನ ರಾಜ್ಯವು ಸ್ನಾನಿಕನಾದ ಯೋಹಾನ ಹಾಗೂ ಯೇಸುವಿನ ಸೇವೆಯ ದಿನಗಳಲ್ಲಿ "ಸಮೀಪವಾಗಿತ್ತು" (ಮತ್ತಾಯ 3:2; 4:17). ಯೇಸುವು ತನ್ನ ಹಿಂಬಾಲಕರ ಜೀವಿತ ಕಾಲದಲ್ಲಿಯೇ ಆತನ ರಾಜ್ಯವು "ಬಲವಾಗಿ ಬಂದಿರುವದನ್ನು" ನೋಡುವಿರಿ ಎಂದು ಹೇಳಿದನು (ಮಾರ್ಕ 9:1). ಆರೋಹಣಗೊಂಡ ಕರ್ತನು ಯೆಹೂದ್ಯರ ಪಂಚಾಶತ್ತಮ ಹಬ್ಬದ ದಿನದಂದು ತನ್ನ ಶಿಷ್ಯರ ಮೇಲೆ ತನ್ನ ಆತ್ಮನನ್ನು ಕಳುಹಿಸಿದಾಗ "ಬಲ" ಇಳಿದು ಬಂದಿತು (ಅಪೊಸ್ತಲರ ಕೃತ್ಯಗಳು 1:8; 2:1-4). ಪವಿತ್ರಾತ್ಮನ ಬರುವಿಕೆಯು ಯೇಸು ತಂದೆಯ ಬಲಗಡೆಯಲ್ಲಿ ಕೂತುಕೊಂಡು ತನ್ನ ಆಳ್ವಿಕೆಯನ್ನು ಆರಂಭಿಸಿದ್ದಾನೆಂಬುದಕ್ಕೆ ಪುರಾವೆಯಾಗಿತ್ತು (ಅಪೊಸ್ತಲರ ಕೃತ್ಯಗಳು 2:33-36; ನೋಡಿರಿ 1 ಕೊರಿಂಥ 15:20-28). ಸಹಸ್ರವರ್ಷಪೂರ್ವಾಡಳಿತ ವಾದಿಗಳು, ಒಂದು ಅರ್ಥದಲ್ಲಿ ಯೇಸುವು ಇಂದು ಆಳ್ವಿಕೆಯನ್ನು ಮಾಡುತ್ತಿದ್ದಾನೆಂದು ಒಪ್ಪಿಕೊಳ್ಳುತ್ತಾರೆ, ಆದರೆ ಕ್ರಿಸ್ತನು ಭೂಮಿಗೆ ಹಿಂದಿರುಗಿ ಬಂದು ಅಕ್ಷರಶಃವಾದ ಒಂದು ಸಾವಿರ ವರ್ಷಗಳ ಕಾಲ ಯೆರೂಸಲೇಮಿನಲ್ಲಿ ಆಳ್ವಿಕೆಯನ್ನು ಮಾಡುವ ತನಕ ಮೆಸ್ಸೀಯನ ರಾಜ್ಯವು ಸ್ಥಾಪಿಸಲ್ಪಡುವದಿಲ್ಲ ಎಂದು ಈಗಲೂ ವಾದಿಸುವವರಾಗಿದ್ದಾರೆ. ಹೇಗೂ, ಯೇಸು *ಈಗ* ತನ್ನ ರಾಜ್ಯದ ಮೇಲೆ ಆಳ್ವಿಕೆಯನ್ನು ಮಾಡುತ್ತಿದ್ದನೆಂದು ಬೈಬಲ್ ಕಲಿಸುತ್ತದೆ. ಹೀಗೆ G. R. Beasley-Murrayನು "ಕ್ರಿಸ್ತನು ಏರಿಹೋಗಿ ತನ್ನ ಸಿಂಹಾಸನದಲ್ಲಿ ಕೂತುಕೊಂಡ ವೇಳೆ ಆಳ್ವಿಕೆಯು ಆರಂಭಗೊಂಡಿತು"[65] ಎಂದು ಹೇಳುವದಕ್ಕೆ ಶಕ್ತನಾದನು. George Laddನು ಅದರೊಂದಿಗೆ ಸಹಮತವನ್ನು ಸೂಚಿಸುತ್ತಾ ಹೀಗೆ ಹೇಳಿದನು, "ಉನ್ನತಕ್ಕೇರಿಸಲ್ಪಟ್ಟ ಯೇಸು ತನ್ನ ಪುನರುತ್ಥಾನ-ಪರಲೋಕಾರೋಹಣದ ಸಮಯದಿಂದಲೂ ಕರ್ತನೂ ಮೆಸ್ಸೀಯನೂ ಆಗಿ ದೇವರ ಬಲಗಡೆಯಲ್ಲಿ ಸಿಂಹಾಸನಾರೂಢನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 2:34-36; ಇಬ್ರಿಯ 1:3; ಪ್ರಕಟನೆ 3:21)."[66] ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಿಂದ ಮೊದಲ್ಗೊಂಡು, ರಕ್ಷಣೆ ಹೊಂದಿರವರು ತನ್ನಿಂದ ತಾನೇ ಕ್ರಿಸ್ತನ ರಾಜ್ಯದ ಪ್ರಜೆಗಳಾದರು (ಕೊಲೊಸ್ಸೆ 1:13).

15 ಮತ್ತು 17 ವಚನಗಳು ಕ್ರೈಸ್ತ ಯುಗದ ಅಂತ್ಯದಲ್ಲಿ ದೇವರು ಆಳ್ವಿಕೆಯನ್ನು ಆರಂಭಿಸುವನೆಂದು ಕಲಿಸುತ್ತಿಲ್ಲವಾದರೆ, ಮತ್ತು ಮೆಸ್ಸೀಯನ ರಾಜ್ಯವು ಭವಿಷ್ಯದಲ್ಲಿ ಸ್ಥಾಪಿಸಲ್ಪಡುವದೆಂದು ಕಲಿಸುತ್ತಿಲ್ಲವಾದರೆ, ಅವು*ಗಳು* ಏನನ್ನು ಕಲಿಸುತ್ತಿವೆ? ಅವುಗಳು ಕಲಿಸುತ್ತಿರುವದೇನೆಂದರೆ ಒಂದು ದಿನ ದೇವರ ಆಳ್ವಿಕೆ ಇರುವಂಥ ಎಲ್ಲಾ ವಿರೋಧಗಳಿಗೆ ಅಂತ್ಯವನ್ನು ತರಲಾಗುವದು ಎಂಬುದೆ. ಒಂದು ದಿನ ಎಲ್ಲಾ ಜನರು ದೇವರ ಸಾರ್ವಭೌಮತೆಯನ್ನು ಒಪ್ಪಿಕೊಳ್ಳುವರೆಂದು ಅವುಗಳು ಕಲಿಸುತ್ತಿವೆ (ನೋಡಿರಿ ರೋಮಾ 14:11). ಕ್ಲುಪ್ತವಾಗಿ ಹೇಳುವದಾದರೆ, ಅವುಗಳು ದೇವರ ಧ್ಯೇಯ ಅಂತಿಮ ವಿಜಯವನ್ನು ಕೊಂಡಾಡುತ್ತಿವೆ.

ಯುದ್ಧವು ಕಠಿಣವಾಗಿ ಹೋರಾಟದಿಂದ ಕೂಡಿರುತ್ತದೆ, ಆದರೆ ಜಯವು ಖಚಿತವಾದದ್ದು ಎಂಬುದನ್ನು ತನ್ನ ಜನರು ತಿಳಿದುಕೊಳ್ಳಬೇಕೆಂಬುದು ಕರ್ತನ ಬಯಕೆಯಾಗಿತ್ತು. ಸಭೆಯ ಒಂದಾದ ಮೇಲೊಂದರಂತೆ ಜಯವನ್ನು ಪಡೆಯುತ್ತಾ ಆಕೆಯ ಸೇನಾನಾಯಕನು ಕೊನೆಗೆ ನಿತ್ಯತ್ವದ ಶಿಖರದ ಮೇಲೆ ಜಯಧ್ವಜವನ್ನು ನೇಡುವ ತನಕವೂ ವಿಜಯೋತ್ಸಾಹದಿಂದ ಮುನ್ನಡೆಯುವಳು.[67] T. F. Glassonನು ಹೀಗೆ ಬರೆದನು,

> ಒಂದು ಗಾದೆ ಉಂಟು, "ಕೂಗಾಡುವದಕ್ಕೆ ಇನ್ನೇನೂ ಉಳಿದಿಲ್ಲ"; ಅಂದರೆ ಒಂದು ಸ್ಪರ್ಧೆಯು ಇನ್ನು ಸ್ವಲ್ಪ ಕಾಲ ನಡೆಯುತ್ತಿರಬಹುದಾದರೂ ಫಲಿತಾಂಶವು ಏನೆಂಬುದಂತೂ ಅತ್ಯಂಥ ಖಚಿತವಾಗಿರುತ್ತದೆ ಎಂದರ್ಥ. ಇಲ್ಲಿ ಅದನ್ನೇ ನೋಡುತ್ತೇವೆ, ಒಂದು ವ್ಯತ್ಯಾಸವೇನೆಂದರೆ ಜಯಘೋಷವು ಈಗಾಗಲೇ ಆರಂಭವಾಗಿ ಬಿಟ್ಟಿದೆಯಷ್ಟೆ.[68]

**ವಚನ 18.** ದೇವರ ಆಳ್ವಿಕೆಯ ಕುರಿತು ಮಾತಾಡಿದ ಬಳಿಕ, ಇಪ್ಪತ್ತುನಾಲ್ಕು ಹಿರಿಯರು ಮುಂದೆ ಆತನ ನ್ಯಾಯತೀರ್ಪಿನ ಕುರಿತು ಮಾತಾಡುತ್ತಾರೆ:

> **ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವೂ ಪ್ರಕಟವಾಯಿತು. ಸತ್ತವರು ತೀರ್ಪುಹೊಂದುವ ಸಮಯ ಬಂದದೆ; ನೀನು ನಿನ್ನ ದಾಸರಾದ ಪ್ರವಾದಿಗಳಿಗೂ ದೇವಜನರಿಗೂ ನಿನ್ನ ನಾಮಕ್ಕೆ ಭಯಪಡುವ ದೊಡ್ಡವರಿಗೂ ಚಿಕ್ಕವರಿಗೂ ಪ್ರತಿಫಲವನ್ನು ಕೊಟ್ಟು ಲೋಕನಾಶಕರನ್ನು ನಾಶಮಾಡುವಿ.**

ಈಗಾಗಲೇ ಗಮನಿರಿಸುವ ಪ್ರಕಾರ, ಈ ವಚನವು ಕೀರ್ತನೆ 2ರಲ್ಲಿನ ಮಾತುಗಳೊಂದಿಗೆ ಆರಂಭಗೊಳ್ಳುತ್ತದೆ: **ಜನಾಂಗಗಳು ಕೋಪಿಸಿಕೊಂಡವು.** ಕೀರ್ತನೆ 2 "ಒಂದು ರಾಜವಂಶಸ್ಥ ಕೀರ್ತನೆ" ಎಂದು ವರ್ಗೀಕರಿಸಲ್ಪಟ್ಟಿದೆ ಮತ್ತು ಇದು ಒಬ್ಬ ನೂತನ ಅರಸನಿಗೆ ಕಿರೀಟಧಾರಣೆ ಮಾಡುವಂತಹ, ರಾಜವಂಶಸ್ಥ ಕಾರ್ಯಕ್ರಮಗಳಿಗೆ ಸಂಬಂಧ ಪಟ್ಟಂತೆ ಬಳಸಲ್ಪಡುತ್ತಿತ್ತು. ಕೀರ್ತನೆಯಲ್ಲಿ ಜನಾಂಗಗಳ ಬಂಡಾಯವು ಪರೋಕ್ಷವಾಗಿ ಇಸ್ರಾಯೇಲಿನಲ್ಲಿ ಹೊಸ ಅರಸನಿಗೆ ಕಿರೀಟಧಾರಣೆ ಆದ ಕೂಡಲೆ ಸುತ್ತಲಿನ ಜನಾಂಗಗಳು ಇಸ್ರಾಯೇಲಿನಲ್ಲಿದ್ದ ಗೊಂದಲದ ಲಾಭವನ್ನು ಪಡೆದುಕೊಳ್ಳಲು ಪ್ರಯತ್ನಿಸುವದನ್ನು ಸೂಚಿಸುವದಾಗಿದೆ. ಕೀರ್ತನೆ 2 ಮೆಸ್ಸೀಯನಿಗೆ ಸಂಬಂಧಿಸಿದ ಸೂಚ್ಯಾರ್ಥಗಳನ್ನು ಹೊಂದಿತ್ತೆಂಬುದನ್ನು ಯೆಹೂದ್ಯರು ಗುರುತಿಸಿದ್ದರು ಮತ್ತು ಅದು ಅಂತಿಮವಾಗಿ ರಾಜಾಧಿರಾಜವೂ ಕರ್ತರ ಕರ್ತನೂ ಆಗಿರುವವನ ಕಿರೀಟಧಾರಣೆಯನ್ನು ಸೂಚಿಸುವದಾಗಿದೆ ಎಂಬುದನ್ನು ಅರಿತುಕೊಂಡಿದ್ದರು. ಕೀರ್ತನೆ 2 ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕ್ರೈಸ್ತರು ಕೀರ್ತನೆ 2ರ ಮೊದಲ ಕೆಲವು ವಚನಗಳನ್ನು ಯೇಸುವಿನ ಶಿಲುಬೆಗೇರಿಸುವಿಕೆಯ ಸಂಚಿನಲ್ಲಿ ರೋಮನ್ನರು ಹಾಗೂ ಯೆಹೂದ್ಯರು ಕೈಜೋಡಿಸಿದ್ದನ್ನು ಸೂಚಿಸುವದಕ್ಕಾಗಿ ಬಳಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 4:25-28), ಆದರೆ ದೇವರ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಕೆಡಿಸುವದಕ್ಕೆ ಪ್ರಯತ್ನಿಸುವಂಥ *ಯಾವದೇ* ದೇಶ ಅಥವಾ ಗುಂಪಿಗೆ ಅನ್ವಯ ಮಾಡಬಹುದಾಗಿದೆ.

ಜನಾಂಗಗಳು ಕೋಪಿಸಿಕೊಂಡದ್ದರ ವಿಷಯವಾಗಿ, Warren Wiersbeನು ಒಂದು ಸಮಂಜಸವಾದ ಪ್ರಶ್ನೆಯನ್ನು ಕೇಳಿದನು: "ಜನಾಂಗಗಳು ಯಾವದರ ವಿಷಯದಲ್ಲಿ ಕೋಪಿಸಿಕೊಳ್ಳುವ ಅಗತ್ಯವಿತ್ತು?" ಆತನು ಹೀಗೆ ಬರೆದನು,

> ನಿಶ್ಚಯವಾಗಿಯೂ ಕರ್ತನು ಅವರ ವಿಷಯದಲ್ಲಿ ಒಳ್ಳೇಯವನೂ ಕೃಪಾಭರಿತನೂ ಆಗಿದ್ದನು.

ಆತನು ಅವರ ಅಗತ್ಯತೆಗಳನ್ನು ಒದಗಿಸಿದ್ದನು (ಅಪೊಸ್ತಲರ ಕೃತ್ಯಗಳು 14:15-17; 17:24-31), ಅವರವರಿಗೆ ಮೇರೆಗಳನ್ನು ಗೊತ್ತು ಮಾಡಿದ್ದನು, ಮತ್ತು ರಕ್ಷಣೆ ಹೊಂದುವಂತೆ ಮನುಷ್ಯನಿಗೆ ಸದವಕಾಶವನ್ನು ನೀಡುವದಕ್ಕಾಗಿ ಕೃಪೆಯುಳ್ಳವನಾಗಿ ತನ್ನ ನ್ಯಾಯತೀರ್ಪನ್ನು ಮುಂದೂಡಿದ್ದನು. ಅದಕ್ಕಿಂತಲೂ ಅಧಿಕವಾಗಿ, ಆತನು ಲೋಕದ ರಕ್ಷಕನಾಗಿರುವಂತೆ ತನ್ನ ಮಗನನ್ನು ಕಳುಹಿಸಿ ಕೊಟ್ಟನು . . . ಅವರಿಗೋಸ್ಕರ ಆತನು ಇನ್ನೂ ಹೆಚ್ಚಿನದ್ದೇನು ಮಾಡುವದಕ್ಕೆ ಸಾಧ್ಯವಿತ್ತು?[69]

ಕೀರ್ತನೆ 2 ಅದೇ ಪ್ರಶ್ನೆಯನ್ನು ಕೇಳಿತು:

ಅನ್ಯಜನಗಳು ದೊಂಬಿಮಾಡುವದೂ ಜನಾಂಗಗಳವರು ವ್ಯರ್ಥಕಾರ್ಯಗಳನ್ನು ಯೋಚಿಸುವದೂ ಯಾಕೆ? ಯೆಹೋವನಿಗೂ ಆತನು ಅಭಿಷೇಕಿಸಿದವನಿಗೂ ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ, ಅಧಿಕಾರಿಗಳು ಒಟ್ಟಾಗಿ ಸೇರಿ ಆಲೋಚಿಸುತ್ತಿದ್ದಾರೆ. ನಮಗೆ ಅವರು ಹಾಕಿದ ಬಂದನಗಳನ್ನು ಕಿತ್ತು ಬೇಡಿಗಳನ್ನು ಮುರಿದು ಬೀಸಾಡೋಣ ಎಂದು ಮಾತಾಡಿಕೊಳ್ಳುತ್ತಾರಲ್ಲಾ (ಕೀರ್ತನೆಗಳು 2:1-3).

"ಜನಾಂಗಗಳು ಕೋಪಿಸಿಕೊಂಡಿರುವದೇಕೆ?" ಎಂಬ ಪ್ರಶ್ನೆಗೆ ಉತ್ತರವು "*ಏಕೆಂದರೆ ಅವರು ತಮ್ಮ ಸ್ವದಾರಿಗಳಲ್ಲಿ ನಡೆಯುವದಕ್ಕೆ ಬಯಸುತ್ತಾರೆ . . .* ಹರೆಯದವರಾದ ಮಕ್ಕಳಂತೆಯೇ, ಜನಾಂಗಗಳು ಎಲ್ಲಾ ಅಂಕುಶಗಳನ್ನೂ ಕಿತ್ತು ಹಾಕುವದಕ್ಕೆ ಬಯಸುತ್ತವೆ . . ."[70] ದೇಶಗಳ ಬಂಡಾಯವು 13, 17, ಮತ್ತು 19 ಅಧ್ಯಾಯಗಳಲ್ಲಿ ಕಂಡು ಬರಲಿದೆ.

ಜನಾಂಗಗಳು ಕೋಪಿಸಿಕೊಂಡವು ಎಂಬುದನ್ನು ಓದಿದ ಬಳಿಕ, ದೇವರ **ಕೋಪವೂ ಪ್ರಕಟವಾಯಿತು** ಎಂದು ನಮಗೆ ಹೇಳಲಾಗುತ್ತದೆ. ಒಂದು ದಿನ, ಜನಾಂಗಗಳ ಮಕ್ಕಳ ರೀತಿಯ ಕೋಪವನ್ನು ತನ್ನ ನೀತಿಯುಳ್ಳ ಕೋಪದಿಂದ ಸಂಧಿಸುವನು. 18ನೇ ವಚನದಲ್ಲಿ "ಕೋಪಿಸಿಕೊಂಡವು" (ὀργίζω, *orgizō* ಎಂಬುದರಿಂದ ಬಂದದ್ದು) ಮತ್ತು "ಕೋಪ" (ὀργή, *orgē*) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದಗಳು ಒಂದೇ ಕುಟುಂಬ ಪದದಿಂದ ಬಂದವುಗಳಾಗಿವೆ. ದೇವರು ತನ್ನ ನ್ಯಾಯತೀರಿಸುವಿಕೆಯಲ್ಲಿ ಸ್ವೇಚ್ಛಾನುಸಾರಿಯಂತೆ ನಡೆದುಕೊಳ್ಳುವದಿಲ್ಲ; ದಂಡನೆಯು ಮಾಡಿದ ಅಪರಾಧಕ್ಕೆ ತಕ್ಕಂತೆಯೇ ಇರುವದು (ನೋಡಿರಿ ಗಲಾತ್ಯ 6:7). 18ನೇ ವಚನದ ಕಡೇ ಭಾಗದಲ್ಲಿ ಇದೇ ಅಂಶವನ್ನು ತಿಳಿಸಲಾಗುತ್ತದೆ, ಅದು ಘೋಷಿಸುವದೇನೆಂದರೆ ಅತನು "ಲೋಕನಾಶಕರನ್ನು ನಾಶಮಾಡುವನು" ಎಂಬದೆ. ಕೋಪಗೊಂಡವರಿಗೆ ದೇವರ ಕೋಪ ಏನೆಂಬುದು ಗೊತ್ತಾಗುವದು. ನಾಶಕರು ನಾಶಗೊಳಿಸಲ್ಪಡುವರು. ದೇವರ ಕೋಪದ ಕುರಿತು 14:10; 16:19; ಮತ್ತು 19:15ರಂತಹ ವಾಕ್ಯಭಾಗಗಳಲ್ಲಿ ಎತ್ತಿ ತೋರಿಸಲಾಗುವದು.

ದೇವರ ಕೋಪವು ಬಂದಾಗ, **ಸತ್ತವರು ತೀರ್ಪು ಹೊಂದುವ ಸಮಯ ಬಂದದೆ** ಎಂದು ನೋಡುತ್ತೇವೆ. "ಸಮಯ" ಎಂಬುದನ್ನು ಅನುವಾದಿಸಿರುವ ಗ್ರೀಕ್ καιρός (*kairos*), ಇದು ಅನೇಕ ಸಾರಿ "ಒಂದು ತಕ್ಕದಾದ ಸಮಯ" ಎಂದು ಸೂಚಿಸುತ್ತದೆ. ದೇವರು ಎಲ್ಲಾ ಸೃಷ್ಟಿಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವದರ ಸಾರಭೂತವಾದ ವಿಶಿಷ್ಟ ಗುಣವೆಂದರೆ ಅದು ನ್ಯಾಯತೀರ್ಪಿನ ದಿನವೇ. ಕೆಲವರು ದೇವರನ್ನು ನ್ಯಾಯ ಸ್ಥಾಪಿಸುವ ದೇವರಾಗಿ ಯೋಚಿಸುವದಕ್ಕೆ ಬಯಸುವದಿಲ್ಲ, ಆದರೆ Tenneyನು ಹೀಗೆ ಗಮನಕ್ಕೆ ತರುತ್ತಾನೆ,

ಪ್ರೀತಿಸ್ವರೂಪಿಯಾದ ದೇವರು ನ್ಯಾಯತೀರ್ಪಿನ ದೇವರು ಸಹ ಆಗಿರತಕ್ಕದ್ದು ಯಾಕೆಂದರೆ ಆತನು ತನ್ನ ಜನರನ್ನು ಪ್ರೀತಿಸುವವನಾಗಿ ಅದೇ ವೇಳೆಯಲ್ಲಿ ಅವರು ಕೊನೆಯಿಲ್ಲದಂತೆ

ಬಾಧೆಯನ್ನನುಭವಿಸುವದಕ್ಕೆ ಹೇಗೆ ಬಿಡಲು ಸಾಧ್ಯ? ಅಥವಾ ನಿರ್ಜನವಾದ ತೋಟದಲ್ಲಿ ಕಳೆಗಳ ರೀತಿಯಲ್ಲಿ ದುಷ್ಟತ್ವದ ವಿರುದ್ಧ ಆತನು ಯಾವ ಕ್ರಮ ಕೈಗೊಳ್ಳದೆ ಅದನ್ನು ಬೆಳೆಯುವಂತೆ ಬಿಡುವದಕ್ಕೆ ಹೇಗೆ ಸಾಧ್ಯ? ಮನುಷ್ಯರ ಕೃತ್ಯಗಳಿಗೆ ನ್ಯಾಯತೀರ್ಪು ಆಗಲೇ ಬೇಕು, ಯಾಕೆಂದರೆ ನ್ಯಾಯತೀರ್ಪಿನ ದಿನವಿಲ್ಲದೆ ಹೋದರೆ ನೀತಿವಂತರು ಎಂದಿಗೂ ಗುರುತಿಸಲ್ಪಡುವದಿಲ್ಲ, ಮತ್ತು ದುಷ್ಟತನವು ಶಿಕ್ಷೆಯನ್ನು ಅನುಭವಿಸದೆ ಹೋಗುವದು . . .

. . . ಅಸಮಾನತೆಗಳು ತೆಗೆದು ಹಾಕಲ್ಪಟ್ಟು ತಪ್ಪುಗಳನ್ನು ಸರಿಪಡಿಸಬೇಕೆಂಬುದು ನೀತಿಯ ಬೇಡಿಕೆಯಾಗಿರುತ್ತದೆ.[71]

ನ್ಯಾಯತೀರ್ಪಿನ "ಸಮಯ"ವು 20ನೇ ಅಧ್ಯಾಯದ ಕಡೆಯ ಭಾಗದಲ್ಲಿ ನಾಟಕೀಕರಣಗೊಳಿಸಲ್ಪಡುತ್ತದೆ.

ಆ ನ್ಯಾಯತೀರ್ಪಿನ ಭಾಗವಾಗಿ, ದೇವರು **ಲೋಕನಾಶಕರನ್ನು ನಾಶಮಾಡು**ವನು. "ನಾಶಮಾಡುವಿ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು διαφθείρω (*diaphtheirō*), "ಅಳಿಸಿ ಹಾಕುವದು ಅಥವಾ ವಿನಾಶವನ್ನುಂಟು ಮಾಡುವದು ಎಂಬ ಅರ್ಥವನ್ನು ಕೊಡುವದಿಲ್ಲ, ಆದರೆ 'ಇನ್ನುಷ್ಟು ಘೋರವಾಗಿ ಮಾರ್ಪಡುವದು, ಹಾಳು ಮಾಡುವದು' ಎಂದಾಗಿದೆ (Thayer), ನುಸಿಗಳು ಬಟ್ಟೆಯನ್ನು ಹಾಳು ಮಾಡುವ ರೀತಿಯಲ್ಲಿ (ಲೂಕ 12:33), ಕೆಟ್ಟತನವು ಭ್ರಷ್ಟ ಮನಸ್ಸುಗಳನ್ನು ಅಸ್ತವ್ಯಸ್ತಗೊಳಿಸುವ ರೀತಿಯಲ್ಲಿ (1 ತಿಮೊಥೆ 6:5)."[72] ಪವಿತ್ರಾತ್ಮನು ಈ ಭೂಮಿಯನ್ನು *ಕೇಡಿಸಿ ಹಾಕಿರುವ*ವರನ್ನು ಕುರಿತು ಮಾತಾಡುತ್ತಿದ್ದಾನೆ - ಅದನ್ನು ನೈತಿಕ ಹೊಲಸುತನ, ದೇವದೂಷಣಕರವಾದ ತಪ್ಪು ಬೋಧನೆ, ಮತ್ತು ಭಕ್ತಿಹೀನ ನಂಬಿಕೆಯಿಂದ ತುಂಬಿರುವಂಥವರು. ಯೋಹಾನನ ದಿನದಲ್ಲಿ ಜೀವಿಸುವ ಕ್ರೈಸ್ತರು ಭೂನಾಶಕರ ಪಟ್ಟಿಯಲ್ಲಿ ರೋಮನ್ ಸಾಮ್ರಾಜ್ಯಕ್ಕೆ ಅಗ್ರಸ್ಥಾನ ನೀಡಿರುತ್ತಿದ್ದರು, ಆದರೆ ಈ ವಾಕ್ಯಭಾಗವು ಇಂದು ನಾವು ಜೀವಿಸುವ ಲೋಕವನ್ನು ಹಾಳು ಮಾಡುವಂಥವರಾದ "ಬುದ್ಧಿಗೆಟ್ಟವರಿಗೆ" ಸಹ ಅಷ್ಟೇ ಸೂಕ್ತವಾಗಿ ಅನ್ವಯವಾಗುತ್ತದೆ (1 ತಿಮೊಥೆ 6:5; KJV).

ಹೇಗೂ, ನ್ಯಾಯತೀರ್ಪಿನ ದಿನವು ದೇವರನ್ನು ವಿರೋಧಿಸಿದವರಿಗೆ ಕೇವಲ "ಲೆಕ್ಕಾಚಾರವನ್ನು ಸರಿಪಡಿಸುವ" ದಿನ ಮಾತ್ರವೇ ಆಗಿರುವದಿಲ್ಲ. ಅದೊಂದು ರೋಮಾಂಚಕಾರಿ ಸಮಯವಾಗಿರಲಿದ್ದು ದೇವರು ತನ್ನವರನ್ನು ಗುರುತಿಸಿ ಪ್ರತಿಫಲಗಳನ್ನು ಕೊಡುವವನಾಗಿದ್ದಾನೆ. ಇಪ್ಪತ್ತುನಾಲ್ಕು ಹಿರಿಯರು ಅದನ್ನು **ನೀನು ನಿನ್ನ ದಾಸರಾದ ಪ್ರವಾದಿಗಳಿಗೂ ದೇವಜನರಿಗೂ ನಿನ್ನ ನಾಮಕ್ಕೆ ಭಯಪಡುವ ದೊಡ್ಡವರಿಗೂ ಚಿಕ್ಕವರಿಗೂ ಪ್ರತಿಫಲ ಕೊಡುವ** ಸಮಯ ಎಂದು ಗುರುತಿಸಿದರು (ನೋಡಿರಿ 13:16; 19:5; 20:12).

18ನೇ ವಚನದಲ್ಲಿ ಪ್ರತಿಫಲಗಳನ್ನು ಪಡೆದುಕೊಂಡವರನ್ನು ಗುರುತಿಸುವದಕ್ಕೆ ಬಳಸಲ್ಪಟ್ಟ ಪದಗಳಲ್ಲಿ ಕೆಲವೊಂದು ಪ್ರತ್ಯೇಕತೆಗಳನ್ನು ಮಾಡಬಹುದಾಗಿದೆ. ಉದಾಹರಣೆಗೆ, ಕ್ರೈಸ್ತರೆಲ್ಲರೂ ದೇವರ ಸೇವೆಗೋಸ್ಕರ "ಮೀಸಲಾದ" ದೇವಜನರಾಗಿದ್ದಾರೆಂಬುದೇನೋ ನಿಜವೇ, ಆದರೆ ಎಲ್ಲಾ ಕ್ರೈಸ್ತರೂ ಪ್ರವಾದಿಗಳು ಅಥವಾ ದೇವರ ವಕ್ತಾರರು ಆಗಿರುವದಿಲ್ಲ. ಹೇಗೂ, "ದಾಸರು," "ಪ್ರವಾದಿಗಳು," "ದೇವಜನರು," "ನಿನ್ನ ನಾಮಕ್ಕೆ ಭಯಪಡುವವರು," ಮತ್ತು "ದೊಡ್ಡವರೂ ಚಿಕ್ಕವರೂ" ಎಂಬ ಪದಗುಚ್ಛಗಳು ಐದು ಅಥವಾ ಆರು ವಿಧವಾದ ಜನರ ಗುಂಪುಗಳೆಂದು ಪಟ್ಟಿಯನ್ನು ಕೊಡುವ ಉದ್ದೇಶಕ್ಕಾಗಿ ಇರುವದಿಲ್ಲ. ಬದಲಾಗಿ, ಈ ಪದಗಳ ಸಂಗ್ರಹವು ನಂಬಿಗಸ್ತರಾದವ*ರೆಲ್ಲರಿಗೂ* ಪ್ರತಿಫಲ ಕೊಡಲ್ಪಡುವದೆಂಬುದನ್ನು ತಿಳಿಸುವ ಒಂದು ಹೃದಯಸ್ಪರ್ಶಿ ವಿಧವಾಗಿದೆ - ಅವರು ಯಾರೇ ಆಗಿರಬಹುದು, ಅವರು ಮಾಡಿದ ಸೇವೆಯು

ಏನೇ ಆಗಿದ್ದರೂ ಸರಿಯೇ, ಲೋಕದ ದೃಷ್ಟಿಯಲ್ಲಿ ಅವರು ಪ್ರಾಮುಖ್ಯರೆಂದು ಪರಿಗಣಿಸಲ್ಪಟ್ಟಿದ್ದರೂ ಸರಿಯೇ ಪ್ರಾಮುಖ್ಯರೆಂದೆಣಿಸಲ್ಪಡದಿದ್ದರೂ ಸರಿಯೇ ಅವರಿಗೆ ಪ್ರತಿಫಲ ಸಿಕ್ಕುವದು ಎಂಬುದೆ.

## ದೇವಾಲಯವು ತೆರೆಯಲ್ಪಡುತ್ತದೆ (11:19)

**19ಆಗ ಪರಲೋಕದಲ್ಲಿರುವ ದೇವಾಯವು ತೆರೆಯಿತು; ಆತನ ಆಲಯದಲ್ಲಿ ಆತನ ಒಡಂಬಡಿಕೆಯ ಮಂಜೂಷವು ಕಾಣಿಸಿತು; ಇದಲ್ಲದೆ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಭೂಕಂಪವೂ ದೊಡ್ಡ ಆನೆಕಲ್ಲಿನ ಮಳೆಯೂ ಉಂಟಾದವು.**

**ವಚನ 19.** 11ನೇ ಅಧ್ಯಾಯದ ಆದರಣೆಯು ಇನ್ನೂ ಮುಗಿದಿಲ್ಲ. 19ನೇ ವಚನದಲ್ಲಿ, 17 ಮತ್ತು 18 ವಚನಗಳಲ್ಲಿ ಕಾಣುವ ಸ್ತೋತ್ರ ಪದಗಳಿಗೆ ದೇವರು ಒಂದು ಪ್ರತಿಕ್ರಿಯೆಯನ್ನು ತೋರಿಸುತ್ತಾನೆ. ಹಾಡು ನಿಧಾನವಾಗಿ ಮೌನದಲ್ಲಿ ಮುಳುಗುತ್ತಿದ್ದ ಹಾಗೆ, ಅಲ್ಲಿ ಯೋಹಾನನ ಕಣ್ಣಿಗೆ ದೈವಿಕ ಮಹಿಮೆಯ ಒಂದು ಹೊಸ ದರ್ಶನವು ತೆರೆದುಕೊಂಡಿತು:[73] ಪರಲೋಕದಲ್ಲಿನ ದೇವಾಲಯ ಮತ್ತು ಅದರೊಳಗೆ ಒಡಂಬಡಿಕೆಯ ಮಂಜೂಷ ಕಾಣಿಸಿಕೊಂಡಿತು. ಈ ಮುಂಚೆ 11ನೇ ಅಧ್ಯಾಯದಲ್ಲಿ, ಯೋಹಾನನು ಅಳತೆ ಮಾಡಬೇಕಾಗಿದ್ದ ಭೂಮಿಯ ಮೇಲಿದ್ದ ದೇವಾಲಯ ಹಾಗೂ ಪರಲೋಕದ ದೇವಾಲಯ ನಡುವೆ ಒಂದು ವ್ಯತ್ಯಾಸವನ್ನು ಮಾಡಲಾಯಿತು (ವಚನಗಳು 1, 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). *ಪರಲೋಕದಲ್ಲಿರುವ* ದೇವಾಲಯವು ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಉಲ್ಲೇಖಿಸಲ್ಪಟ್ಟಿರುತ್ತದೆ (3:12; 7:15; 14:15, 17; 15:5, 6).

ಈ ದರ್ಶನವು ಯೆಹೂದಿ ಭಾವನೆಗಳ ಪರಿಚಯವಿದ್ದವರ ಹೃದಯಗಳಿಗೆ ನಿಶ್ಚಯವಾಗಿಯೂ ಆಶ್ಚರ್ಯ ಮತ್ತು ಸಂತೋಷವನ್ನುಂಟು ಮಾಡಿತ್ತು. ದೃಶ್ಯವು ತೆರೆದುಕೊಳ್ಳುತ್ತಿದ್ದಂತೆ ಆದಿ ವಾಚಕರಲ್ಲಾದ ಸಂಭ್ರಮವನ್ನು ಒಬ್ಬನು ಊಹಿಸಿಕೊಳ್ಳಬಹುದಾಗಿದೆ: **ಆಗ ಪರಲೋಕದಲ್ಲಿರುವ ದೇವಾಲಯವು ತೆರೆಯಿತು.** ಅತಿ ಪರಿಶುದ್ಧ ಸ್ಥಳವು ತೆರೆಯುವದು ದೇವರ ವೈಯಕ್ತಿಕ ಸಮಕ್ಷಮದ ವಾಗ್ದಾನವನ್ನು ಹೊಂದಿತ್ತು (21:3).

ಯೇಸುವು ಶಿಲುಬೆಯ ಮೇಲೆ ಮರಣಿಸಿದಾಗ, ದೇವಾಲಯದ ತೆರೆಯು ಹರಿಯಲ್ಪಟ್ಟಿತು (ಮತ್ತಾಯ 27:51), ಅದು ದೇವರ ಬಳಿಗೆ ದಾರಿಯು ತೆರೆಯಲ್ಪಟ್ಟಿತು ಎಂಬುದಕ್ಕೆ ಸಂಕೇತವಾಗಿದೆ (ನೋಡಿರಿ ಇಬ್ರಿಯ 10:19-22). ಯೇಸುವಿನಿಂದ ಆರಂಭಿಸಲ್ಪಟ್ಟದ್ದು ಕ್ರೈಸ್ತರು ಕೊನೆಗೂ ಪರಲೋಕವನ್ನು ಪ್ರವೇಶಿಸುವ ವೇಳೆ ಸಮಾಪ್ತಿಯನ್ನು ಕಾಣುತ್ತದೆ. ಪರಲೋಕದಲ್ಲಿ ಅತ್ಯಂಥ ಹೆಚ್ಚು ಆಕರ್ಷಕವಾದದ್ದು ಚಿನ್ನದ ಬೀದಿಗಳಾಗಲಿ, ಫಳಫಳನೆ ಹೊಳೆಯು ನದಿಗಳಾಗಲಿ, ಅಥವಾ ನವೀನ ವೃಕ್ಷಗಳಾಗಲಿ ಅಲ್ಲ, ಆದರೆ ನಮ್ಮ ನಂಬಿಗಸ್ತನಾದ ಕರ್ತನ ಅಂತಿಮ ಪ್ರಸನ್ನತೆಯೇ. ಅಲ್ಲಿ ಕೊನೆಗೂ, "ದೇವರ ನಿವಾಸವು ಮನುಷ್ಯರಲ್ಲಿ ಅದೆ [ಇರುವದು], ಮತ್ತು ಆತನು ಮನುಷ್ಯರ ನಡುವೆ ವಾಸಿಸುವನು, ಮತ್ತು ಅವರು ಆತನಿಗೆ ಪ್ರಜೆಗಳಾಗಿರುವರು, ಮತ್ತು ದೇವರು ತಾನೇ ಅವರ ಸಂಗಡ ಇರುವನು" (21:3).

ದೇವಾಲಯವು ತೆರೆಯಲ್ಪಡುತ್ತಿದ್ದ ಹಾಗೆಯೇ, ಯೋಹಾನನು **ಆತನ ಒಡಂಬಡಿಕೆಯ ಮಂಜೂಷ**ವನ್ನು ಕಂಡನು. ವಿಮೋಚನಕಾಂಡ 25:10-22 ವಚನಗಳು ನಮಗೆ ಒಡಂಬಡಿಕೆಯ ಮಂಜೂಷದ ಕುರಿತು ಹೇಳುತ್ತವೆ. ಅದು ಚಿನ್ನದ ತಗಡುಗಳಿಂದ ಲೇಪಿಸಲ್ಪಟ್ಟಿದ್ದ ಕಟ್ಟಿಗೆಯ

ಪೆಟ್ಟಿಗೆಯಾಗಿದ್ದು ಎರಡುವರೆ ಮೊಳ ಉದ್ದವೂ ಎರಡುವರೆ ಮೊಳ ಅಗಲವೂ ಒಂದುವರೆ ಮೊಳ ಎತ್ತರವೂ ಆಗಿತ್ತು. ಒಂದು ಮೊಳ ಎಂದರೆ ಅಂದಾಜು 18 ಇಂಚುಗಳಷ್ಟಾಗಿತ್ತು, ಆದ್ದರಿಂದ ಪೆಟ್ಟಿಗೆಯು ಸುಮಾರು 3¾ ಗೆ 2¼ ಗೆ 2¼ ಅಡಿಗಳಷ್ಟು ಅಳತೆಯುಳ್ಳದ್ದಾಗಿತ್ತು. ಪೆಟ್ಟಿಗೆ ಮುಚ್ಚಳವು "ಕೃಪಾಸನ" ಎಂದು ಕರೆಯಲ್ಪಡುವದಾಗಿದ್ದು ಅದರ ಮೇಲೆ ಇಬ್ಬರು ಕೆರೂಬಿಯರ (4:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಆಕಾರಗಳು ಎದುರುಬದುರಾಗಿ ಕೃಪಾಸನವನ್ನು ನೋಡುತ್ತಿರುವವುಗಳಾಗಿದ್ದವು. ಮಂಜೂಷದ ವಿಷಯವಾಗಿ, ದೇವರು ಮೋಶೆಗೆ ಹೀಗೆ ವಾಗ್ದಾನ ಮಾಡಿದನು, "ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು; ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೂಬಿಗಳ ನಡುವೆಯೇ ಇದ್ದು ನಿನ್ನ ಸಂಗಡ ಮಾತಾಡಿ . . ." (ವಿಮೋಚನಕಾಂಡ 25:22). ಯೆಹೂದ್ಯರ ಮನಸ್ಸಿಗಾದರೋ, ಮಂಜೂಷವೆಂದರೆ ದೇವರ ಮಹಿಮೆ ಹಾಗೂ ಪ್ರಸನ್ನತೆಯೆಂಬ ಸಮಾನಾರ್ಥವನ್ನು ಹೊಂದಿತ್ತು.

ಮಂಜೂಷದ ಒಳಗೆ ಕೆಲವು ವಸ್ತುಗಳಿದ್ದವು, ಅದರಲ್ಲಿ ಮನ್ನ ತುಂಬಿದ ಪಾತ್ರೆ ಮತ್ತು ಆರೋನನ ಚಿಗುರಿದ ಕೋಲು ಸಹ ಸೇರಿದ್ದವು (ವಿಮೋಚನಕಾಂಡ 16:32-34; ಅರಣ್ಯಕಾಂಡ 17:10; ಇಬ್ರಿಯ 9:4). ಹೆಚ್ಚು ಪ್ರಾಮುಖ್ಯವಾಗಿ, ಮಂಜೂಷದಲ್ಲಿ ದಶಾಜ್ಞೆಗಳು ಕೆತ್ತಲ್ಪಟ್ಟಿದ್ದ ಎರಡು ಕಲ್ಲಿನ ಹಲಗೆಗಳು ಇದ್ದವು (ಧರ್ಮೋಪದೇಶಕಾಂಡ 10:3-5). ಈ ಆಜ್ಞೆಗಳು ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯ ಹೃದಯಭಾಗವಾಗಿದ್ದವು (ನೋಡಿರಿ ಧರ್ಮೋಪದೇಶಕಾಂಡ 5:2-22), ಆದ್ದರಿಂದಲೇ "ಒಡಂಬಡಿಕೆಯ ಮಂಜೂಷ" ಎಂಬ ಪದಗುಚ್ಛವು ಬಂದಿರುತ್ತದೆ (ನೋಡಿರಿ ಅರಣ್ಯಕಾಂಡ 10:33; 14:44; ಧರ್ಮೋಪದೇಶಕಾಂಡ 10:8; 31:9, 25, 26). "ಒಡಂಬಡಿಕೆ" ಎಂಬುದು ಯೆಹೂದ್ಯರಿಗೆ ಅಮೂಲ್ಯವಾದ ಪದವಾಗಿತ್ತು. ಇದು ಎರಡು ಪಕ್ಷಗಳ ನಡುವಿನ ಒಪ್ಪಂದವನ್ನು ಸೂಚಿಸುತ್ತದೆ. ಹಳೆಯ ಒಡಂಬಡಿಕೆಯು ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಪ್ಪಂದವಾಗಿತ್ತು. ಹೊಸ ಒಡಂಬಡಿಕೆಯು ದೇವರು ಹಾಗೂ ಕ್ರೈಸ್ತರ ನಡುವಿನ ಒಪ್ಪಂದವಾಗಿದೆ. ದೇವರು ಒಪ್ಪಂದಗಳಲ್ಲಿ ತನ್ನ ಪಾತ್ರವನ್ನು ಯಾವಾಗಲೂ ಕಾಪಾಡಿಕೊಂಡಿದ್ದಾನೆ, ಮತ್ತು ಯಾವಾಗಲೂ ಕಾಪಾಡಿಕೊಳ್ಳುವನು.

> ಹಳೆಯ ಒಡಂಬಡಿಕೆಯ ಬೇರೆ ಯಾವದೇ ಪದಕ್ಕಿಂತಲೂ "ಒಡಂಬಡಿಕೆ" ಎಂಬ ಪದವೇ ಇಸ್ರಾಯೇಲ್ಯರಿಗೆ ಶಾಶ್ವತವಾದ ಹಾಗೂ ವಿಶ್ವಾಸರ್ಹವಾದ ದೇವರ ವಾಗ್ದಾನವನ್ನು ಜ್ಞಾಪಿಸುವದಾಗಿದೆ. ಯೆರೆಮೀಯನು ಮೆಸ್ಸೀಯನಿಂದಾಗುವ ರಕ್ಷಣೆಯ ನಿರೀಕ್ಷೆಯ ಕುರಿತು ಒಡಂಬಡಿಕೆಯ ಭಾಷೆಯಲ್ಲಿ ಮಾತಾಡುತ್ತಾನೆ, "ಶಾಶ್ವತವಾದ ಒಡಂಬಡಿಕೆಯನ್ನು ಅವರೊಂದಿಗೆ ಮಾಡಿಕೊಳ್ಳುವೆನು . . ." (ಯೆರೆಮೀಯ 32:40, RSV). ಈಗ ಈ ಅತ್ಯಂತ ಅಮೂಲ್ಯವಾದ ಪದವು ಜ್ಞಾಪಿಸಿಕೊಳ್ಳಲ್ಪಡುತ್ತದೆ ಮತ್ತು ಮತ್ತೊಮ್ಮೆ ಹೇಳಲ್ಪಟ್ಟಿರುತ್ತದೆ.[74]

ಇತಿಹಾಸದಲ್ಲಿ ಆರಂಭದಲ್ಲಿಯೇ, ದೇವರು ಅವರನ್ನು ನಡಿಸುತ್ತಿದ್ದಾನೆಂಬುದನ್ನು ವಾಸ್ತವಾಂಶವನ್ನು ಒತ್ತಿ ಹೇಳುವದಕ್ಕಾಗಿ ಇಸ್ರಾಯೇಲ್ಯರ ಮುಂದೆ ಆಗಾಗ್ಗೆ ಒಡಂಬಡಿಕೆಯ ಮಂಜೂಷವನ್ನು ಹೊತ್ತುಕೊಂಡು ಹೋಗಲಾಗುತ್ತಿತ್ತು (ನೋಡಿರಿ ಯೆಹೋಶುವ 4:9, 10; 6:1-20). ಅನಂತರದಲ್ಲಿ, ಅದು ಮೊದಲು ದೇವದರ್ಶನ ಗುಡಾರದಲ್ಲಿನ (ವಿಮೋ. 26:33,34), ಮತ್ತು ಬಳಿಕ ದೇವಾಲಯದಲ್ಲಿನ ಅತಿ ಪರಿಶುದ್ಧ ಸ್ಥಳದಲ್ಲಿ ಇಡಲ್ಪಟ್ಟಿತ್ತು (1 ಅರಸು 8:6). ಅದನ್ನು ವರ್ಷಕ್ಕೊಂದೇ ಸಾರಿ (ದೋಷಪರಿಹಾರಕ ದಿನದಂದು) ಒಬ್ಬನೇ ಒಬ್ಬನು (ಮಹಾಯಾಜಕನು) ಜನಗೋಸ್ಕರವೂ ಜನರಿಗೋಸ್ಕರವೂ ಪ್ರಾಯಶ್ಚಿತ್ತ ಯಜ್ಞವನ್ನು

ಅರ್ಪಿಸುವದಕ್ಕೆ ಅತಿ ಪರಿಶುದ್ಧ ಸ್ಥಳಕ್ಕೆ ತೆರೆಯನ್ನು ದಾಟಿಕೊಂಡು ಹೋಗುವ ವೇಳೆ ನೋಡುತ್ತಿದ್ದನು (ಯಾಜಕಕಾಂಡ 16:11-17; ನೋಡಿರಿ ಇಬ್ರಿಯ 9:7). ಯೆಹೂದಿಮತದಲ್ಲಿ ಸ್ವತಃ ದೇವರ ಸಮಕ್ಷಮದಲ್ಲಿಯೇ ಬಂದು ಆತನ ಅಮೂಲ್ಯವಾದ ಮಂಜೂಷವನ್ನು ನೋಡುವಂತೆ ಅನುಮತಿಸಲ್ಪಡುವದಕ್ಕಿಂತಲೂ ದೊಡ್ಡದಾದ ಗೌರವವು ಬೇರೆ ಇನ್ನೊಂದಿರಲಿಲ್ಲ.

ಆದಿ ವಾಚಕರ ಮನಸ್ಸಿನಲ್ಲಿದ್ದಿರಬಹುದಾದ ಇನ್ನೊಂದು ಹಿನ್ನಲೆಯ ವಿವರಣೆಯು ಏನೆಂದರೆ ಇಸ್ರಾಯೇಲ್ಯ ರಾಜ್ಯದ ಕಡೆಯ ದಿನಗಳಲ್ಲಿ ಮಂಜೂಷವು ಕಳೆದು ಹೋಗಿತ್ತು ಎಂಬದೆ. ಯೆಹೂದಿ ಸಂಪ್ರದಾಯದ ಪ್ರಕಾರ, ಅದು ದೇವಾಲಯದ ಜೊತೆಯಲ್ಲಿ ನಾಶ ಪಡಿಸಲ್ಪಡಕೂಡದೆಂಬ ಕಾರಣಕ್ಕಾಗಿ ಅದನ್ನು ಬಚ್ಚಿಡಲಾಗಿರುತ್ತು. ಬಾಬೆಲಿನವರು ದೇವಾಲಯ ಹಾಗೂ ಯೆರೂಸಲೇಮ್ ಪಟ್ಟಣಗಳೆರಡನ್ನೂ ಕ್ರಿ.ಪೂ. 586ರಲ್ಲಿ ನಾಶಗೊಳಿಸಿದ ವೇಳೆ ಮಂಜೂಷವು ನಾಶವಾಗಿ ಹೋಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ (2 ಅರಸು 25:9). ಐಗುಪ್ತದೇಶದ ಅರಸನು ದೇವಾಲಯದಿಂದ ಬೆಲೆ ಬಾಳುವ ಇತರ ವಸ್ತುಗಳನ್ನೆಲ್ಲಾ ತೆಗೆದುಕೊಂಡು ಹೋಗುವ ವೇಳೆ ಮಂಜೂಷವನ್ನೂ ತೆಗೆದುಕೊಂಡು ಹೋಗಿರಬಹುದೆಂದು ಕೆಲವರು ಭಾವಿಸುತ್ತಾರೆ (1 ಅರಸು 14:25, 26). ಶಾರೀರಿಕವಾದ ಮಂಜೂಷಕ್ಕೆ ಏನಾಯಿತೆಂಬುದು ಪ್ರಾಮುಖ್ಯವಲ್ಲ. ಅದರ ಆತ್ಮೀಕ ಪಡಿರೂಪವು ಪರಲೋಕದಲ್ಲಿರುತ್ತದೆಂದು ಪ್ರಕಟನೆ 11ನೇ ಅಧ್ಯಾಯವು ತಿಳಿಸುತ್ತದೆ - ಮತ್ತು ಅದೇ ಪ್ರಾಮುಖ್ಯವಾ*ಗಿರುತ್ತದೆ.*

ಸ್ಪಷ್ಟವಾಗಿರುವ ಪ್ರಕಾರ, ಯೋಹಾನನಿಗೆ ಈ ಸಂದರ್ಭದಲ್ಲಿ ದೇವಾಲಯದೊಳಗೆ ಕೇವಲ ಕ್ಲುಪ್ತವಾದ ಮಿನುಗು ನೋಟವನ್ನು ಬೀರುವಂತೆ ಅನುಮತಿಸಲಾಯಿತು. ಅದು ಪುನಃ 15:5ರಲ್ಲಿ ತೆರೆಯಲ್ಪಡುವದು. 19ನೇ ವಚನವು ದೇವರ ಶಕ್ತಿ ಹಾಗೂ ಪರಾಕ್ರಮದ ಒಂದು ಪರಲೋಕಿಕವಾದ ಬಾಣಬಿರುಸಿನ ಪ್ರದರ್ಶನದೊಂದಿಗೆ ಅಂತ್ಯಗೊಳ್ಳುತ್ತದೆ: **ಇದಲ್ಲದೆ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಭೂಕಂಪವೂ ದೊಡ್ಡ ಆನೆಕಲ್ಲಿನ ಮಳೆಯೂ ಉಂಟಾದವು.** ಇವೆಲ್ಲವೂ ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ ಹಲವಾರು ಸಾರಿ ನೋಡಿರುವ ಪ್ರಕಾರ ದೇವರ ಶಕ್ತಿಯ ಮತ್ತು ನ್ಯಾಯದ ಸಂಕೇತಗಳಾಗಿವೆ. ವಾಕ್ಯಭಾಗವು ದೇವರ ಒಡಂಬಡಿಕೆ ಪ್ರೀತಿಯ ಸಂಕೇತಗಳನ್ನು ಆತನ ನೀತಿಯುಳ್ಳ ಕೋಪದ ಸಂಕೇತಗಳೊಂದಿಗೆ ಒಂದುಗೂಡಿಸುತ್ತದೆ.

## ಅನ್ವಯಿಸುವಿಕೆ

### ರಾಜ್ಯದಲ್ಲಿ ಜಯ (ಅಧ್ಯಾಯ 11)

Merrill C. Tenneyನು 11ನೇ ಅಧ್ಯಾಯದ ಕುರಿತು ಒಂದು ಪಾಠವನ್ನು ಪ್ರಕಾಶನಗೊಳಿಸಿದನು, ಅದು "ಶಾಶ್ವತವಾದ ರಾಜ್ಯ"[75] ಎಂಬ ಪ್ರಮುಖ ಚರ್ಚೆಯಾಂಶದ ಮೇಲೆ ಕೇಂದ್ರಿಕೃತವಾಗಿತ್ತು. ಆತನು ವಾಕ್ಯಭಾಗದಿಂದ ಮೂರು ಮುಖ್ಯ ಅಂಶಗಳನ್ನು ಹೊರ ತೆಗೆಯುತ್ತಾನೆ: (1) ರಾಜ್ಯದ ಶಕ್ತಿ, (2) ರಾಜ್ಯದ ಕಾರ್ಯಕ್ರಮ, ಮತ್ತು (3) ರಾಜ್ಯದ ಶಾಶ್ವತತೆ.

ಒಬ್ಬನು 11ನೇ ಅಧ್ಯಾಯದ ಕುರಿತು "ನೀವು ಒಳ್ಳೇ ಮನುಷ್ಯನನ್ನು ಕೆಳಕ್ಕೆ ಬಿಡಲು ಸಾಧ್ಯವಿಲ್ಲ" ಎಂಬ ಶಿರ್ಷೀಕೆಯೊಂದಿಗೆ ಈ ಕೆಳಗಿನ ಅಂಶಗಳನ್ನೊಳಗೊಂಡ ಒಂದು ಪಾಠವನ್ನು ಅಭಿವೃದ್ಧಿ ಪಡಿಸಬಹುದು: (1) ಆತನು ದೇವರ ಚಿತ್ತವನ್ನು ಮಾಡುತ್ತಿರುವಾಗ (ವಚನಗಳು 3, 4); (2) ಆತನು ಜಯಶಾಲಿಯಾಗಿರುವಾಗ (ವಚನಗಳು 3-5); (3) ಆತನು ಸೋತವನಂತೆ ತೋರಿ ಬರುವಾಗ (ವಚನಗಳು 6-10); (4) ಆತನು ಹಿಂದಕ್ಕೆ ಸರಿಯದಿದ್ದರೆ

(ವಚನಗಳು 11-13).

ಇನ್ನೊಂದು ವಿಧವೆಂದರೆ “ವಿಜಯ” ಎಂಬ ಮುಖ್ಯ ಚರ್ಚೆಯಾಂಶದ ಸುತ್ತ ಕೇಂದ್ರಿಕೃತವಾಗಿರಬಹುದಾಗಿದೆ: (1) ಬೋಧಿಸುವದರಲ್ಲಿ ವಿಜಯ - ಸಾಕ್ಷಿಗಳು ಯಾರನ್ನೂ ಪರಿವರ್ತನೆ ಮಾಡದಿದ್ದಾಗ್ಯೂ (ವಚನಗಳು 3-6); (2) ಕಾದಾಟದಲ್ಲಿ ವಿಜಯ - ಸಾಕ್ಷಿಗಳು ಕೊಲ್ಲಲ್ಪಟ್ಟಾಗ್ಯೂ (ವ. 7); (3) ಅವಮಾನದಲ್ಲಿ ವಿಜಯ - ಸಾಕ್ಷಿಗಳು ಅವಮಾನಿಸಲ್ಪಟ್ಟಾಗ್ಯೂ (ವಚನಗಳು 8-10); (4) ಪುನರುತ್ಥಾನದಲ್ಲಿ ಅಂತಿಮವಾದ ವಿಜಯ (ವಚನಗಳು 11-13). ಈ ದಾರಿಯನ್ನು ಅನುಸರಿಸುವದರ ಮುಖ್ಯತ್ವವೆಂದರೆ ವಿಜಯವು ಕೇವಲ ಕಥೆಯ ಮಧ್ಯದಲ್ಲಿ ಸೋಲನ್ನು ಒಳಗೊಂಡು ಆರಂಭದಲ್ಲಿ ಮತ್ತು ಅಂತ್ಯದಲ್ಲಿ (“ವಿಜಯದ ಪುಸ್ತಕಾಂತ್ಯಗಳು” ಎನಿಸಿಕೊಳ್ಳುಂಥವುಗಳು) ಮಾತ್ರವೇ ಕಾಣಿಸಿಕೊಳ್ಳುವದಿಲ್ಲ, ಆದರೆ ಬದಲಾಗಿ ಕಥೆಯು ವಿಜಯದಿಂದ ತುಂಬಿ ಹೋಗಿರುತ್ತದೆ. *ದೇವರು ನಮಗೆ ಮಾಡಬೇಕೆಂದು ಹೇಳುವದನ್ನು ನಾವು ಮಾಡುವದಾದರೆ,* ಪರಿಣಾಮಗಳು ಏನೇ ಆಗಿದ್ದರೂ ಸರಿಯೇ ಯಾವಾಗಲೂ ನಾವು ಜಯಶಾಲಿಗಳಾಗುತ್ತೇವೆ.

## ಪರಲೋಕಿಕವಾದ ಅಳತೆ (11:1, 2)

ಯೋಹಾನನಿಗೆ ಮೂರು ಸಂಗತಿಗಳನ್ನು ಅಳತೆ ಮಾಡುವಂತೆ ಹೇಳಲಾಯಿತು: “ದೇವರ ಆಲಯವನ್ನೂ ಯಜ್ಞವೇದಿಯನ್ನೂ . . . ಅದರಲ್ಲಿ ಆರಾಧನೆಮಾಡುವವರನ್ನು” (ವ. 1). ಇವುಗಳನ್ನು ಒಂದೊಂದಾಗಿ ಪರೀಕ್ಷಿಸೋಣ:

1. ಒಟ್ಟಾರೆ ದೇವಾಲಯ. ಪ್ರಕಟನೆ 11:1, 2ರಲ್ಲಿನ ದೇವಾಲಯವು ಸಭೆಯನ್ನು ಪ್ರತಿನಿಧಿಸುತ್ತದೆಂಬುದನ್ನ ಮನಸ್ಸಿನಲ್ಲಿಟ್ಟುಕೊಳ್ಳಿರಿ. ಯೇಸು 2 ಮತ್ತು 3 ಅಧ್ಯಾಯಗಳಲ್ಲಿ ಏಳು ಸಭೆಗಳನ್ನು ಅಳತೆ ಮಾಡಿದ ವೇಳೆ, ಆತನು ಅವುಗಳನ್ನು ಒಳಗೆ ಮತ್ತು ಹೊರಗೆ ಪರಿಶೀಲನೆ ಮಾಡಿದನು. ಆ ಸಭೆಗಳು ಏನನ್ನು ಬೋಧಿಸುತ್ತಿವೆ ಮತ್ತು ಹೇಗೆ ಜೀವಿಸುತ್ತಿವೆ ಎಂಬುದನ್ನು ಪರೀಕ್ಷಿಸಿದನು. ಯಾವ ಸಭೆಯೂ ಪರಿಪೂರ್ಣವಲ್ಲ, ಆದರೆ ಪ್ರತಿಯೊಂದು ಸಭೆಯವರೂ ಸಾಧ್ಯವಾದಷ್ಟರ ಮಟ್ಟಿಗೆ ದೈವಿಕ ಮಾನದಂಡಕ್ಕೆ ಹತ್ತಿರವಾಗಿ ಬರಬೇಕು.

2. ಯಜ್ಞವೇದಿ. ಯಜ್ಞವೇದಿಯು ದೇವಾಲಯದಲ್ಲಿ ನಡೆಯುತ್ತಿದ್ದ ಆರಾಧನೆಯನ್ನು ದೃಷ್ಟಾಂತೀಕರಿಸುತ್ತದೆ - ಮತ್ತು ಇದು ದೇವರಿಗೆ ನಾವು ಆರಾಧನೆಗೆ ಸಂಕೇತವಾಗಿರುತ್ತದೆ. ಪ್ರತಿಯೊಬ್ಬ ಕ್ರೈಸ್ತನೂ ಒಬ್ಬ ಯಾಜಕನಾಗಿದ್ದು “ಆತ್ಮೀಯಯಜ್ಞಗಳನ್ನು ಸಮರ್ಪಿಸುವದಕ್ಕೆ” ಅಧಿಕಾರ ಹೊಂದಿರುತ್ತಾನೆ (1 ಪೇತ್ರ 2:5). ಇಬ್ರಿಯರಿಗೆ ಪತ್ರಿಕೆ ಲೇಖಕನು ಹೀಗೆ ಹೇಳಿದನು, “ಆದದರಿಂದ ಆತನ ಮೂಲಕವಾಗಿ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆಮಾಡುವದೇ ನಾವು ಸಮರ್ಪಿಸುವ ಯಜ್ಞವಾಗಿದೆ” (ಇಬ್ರಿಯ 13:15).

ನಾವು ದೇವರನ್ನು ಆರಾಧಿಸುವ ವೇಳೆ, ಕೇವಲ “ಕರ್ತನೇ, ಕರ್ತನೇ” ಎಂದರೆ ಸಾಕಾಗುವದಿಲ್ಲ; ನಾವು ಪರಲೋಕದಲ್ಲಿರುವ ತಂದೆಯ ಚಿತ್ತವನ್ನು ಮಾಡುವವರಾಗಿರಬೇಕು (ಮತ್ತಾಯ 7:21). ಯೇಸುವು ಹೀಗೆ ಹೇಳಿದನು, “ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು” (ಯೋಹಾನ 4:24). “ಆತ್ಮೀಯ ರೀತಿಯಲ್ಲಿ” ಎಂದರೆ ಅದರಲ್ಲಿ ನಾವು *ಹೇಗೆ* ಆರಾಧಿಸುತ್ತೇವೆ ಎಂಬುದು ಸೇರಿರುತ್ತದೆ (ನೋಡಿರಿ ಫಿಲಿಪ್ಪಿ 3:3); “ಸತ್ಯಕ್ಕೆ ತಕ್ಕ ಹಾಗೆ” ಎಂಬುದರಲ್ಲಿ ನಾವು *ಏನು* ಮಾಡುತ್ತೇವೆ ಎಂಬುದು ಸೇರಿರುತ್ತದೆ (ಯೋಹಾನ 17:17). ನಮ್ಮ ಹೃದಯಗಳು ಸರಿಯಿರಬೇಕು, ಮತ್ತು ನಾವು ಹೊಸ ಒಡಂಬಡಿಕೆಯಲ್ಲಿ ತೋರಿಸಿ ಕೊಡಲಾಗಿರುವ ಮಾದರಿ

ಪ್ರಕಾರ ಆರಾಧಿಸಬೇಕು. ಆರಾಧನೆಯು ಮೂಲಭೂತವಾದದ್ದು; ಅದು ನಮ್ಮನ್ನು ಒಂದಾಗಿ ಕೂಡಿಸುತ್ತದೆ; ಅದು ಕ್ರಿಸ್ತನಲ್ಲಿ ನಮಗಿರುವ ಏಕತೆಯ ಒಂದು ವ್ಯಕ್ತಪಡಿಸುವಿಕೆ ಆಗಿರುತ್ತದೆ (ನೋಡಿರಿ 1 ಕೊರಿಂಥ 10:16, 17). ದೇವರಿಂದ ಅಧಿಕಾರ ಕೊಡಲ್ಪಡದಿರುವಂಥ ಆರಾಧನೆಯು ಒಬ್ಬರೊಂದಿಗೊಬ್ಬರು ಮತ್ತು ಕರ್ತನೊಂದಿಗೆ ಹೊಂದಿರುವ ನಮ್ಮ ಅನ್ಯೋನ್ಯತೆಗೆ ಹಾನಿಯನ್ನುಂಟು ಮಾಡುತ್ತದೆ.

ಇಷ್ಟೊಂದು ವರ್ಷಗಳಿಂದಲೂ, "ಕ್ರೈಸ್ತೀಯ" ಆರಾಧನೆಯಲ್ಲಿ ಅನೇಕ ಬದಲಾವಣೆಗಳು ಸಂಭವಿಸಿರುತ್ತವೆ: "ಮಾಸ್" ರೀತಿಯ ನವೀನತೆಗಳ ಬೆಳವಣಿಗೆ, ಗಾಯನ ವೃಂದದ ಹಾಗೂ ವಾದ್ಯಗಳಿಂದ ಕೂಡಿದ ಸಂಗೀತವನ್ನು ಪರಿಚಯಿಸಿದ್ದು, ಮತ್ತು ಹಳೆಯ ಒಡಂಬಡಿಕೆಯಿಂದ ಧೂಪವನ್ನು ಉರಿಸುವ ಪದ್ಧತಿಯನ್ನು ಬಳಕೆ ಮಾಡಿಕೊಳ್ಳುವದು ಇಂಥವುಗಳೇ.[76] ಇವುಗಳೊಂದಿಗೆ ಕರ್ತನ ಭೋಜನವನ್ನು ಯಾವಾಗಲೋ ಒಮ್ಮೆ ಸೇವಿಸುವದು ಮತ್ತು ಕರ್ತನ ಭೋಜನದ ಆಚರಣೆಯಲ್ಲಿ ಅನಧಿಕೃತವಾದ ಪದಾರ್ಥಗಳನ್ನು ಬಳಕೆ ಮಾಡುವದು ಇಂತಹ ಬಹಳ ಇತ್ತೀಚಿನ ಬದಲಾವಣೆಗಳನ್ನು ಸೇರ್ಪಡೆಗೊಳಿಸಬಹುದು. ಕ್ರಿಸ್ತನೊಂದಿಗಿನ ನಮ್ಮ ಅನ್ಯೋನ್ಯತೆಗೆ ಆರಾಧನೆಯಲ್ಲಿ ಬದಲಾವಣೆ ಮಾಡುವ ಸಂಗತಿಗಿಂತಲೂ ಬೇರೆ ಇನ್ನಾವದೂ ಅಷ್ಟೊಂದು ಹಾನಿಯನ್ನುಂಟು ಮಾಡುವದಿಲ್ಲ. ಕ್ರೈಸ್ತರು ಒಂದಾಗಿ ಆರಾಧಿಸುವಷ್ಟು ಕಾಲ, ಅವರು ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬಹುದಾಗಿದೆ; ಆದರೆ ಅವರ ಪರಸ್ಪರ ಆರಾಧನೆಗೆ ಹಾನಿ ಉಂಟಾಗುವದಾದರೆ, ಪಂಗಡಗಳಾಗುವ ಸಾಧ್ಯತೆಯು ಮೇಲ್ಗಡೆಯಲ್ಲಿ ತೂಗಾಡುತ್ತಲಿರುತ್ತದೆ. ನಾವು ಹೇಗೆ ಆರಾಧನೆ ಮಾಡುತ್ತೇವೆಂಬುದು ಪ್ರಾಮುಖ್ಯವಾದದ್ದು. ದೇವರು ನಮ್ಮ ಕೃತ್ಯಗಳನ್ನು ಮತ್ತು ಹೃದಯಗಳನ್ನು ಅಳೆಯುವದಕ್ಕೆ ಅಳತೆ ಕೋಲನ್ನು ಹಿಡಿಯುತ್ತಾನೆ.

3. ವ್ಯಕ್ತಿಗತ ಆರಾಧಕರು. "ಆಲಯದಲ್ಲಿ ಆರಾಧನೆಮಾಡುವವರನ್ನು" ಎಂಬ ಪದಗುಚ್ಛವು ನಿಶ್ಚಯವಾಗಿಯೂ ಸಭೆಯ ಸದಸ್ಯರನ್ನು ಸೂಚಿಸುತ್ತದೆ. ಅಂತಿಮ ದಿನದಲ್ಲಿ, ದೇವರ ಮುಂದೆ ಒಂದು ಗುಂಪಾಗಿ ನಿಲ್ಲುವದಿಲ್ಲ, ಆದರೆ ವ್ಯಕ್ತಿಗಳಾಗಿ ನಿಲ್ಲುತ್ತೇವೆ. "ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" (ರೋಮಾ 14:12).

## ಕಾಪಾಡಲ್ಪಡುವದಕ್ಕೋಸ್ಕರ ಅಳೆಯಲ್ಪಟ್ಟಿದ್ದು (11:1, 2)

ಅಳೆಯಲ್ಪಡುವದು ಮತ್ತು ಕಾಪಾಡಲ್ಪಡುವದರ ನಡುವಿನ ಸಂಬಂಧವನ್ನು ಒಂದೆರಡು ವಿಧಗಳಲ್ಲಿ ದೃಷ್ಟಾಂತ ಪಡಿಸಬಹುದು. ಮೊದಲನೆಯದಾಗಿ, ಕಾಪಾಡುವ ಉಡುಪುಗಳಿಗಾಗಿ ವ್ಯಕ್ತಿಗಳ ಅಳತೆಯನ್ನು ತೆಗೆದುಕೊಳ್ಳಲಾಗುತ್ತದೆ: ಒಬ್ಬ ಆರಕ್ಷಕನನ್ನು ಗುಂಡುನಿರೋಧಕ ನಡುವಂಗಿಗೋಸ್ಕರ ಅಳತೆ ಮಾಡಲಾಗುತ್ತದೆ, ಒಬ್ಬ ಕಾಲ್ಚೆಂಡು ಆಟಗಾರರನ್ನು ಭದ್ರತೆಯ ಪ್ಯಾಡುಗಳಿಗೋಸ್ಕರ ಅಳತೆ ಮಾಡಲಾಗುತ್ತದೆ, ಒಬ್ಬ ಗಗನಯಾತ್ರಿಯನ್ನು ಆತನ ಗಗನ ಪೋಷಾಕುಗೋಸ್ಕರ ಅಳತೆ ಮಾಡಲಾಗುತ್ತದೆ. ಎರಡನೆಯದಾಗಿ, Oklahoma ಪ್ರಾಂತ್ಯವನ್ನು ತೆರೆದು ಬಿಡುವಾಗ, ಜನರು ಭೂಮಿಯ ಮೇಲೆ ತಮ್ಮ ಹಕ್ಕು ಸಾಧಿಸಿಕೊಳ್ಳಲು ಗುಂಪುಗುಂಪಾಗಿ ನುಗ್ಗಿದರು. ಅವರು ಭೂಮಿಯನ್ನು ಅಳತೆ ಮಾಡಿ ತಮ್ಮ ಕಂಬಗಳನ್ನು ನೆಟ್ಟರು, ಮತ್ತು ಬಳಿಕ - ಕೈಯಲ್ಲಿ ಬಂದೂಕು ಹಿಡಿದವರಾಗಿ - ಎಲ್ಲರಿಗೂ ಕೇಳಿಸುವಂತೆ ಕೂಗಿ ಹೇಳಿದರು, "ಇದು ನನಗೆ ಸೇರಿದ್ದು, ಆದ್ದರಿಂದ ಇದರಿಂದ ದೂರವಿದ್ದು ಬಿಡಿ!" ಅದೇ ರೀತಿಯಲ್ಲಿಯೇ, ದೇವಾಲಯವನ್ನು ದೈವಿಕ ಅಳತೆ ಮಾಡುವ ಕುರಿತು ಘೋಷಿಸುವ ಮೂಲಕ, ದೇವರು ತತ್ಪರಿಣಾಮವಾಗಿ ಹೇಳಿದ್ದೇನೆಂದರೆ, "ಈ ಆರಾಧಕರು ನನ್ನವರು - ಮತ್ತು ನೀನು

ಅವರಿಗೆ ಹಾನಿಯನ್ನು ಮಾಡಬಾರದು!" ಅಳತೆ ಮಾಡುವ ಭಾವನೆಯೊಳಗೆ ಒಂದು ಸ್ವಾಭಾವಿಕ ಪರಿಣಾಮದ ಸಂದೇಶವು ಸೇರಿಸುತ್ತದೆ: ಕಾಪಾಡಲ್ಪಡಬೇಕಾದರೆ, ಸಭೆಯು ಮೊದಲು ಅಳೆಯಲ್ಪಡಬೇಕು. ಸರಳವಾಗಿ ಹೇಳುವದಾದರೆ, ದೇವರು ಸಭೆಯನ್ನು ಆಶೀರ್ವದಿಸುವದಕ್ಕೆ ಮುನ್ನ, ಅದು "ಅಳತೆಗೆ ತಕ್ಕಂತೆ" ಇರತಕ್ಕದ್ದು. ಅಂದರೆ, ಅದು ಅಂಗೀಕಾರರ್ಹವಾದ ಕೆಲವೊಂದು ಮಾನದಂಡಗಳನ್ನು ಸಂಧಿಸತಕ್ಕದ್ದಾಗಿದೆ.

### ವೈಯಕ್ತಿಕ ಪರೀಕ್ಷೆ (11:2)

ದೇವರು ನಮ್ಮನ್ನು ವಾಕ್ಯದ ಪ್ರಕಾರವಾಗಿ ಪರೀಕ್ಷಿಸುತ್ತಿರುವದಾದಲ್ಲಿ, ನಾವು ಸಹ ನಮ್ಮನ್ನು ಪರೀಕ್ಷಿಸಿಕೊಳ್ಳಕೂಡದೋ? ಪೌಲನು ಕರ್ತನ ಭೋಜನವನ್ನು ಆಚರಿಸುವದರ ವಿಷಯವಾಗಿ ಕೊರಿಂಥದವರಿಗೆ ಬರೆದ ವೇಳೆ, ಒಬ್ಬನು ಮೊದಲು "ತನ್ನನ್ನು ಪರೀಕ್ಷಿಸಿಕೊಂಡವನಾಗಿ" ರಬೇಕು ಎಂದು ಹೇಳಿದನು (1 ಕೊರಿಂಥ 11:28). ತರುವಾಯ, ಅಪೊಸ್ತಲನು ಕೊರಿಂಥದವರಿಗೆ ಹೀಗೆ ಸಹ ಬರೆದನು, "ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ." ಬಳಿಕ ಆತನು ಇನ್ನೂ ಕೂಡಿಸಿ ಹೇಳಿದ್ದೇನೆಂದರೆ "ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ" (2 ಕೊರಿಂಥ 13:5).

ದೇವರು ಸಭೆಯ ಸಿದ್ಧಾಂತವನ್ನು ಅಳತೆ ಮಾಡುವದಾದರೆ, ನಾವು ನಮ್ಮ ಸ್ವಂತ ನಂಬಿಕೆಗಳನ್ನು ಮತ್ತು ಉಪದೇಶಗಳನ್ನು ಪರೀಕ್ಷಿಸಿಕೊಳ್ಳಬೇಕು. ದೇವರು ಸಭೆಯ ಹೃದಯವನ್ನು ಅಳತೆ ಮಾಡುವದಾದರೆ, ನಾವು ನಮ್ಮ ಸ್ವಂತ ಪ್ರೀತಿಯು ಎಷ್ಟೆಂಬುದನ್ನು ಪರೀಕ್ಷಿಸಿಕೊಳ್ಳಬೇಕು. ದೇವರು ಸಭೆಯ ಆರಾಧನೆಯನ್ನು ಅಳತೆ ಮಾಡುವದಾದರೆ, ನಾವು ನಮ್ಮ ಖಾಸಗಿ ಹಾಗೂ ಸಾರ್ವಜನಿಕ ಆರಾಧನೆಯನ್ನು ಪರೀಕ್ಷಿಸಿಕೊಳ್ಳತಕ್ಕದ್ದು. ದೇವರು ಸಭೆಯ ಜೀವನಶೈಲಿಯನ್ನು ಅಳತೆ ಮಾಡುವದಾದರೆ, ನಾವು ನಮ್ಮ ನೈತಿಕತೆ ಹಾಗೂ ಸೇವೆಯ ಮಾದರಿಯನ್ನು ಪರೀಕ್ಷಿಸಿಕೊಳ್ಳಬೇಕು.

ನಾವು ಯಥಾರ್ಥವಾಗಿರುವದಾದರೆ, ಇಂಥ ಪರೀಕ್ಷೆಗಳು ಯಾವಾಗಲೂ ನಮ್ಮಲ್ಲಿ ದೋಷಗಳಿರುವದನ್ನು ಬಯಲುಗೊಳಿಸುವವು. ನಿಶ್ಚಯವಾಗಿಯೂ ನಾವು ಕರ್ತನಿಂದ ಪ್ರೀತಿ ಹಾಗೂ ಕಾಪಾಡುವಿಕೆಯನ್ನು ಅನುಭವಿಸಬೇಕೆಂದರೆ ಪರಿಪೂರ್ಣರಾಗಿ ಇರಬೇಕಾದ ಅಗತ್ಯವಿಲ್ಲ. ರಕ್ಷಣೆಯು ದೇವರ ಕೃಪೆಯ ಆಧಾರದಲ್ಲಿ ಸಿಕ್ಕುವದೇ, ಹೊರತು ವೈಯಕ್ತಿಕ ಯೋಗ್ಯತೆಯ ಆಧಾರದಲ್ಲಿ ಅಲ್ಲ (ಎಫೆಸ 2:8, 9). ಹೇಗೂ, ನಾವು ನಮ್ಮನ್ನು ಅರ್ಥಮಾಡಿಕೊಳ್ಳುವದಕ್ಕಿಂತಲೂ ಉತ್ತಮವಾಗಿ ನಮ್ಮನ್ನು ಅರ್ಥಮಾಡಿಕೊಳ್ಳುವವನಿಗೆ ನಾವು ಏನಾಗ*ಬಲ್ಲೆವು* ಎಂಬುದು ಗೊತ್ತದೆ. ನಾವು ಅಳತೆಗೆ ತಕ್ಕಂತೆ ರೂಪಗೊಳ್ಳುವದಕ್ಕೆ ಪ್ರಯಾಸ ಪಡುತ್ತಿದ್ದೇವೋ ಇಲ್ಲವೋ, ನಮ್ಮ ಸಾಮರ್ಥ್ಯಕ್ಕೆ ಸಾಧ್ಯವಾಗುವಷ್ಟು ರೀತಿಯಲ್ಲಿ ವಾಕ್ಯಕ್ಕೆ ವಿಧೇಯವಾಗುವದಕ್ಕೆ ಪ್ರಯತ್ನಿಸುತ್ತಿದ್ದೇವೋ ಇಲ್ಲವೋ ಎಂಬುದು ಆತನಿಗೆ ತಿಳಿದದೆ. ನಾವು ನಮ್ಮ ವಿಷಯದಲ್ಲಿ ಯಥಾರ್ಥವಾಗಿರುವದಾದರೆ, ಇದು ನಮಗೆ ಸಹ ತಿಳಿದು ಬರಬಲ್ಲದು. ನಾವು ನಿಯತಕ್ರಮವಾಗಿ, ವೈಯಕ್ತಿಕವಾಗಿ, ಪರಿಶೋಧಿಸಿಕೊಳ್ಳುವಂಥ ಸ್ವಪರೀಕ್ಷೆಯನ್ನು ಮಾಡಿಕೊಂಡರೆ ನಮ್ಮೊಬ್ಬೊಬ್ಬರಿಗೆ ಪ್ರಯೋಜನವಾಗಬಲ್ಲದು.

ನಮ್ಮಲ್ಲಿ ಬಹಳಷ್ಟು ಮಂದಿ ನಮ್ಮನ್ನು ಪರೀಕ್ಷಿಸಿಕೊಳ್ಳುವದಕ್ಕಿಂತಲೂ ಬೇರೆಯವರನ್ನು ಪರೀಕ್ಷಿಸುವದಕ್ಕೆ ಇಷ್ಟಪಡುತ್ತೇವೆ. ಈ ಪ್ರವೃತ್ತಿಯ ಕುರಿತು ಯೇಸು ತನ್ನ ಪರ್ವತದ ಮೇಲಿನ ಪ್ರಸಂಗದಲ್ಲಿ ಮಾತಾಡಿದನು: "ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವದೇಕೆ?" (ಮತ್ತಾಯ 7:3).

ಅಷ್ಟುಮಾತ್ರವಲ್ಲದೆ, ನಾವು ಆತ್ಮಾವಲೋಕನದಲ್ಲಿ ಸಮಯವನ್ನು ಕಳೆಯುವದಾದರೆ, ಕೆಲವು ನಾವು ನಮ್ಮನ್ನೇ ಮೋಸಪಡಿಸಿಕೊಳ್ಳುತ್ತೇವೆ. ಅಮೆರಿಕದ ತತ್ವಜ್ಞಾನಿ ಮತ್ತು ಮನೋಶಾಸ್ತ್ರಜ್ಞನಾದ William Jamesನು ಹೀಗೆ ಬರೆದನು, "ಯಾವಾಗೆಲ್ಲಾ ಇಬ್ಬರು ಜನರು ಭೇಟಿಯಾಗಿ ಮಾತಾಡುತ್ತಾರೋ ಅವರ ನಡುವೆ ವಾಸ್ತವಿಕದಲ್ಲಿ ಆರು ಜನರಿರುತ್ತಾರೆ. ಅಲ್ಲಿ ಒಬ್ಬೊಬ್ಬನಿಗೂ ತನ್ನನ್ನು ಹೇಗೆ ಭಾವಿಸಿಕೊಳ್ಳುತ್ತಾನೋ ಆ ವ್ಯಕ್ತಿ, ಬೇರೆಯವನು ಮತ್ತೊಬ್ಬನು ಹೇಗೆ ಕಾಣುತ್ತಾನೋ ಆ ವ್ಯಕ್ತಿ, ಮತ್ತು ಆ ಒಬ್ಬೊಬ್ಬನು ನಿಜ ವ್ಯಕ್ತಿತ್ವವಾಗಿರುವ ವ್ಯಕ್ತಿ ಹೀಗೆ ಆರು ಮಂದಿ ಇರುತ್ತಾರೆ."[77] ಇಲ್ಲಿ ಮುಂದಿರುವ ಸವಾಲು ಮೂರು ವಿಧದ್ದಾಗಿದೆ: (1) ನಮ್ಮನ್ನು ಪರೀಕ್ಷಿಸಿಕೊಳ್ಳೋಣ, ಹೊರತು ಮತ್ತೊಬ್ಬರನ್ನಲ್ಲ. (2) ನಾವು ಅದನ್ನು ಮಾಡುವ ವೇಳೆ, ನಾವು ನಿಜಕ್ಕೂ ಏನಾಗಿದ್ದವೋ ಆ ರೀತಿಯಲ್ಲಿಯೇ, ದೇವರು ನಮ್ಮನ್ನು ಕಾಣುವ ರೀತಿಯಲ್ಲಿಯೇ ನೋಡಿಕೊಳ್ಳಲು ಪ್ರಯಾಸ ಪಡೋಣ (ಯಾಕೋಬ 1:21-25). (3) ನಾವು ಯಾವ ವಿಷಯಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂಬುದನ್ನು ಕಾಣುವಾಗ, ನಾವು "ವಾಕ್ಯವನ್ನು ಕೇಳುವವರು ಮಾತ್ರವೇ ಆಗಿದ್ದು ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುವವರಾಗಿರದೆ ವಾಕ್ಯದ ಪ್ರಕಾರ ನಡೆಯುವವರಾಗಿರೋಣ."

### ಕಡೇ ಮಾತು (11:3-14)

11:3-14ರ ಮೇಲೆ ಪ್ರಸಂಗವನ್ನು ಮಾಡುವದಕ್ಕಿರುವ ಸಂಭಾವ್ಯ ಶಿರ್ಷೀಕೆಗಳಲ್ಲಿ ಇವುಗಳು ಸೇರಿರುತ್ತವೆ: "ಯಾವಾಗಲೂ ಕೊನೆಯಲ್ಲಿ ದೇವರು ಹೇಳಿದ್ದೇ ನಡೆಯುತ್ತದೆ" ("ಇಲ್ಲಿ ಮೇಲಕ್ಕೆ ಬಾ . . .") ಮತ್ತು "ಕರಾಳತೆ ಮತ್ತು ಮಹಿಮೆ." Charles Ryrieನು ಈ ವಿಭಾಗವನ್ನು "ಇಬ್ಬರು ಸಾಕ್ಷಿಗಳು" ಎಂದು ಕರೆದನು ಮತ್ತು ಅದನ್ನು ಈ ವಿಧದಲ್ಲಿ ವಿಭಾಗಿಸಿದನು: (1) ಅವರ ಸಮಯ (ವ. 3); (2) ಅವರ ವಿಶಿಷ್ಟ ಗುಣಗಳು (ವಚನಗಳು 4-6); (3) ಅವರ ಅಂತ್ಯ (ವಚನಗಳು 7-10); (4) ಅವರ ಶರೀರಸಮೇತವಾದ ಸ್ಥಳಾಂತರ (ವಚನಗಳು 11-14).[78] Albert Baldingerನು "ಜಯದ ಧ್ವನಿಗಳು" ಎಂಬ ಶಿರ್ಷೀಕೆಯಲ್ಲಿ 11ನೇ ಅಧ್ಯಾಯವನ್ನು ಪೂರ್ತಿಯಾಗಿ ಬಳಸಿದನು. ಆತನ ಸಂಕ್ಷಿಪ್ತ ವಿವರಣೆಯ ಒಂದು ಆಯ್ದ ಇಲ್ಲಿದೆ: (1) ಒಂದು ಭರವಸೆ ಕೊಡುವ ಧ್ವನಿ (ವಚನಗಳು 1, 2); (2) ಒಂದು ಅಚಲವಾದ ಧ್ವನಿ (ವಚನಗಳು 3-10); (3) ಒಂದು ಜಯಶಾಲಿ ಧ್ವನಿ (ವಚನಗಳು 11-14).[79]

### ಸಾಕ್ಷಿ ಹೇಳುವದು (11:3-13)

ಇಬ್ಬರು ಸಾಕ್ಷಿಗಳ ಕಥೆಯಿಂದ, ಎಲ್ಲರೂ ಕಲಿತುಕೊಳ್ಳಬಹುದಾದ ಐದು ವಾಸ್ತವಾಂಶಗಳಿರುತ್ತವೆ. ನೀವು ಈ ಐದು ವಾಸ್ತವಾಂಶಗಳನ್ನು ಕಲಿತುಕೊಳ್ಳುವದಾದರೆ ಏನೇ ಪರಿಣಾಮಗಳು ಎದುರಾದರೂ ಸರಿಯೇ ವಾಕ್ಯವನ್ನು ಸಾರುವ ಮತ್ತು ಉಪದೇಶಿಸುವ ಸವಾಲನ್ನು ಸಂಧಿಸಬಲ್ಲಿರಿ.

1. *ದೇವರು ನಿಮ್ಮನ್ನು ಶ್ಲಾಘಿಸುವನು.* ನೀನು ನಿಮ್ಮ ನಂಬಿಕೆ ವಿಷಯವಾಗಿ "ಸಾಕ್ಷಿಯನ್ನು ಹೇಳುವ" ವೇಳೆ, ನಿಮ್ಮಲ್ಲಿ ನಾನೊಂದು ದೈವಿಕ ಧ್ಯೇಯವನ್ನು ನೆರವೇರಿಸುತ್ತಿದ್ದೇನೆಂಬ ಭಾವನೆಯು ಬರತಕ್ಕದ್ದು. ನಿಮಗೆ ಈ ಆಲೋಚನೆಯು ಮನದಟ್ಟಾಗತಕ್ಕದ್ದಾಗಿದೆ: "ದೇವರು ಎಲ್ಲಿ ಇರಬೇಕೆಂದು ನನ್ನ ವಿಷಯದಲ್ಲಿ ಬಯಸುತ್ತಾನೋ ನಾನು ಅಲ್ಲಿಯೇ ಇದ್ದೇನೆ, ಮತ್ತು ನಾನೇನು ಮಾಡಬೇಕೆಂದು ಆತನು ಬಯಸುತ್ತಾನೋ ಅದನ್ನೇ ಮಾಡುತ್ತಿದ್ದೇನೆ."

2. *ಮನುಷ್ಯರು ನಿಮ್ಮನ್ನು ದ್ವೇಷಿಸುವರು.* ದುರಾದೃಷ್ಟಕರವಾಗಿ, ದೇವರ ಚಿತ್ತವನ್ನು

ಮಾಡುವದರಿಂದ ಎಲ್ಲಾ ಮನುಷ್ಯರು ನಿಮ್ಮ ಕೆಲಸವನ್ನು ಪ್ರಶಂಸಿಸುತ್ತಾರೆಂದು, ಅಥವಾ ನಿಮ್ಮ ಸಂದೇಶವನ್ನು ಸ್ವೀಕರಿಸಿಕೊಳ್ಳುತ್ತಾರೆಂದು ಖಾತ್ರಿಯಿರುವದಿಲ್ಲ. ಕೆಲವರು ನಿಮ್ಮನ್ನು ವಿರೋಧಿಸುವರು, ಮತ್ತು ಬಹುಶಃ ನಿಮಗೆ ಹಾನಿಯನ್ನುಂಟು ಮಾಡುವದಕ್ಕೆ ಸಹ ಪ್ರಯತ್ನಿಸಬಹುದು.

3. *ದೇವರು ನಿಮ್ಮನ್ನು ಕಾಪಾಡುವನು.* ಮನುಷ್ಯರು ನಿಮಗೆ ಹಾನಿಯನ್ನು ಮಾಡಲು ಪ್ರಯತ್ನಿಸುವರು, ಆದರೆ ನೀವು ದೇವರ ಚಿತ್ತದೊಳಗೆ ಇರುವದಾದಲ್ಲಿ ಆತನು ನಿಮ್ಮನ್ನು ತಪ್ಪಿಸಿ ಕಾಪಾಡುವನು. ದೇವರು ನಮ್ಮನ್ನು ಪ್ರತಿಯೊಂದು ರೀತಿಯಲ್ಲಿಯೂ ಕಾಪಾಡುವದಿಲ್ಲ. ನಾವು ಈಗಲೂ ರೋಗ ಮತ್ತು ಮರಣಗಳಿಗೆ ಅಧೀನರಾಗಿದ್ದೇವೆ, ಆದರೆ ಆತನು ನಮ್ಮನ್ನು ಯಾವದು ಅತ್ಯಂಥ ಪ್ರಾಮುಖ್ಯವೋ ಅದರ ವಿಷಯದಲ್ಲಿ ಕಾಪಾಡುವನು: ಆತನು ನಮ್ಮ ಆತ್ಮಗಳನ್ನು ಕಾಪಾಡುವನು.

4. *ಮನುಷ್ಯರು ನಿಮ್ಮನ್ನು ಕೊಲ್ಲಬಹುದಾಗಿದೆ.* ದೇವರ ಕೆಲಸವನ್ನು ಮಾಡುವಂತೆ ಕ್ರೈಸ್ತರು ಆತನಿಗೆ ಕಾಪಾಡಲ್ಪಟ್ಟಿರುತ್ತಾರಾದರೂ, ಆ ಕಾಪಾಡುವಿಕೆಯು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಆಗಿರುತ್ತದೆ. ಕೆಲವು ರೀತಿಗಳಲ್ಲಿ, ನಾವು ಆಪತ್ತುಗಳಿಗೆ ಒಳಗಾಗಬಹುದಾಗಿದೆ - ನಾವು ಆಗಲೂ ಕೊಲ್ಲಲ್ಪಡುವ ಸಾಧ್ಯತೆಯಿದೆ. ಯೇಸು ತನ್ನ ಶಿಷ್ಯರಿಗೆ ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ: ಎಂದು ಹೇಳಿದನು (ಲೂಕ 10:19). ಬಳಿಕ, ಅವರೊಳಗೆ ಕೆಲವರು ತಮ್ಮ ನಂಬಿಕೆಗೋಸ್ಕರ ರಕ್ತಸಾಕ್ಷಿಗಳಾಗಿ ಮರಣಿಸಿದರು - ಆದರೆ ಅವರ *ಆತ್ಮಗಳು* "ಕೇಡಿಗೆ" ಒಳಗಾಗಲಿಲ್ಲ.

5. *ಅಂತಿಮವಾಗಿ, ನೀವು ನಂಬಿಗಸ್ತರಾಗಿ ಉಳಿಯುವದಾದರೆ ದೇವರು ನಿಮಗೆ ಪ್ರತಿಫಲವನ್ನು ಕೊಡುವನು.* ನೀವು ತಾಳ್ಮೆಯಿಂದ ಮುಂದುವರೆಯುವದಾದರೆ, ಎಲ್ಲವೂ ಹಿಕತರವಾಗುವದು. ದೇವರು ನಂಬಿಗಸ್ತರನ್ನು ಆತನ ಸಮ್ಮುಖದಲ್ಲಿ ನಿತ್ಯಜೀವವುಳ್ಳವರಾಗಿರುವಂತೆ ಆಶೀವರ್ದಿಸುವನು.

## ದೇವರ ಸಾಕ್ಷಿಗಳು (11:3-13)

ನೀವು ವಾಕ್ಯವನ್ನು ಸಾರುವದಕ್ಕೆ ಹೊರಡುವಾಗ, ದೇವರು ಸಹ ನಿಮ್ಮನ್ನು ಆದೇಶಿಸುತ್ತಾನೆ ಮತ್ತು ಬಲಗೊಳಿಸುತ್ತಾನೆಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ನೀವು ಅಪೊಸ್ತರು ಮಾಡಿದ ಅದೇ ರೀತಿಯಲ್ಲಿಯೇ "ಸಾಕ್ಷಿ ಹೇಳುವವರು" ಆಗಿರುವದಿಲ್ಲ (ಅಪೊಸ್ತಲರ ಕೃತ್ಯಗಳು 1:8) - ನೀವು ಆತನ ಪುನರುತ್ಥಾನದ ವಿಷಯದಲ್ಲಿ ಪ್ರತ್ಯಕ್ಷ ಸಾಕ್ಷಿಗಳಲ್ಲ (ಅಪೊಸ್ತಲರ ಕೃತ್ಯಗಳು 1:22) - ಆದರೆ ಆತನು ತನ್ನ ವಾಕ್ಯದಲ್ಲಿ ಪ್ರಕಟಗೊಳಿಸುವ ಕಾರ್ಯದ ಕುರಿತು "ನೇರವಾದ ತಿಳುವಳಿಕೆ" ಮತ್ತು ಆತನು ನಿಮ್ಮ ಜೀವಿತವನ್ನು ಹೇಗೆ ಆಶೀರ್ವದಿಸಿದ್ದಾನೆಂಬುದರ ಕುರಿತು "ನೇರವಾದ ತಿಳುವಳಿಕೆ" ಹೊಂದಿರುವಿರಿ. ನೀವು ಒಬ್ಬ ಪ್ರೇರಿತ ಪ್ರವಾದಿಯಲ್ಲ, ಆದರೆ ನೀವು ಈಗಲೂ ಈ ತೊಂದರೆಗೊಳಗಾಗಿರುವ ಲೋಕದಲ್ಲಿ ದೇವರ ವಕ್ತಾರರಾಗಿರಬಲ್ಲಿರಿ (ಮತ್ತಾಯ 28:19, 20).

ದೇವರು ಮೊದಲ ಶತಮಾನದಲ್ಲಿ ತನಗಾಗಿ ಮಾತಾಡುವವರನ್ನು ಬಯಸಿದ್ದಷ್ಟೇ ಈಗಲೂ ಅವರು ಬೇಕೆಂದು ಬಯಸುತ್ತಾನೆ. ಆರಾಧಕರನ್ನು ಲೆಕ್ಕಿಸಿ ಅವರನ್ನು ಕಾಪಾಡಿದ ಬಳಿಕ (ಪ್ರಕಟನೆ 11:1, 2), ಅವರು ಭದ್ರತೆಯ ಸ್ಥಳದಲ್ಲಿ ಮುದುಡಿಕೊಂಡು ಕುಳಿತುಕೊಳ್ಳಲಿಲ್ಲ ಎಂಬುದನ್ನು ಗಮನಿಸಿರಿ. ದೇವರ ಸಾಕ್ಷಿಗಳಾಗಿದ್ದ ಅವರು, ಲೋಕದ ಪ್ರಾಬಲ್ಯತೆಯಲ್ಲಿದ್ದ ಪಟ್ಟಣದೊಳಗೆ ಧೈರ್ಯವಾಗಿ ಹೊರಟು ಕರ್ತನ ಸಂದೇಶವನ್ನು ಸಾರಬೇಕಾಗಿತ್ತು. (11:2 ಮತ್ತು 11:8ನ್ನು ಹೋಲಿಸಿ ನೋಡಿರಿ.) ಉಪ್ಪು ಉದುರಿಸುವ ಡಬ್ಬದಿಂದ ಉಪ್ಪು ಎಂದಿಗೂ

ಹೊರಗೆ ಬರದೇ ಇದ್ದಲ್ಲಿ ಅದಕ್ಕೆ ಯಾವದೇ ಬೆಲೆಯಿರುವದಿಲ್ಲ. ನಾಶನಮಾರ್ಗದಲ್ಲಿ ಇರುವವರಿಗೆ ತನ್ನ ನಂಬಿಕೆಯನ್ನು ಹಂಚಿಕೊಳ್ಳುವದಕ್ಕೆ ಅವರೊಂದಿಗೆ ಎಂದಿಗೂ ಒಡನಾಟವನ್ನೇ ಇಟ್ಟುಕೊಳ್ಳದ ಕ್ರೈಸ್ತನು ಸಹ ಅದೇ ರೀತಿಯಾಗಿದ್ದಾನೆ.

> . . . ಸಭೆಯು ಕೇವಲ ಬದುಕುಳಿಯುವದಕ್ಕಿಂತ ಹೆಚ್ಚು ಪ್ರಾಮುಖ್ಯವಾದ ಕೆಲಸವೊಂದನ್ನು ಹೊಂದಿರುತ್ತದೆ. ಹೇಳುವ ಸಾಕ್ಷಿಗೆ ಬಲವಾದ ವಿರೋಧ ವ್ಯಕ್ತವಾದರೂ ಸರಿಯೇ, ಜನರಿಗೆ ಸಾಕ್ಷಿಯನ್ನು ಹೇಳಬೇಕೆಂಬುದಕ್ಕಾಗಿಯೇ ಸಭೆಯು ಲೋಕದಲ್ಲಿ ಇಡಲ್ಪಟ್ಟಿದೆ. ಗಳಿಗೆಯು ಹೆಚ್ಚೆಚ್ಚು ಅಂಧಕಾರಗೊಂಡ ಹಾಗೆ, ಸಭೆಗಳು ತಾವೇನಾಗಿರಬೇಕೋ ಅದಾಗಿರಬೇಕಾದ ಅಗತ್ಯತೆಯು ಇನ್ನೂ ಅಧಿಕಗೊಳ್ಳುತ್ತದೆ: ದೀಪಗಳು, ಅದರ ಮೂಲಕ ಕ್ರಿಸ್ತನ ಬೆಳಕು ಪ್ರಕಾಶಿಸುತ್ತದಷ್ಟೆ.[80]

ನೀವು ಸುವಾರ್ತೆಯನ್ನು ಹಂಚಿಕೊಳ್ಳುವಾಗ, ನಿಮ್ಮ ಜೀವಿತಕ್ಕಾಗಿ ದೇವರು ಹೊಂದಿರುವ ಚಿತ್ತದಲ್ಲಿ ಒಂದು ಅತ್ಯಾವಶ್ಯಕವಾದ ಭಾಗವನ್ನು ನೆರವೇರಿಸುವವರಾಗಿದ್ದೀರಿ - ಮತ್ತು ದೇವರಿಗೆ ಅದು ಮೆಚ್ಚಿಕೆಯಾಗುತ್ತದೆ.

## ಕ್ರಿಸ್ತವಿರೋಧಿ ಮತ್ತು ಪ್ರಕಟನೆ ಪುಸ್ತಕ (11:7)

"ಕ್ರಿಸ್ತವಿರೋಧಿ" ಎಂಬ ಉಪನಾಮವು ಪ್ರಕಟನೆ ಪುಸ್ತಕದಲ್ಲಿ ಯಾವ ವಿಧದಲ್ಲಿಯೂ ಕಾಣಿಸಿಕೊಳ್ಳುವದೇ ಇಲ್ಲ; ಹಾಗಿದ್ದರೂ, ಇದು ಪ್ರಕಟನೆ ಪುಸ್ತಕದ ಮೇಲೆ ಬರೆಯಲಾಗಿರುವ ವ್ಯಾಖ್ಯಾನ ಗ್ರಂಥಗಳಲ್ಲಂತೂ ಹೇರಳವಾಗಿ ಕಂಡು ಬರುತ್ತದೆ. ವಿಶೇಷವಾಗಿ 11ನೇ ಅಧ್ಯಾಯದಲ್ಲಿ ಕುಖ್ಯಾತಿಯುಳ್ಳ ಮೃಗದ ಪರಿಚಯ ಮಾಡಲ್ಪಟ್ಟ ಕೂಡಲೇ ಈ ಪದವು ಬಹಳವಾಗಿ ಕಾಣಿಸಿಕೊಳ್ಳಲಾರಂಭಿಸುತ್ತದೆ. James Efirdನು ಹೀಗೆ ಬರೆದನು,

> ಒಬ್ಬನು ಈ ವಾಕ್ಯಭಾಗದ ಕುರಿತು ಏನೋ ಕುತೂಹಲಕರವಾದದ್ದನ್ನು ಸಹ ಗಮನಿಸುವನು. ಇಲ್ಲಿ "ಕ್ರಿಸ್ತವಿರೋಧಿ" ಎಂಬ ಒಂದು ಉಲ್ಲೇಖವೇ ಇರುವದಿಲ್ಲ. ಈ ಪದವು ಹೊಸ ಒಡಂಬಡಿಕೆಯಲ್ಲಿ ವಿಶೇಷವಾಗಿ ಆಕಾರಗಳನ್ನುದ್ದೇಶಿಸಿ ಸತತವಾಗಿ ಬಳಸಲಾಗಿರುತ್ತದೆ, ಮತ್ತು ವಿಶೇಷವಾಗಿ ಪ್ರಕಟನೆ ಪುಸ್ತಕದಲ್ಲಿರುವ . . . ಮೃಗ . . . ಹೆಚ್ಚುಕಡಿಮೆ ಪ್ರತಿಯೊಬ್ಬರೂ ಈ ಆಕಾರವನ್ನು ಆ ಹೆಸರಿನಿಂದ ಕರೆಯುತ್ತಾರೆ. ಹೇಗೂ, ಪ್ರಕಟನೆ ಪುಸ್ತಕದ ಲೇಖಕನು ಹಾಗೆ ಕರೆಯುವದಿಲ್ಲ. ವಾಸ್ತವಾಂಶವೇನೆಂದರೆ ಯೋಹಾನನು ಇಡೀ ಪುಸ್ತಕದಲ್ಲಿ ಒಂದು ಸಾರಿಯಾದರೂ ಆ ಪದದ ಬಳಕೆಯನ್ನು ಮಾಡಿಯೇ ಇಲ್ಲ! ಹೊಸ ಒಡಂಬಡಿಕೆಯೊಳಗೆ ಆ ಪದವು ಕಾಣಿಸಿಕೊಳ್ಳುವ ಏಕೈಕ ಸ್ಥಳವೆಂದರೆ ಅದು ಯೋಹಾನನ ಪತ್ರಿಕೆಗಳಲ್ಲಿಯೇ ಆಗಿದ್ದು ಅಲ್ಲಿ ಯೇಸುವು ಶರೀರಧಾರಿಯಾಗಿ ಬಂದನೆಂಬುದನ್ನು ಅಲ್ಲಗಳೆಯುವವನೇ ಕ್ರಿಸ್ತವಿರೋಧಿ ಎಂಬದಾಗಿ ಅರ್ಥನಿರೂಪಣೆ ಮಾಡಲಾಗಿದೆ (cf. 1 ಯೋಹಾನ 2:22). ಯೋಹಾನನು ಪ್ರಕಟನೆ ಪುಸ್ತಕದಲ್ಲಿ ಈ ಪದ ಬಳಕೆಯನ್ನು ಮಾಡದಿರುವದರಿಂದ ಮತ್ತು ಇಂದು ಬಹಳಷ್ಟು ಜನರು ತಮ್ಮ ಮನಸ್ಸುಗಳಲ್ಲಿ "ಕ್ರಿಸ್ತವಿರೋಧಿ" ಕುರಿತು ಕೆಲವೊಂದು ಅರ್ಥನಿರೂಪಣೆಗಳನ್ನು ಇಟ್ಟುಕೊಂಡಿರುವದರಿಂದ, ಆ ಪದವನ್ನು ಈ ಆಕಾರ ಅಥವಾ ಪ್ರಕಟನೆ ಪುಸ್ತಕದಲ್ಲಿರುವ ಯಾವದೇ ಆಕಾರಗಳಿಗಾಗಿ ಬಳಸದೆ ಇರುವದೇ ಉತ್ತಮವೆಂದು ತೋರುತ್ತದೆ. ಇಲ್ಲಿ ಅನುಸರಿಸಬಹುದಾದ ಅತ್ಯುತ್ತಮ ದಾರಿಯೆಂದರೆ ಯೋಹಾನನಿಗೆ ಆತನು ಇಷ್ಟ ಪಡುವ ರೀತಿಯಲ್ಲಿ ಅರ್ಥನಿರೂಪಣೆ ಮಾಡಿ ಈ ಆಕಾರಗಳನ್ನು ಬಣ್ಣಿಸುವದಕ್ಕೆ ಅನುಮತಿಸುವದೇ ಆಗಿದೆ.[81]

ಒಬ್ಬನು ಶೀಘ್ರವಾಗಲಿ ತಡವಾಗಿ ಆಗಲು ಪ್ರಕಟನೆ ಪುಸ್ತಕದ ಕುರಿತ ಯಾವದೇ ಅಧ್ಯಯನದ

ವೇಳೆ "ಕ್ರಿಸ್ತವಿರೋಧಿ" ಎಂಬ ಪದವನ್ನು ಎದುರುಗೊಳ್ಳಲಿದ್ದಾನಾದ್ದರಿಂದ, ಈ ಪದದ ಕುರಿತು ಕ್ಲುಪ್ತವಾಗಿ ಪರೀಕ್ಷೆ ಮಾಡುವದು ಸೂಕ್ತವಾಗಿರುತ್ತದೆ.

*ಮನುಷ್ಯರ ಊಹೆ.* ಬೈಬಲಿನಲ್ಲಿ "ಕ್ರಿಸ್ತವಿರೋಧಿ" ಎಂಬ ಪದವು ಕಾಣಿಸಿಕೊಳ್ಳುವ ಏಕೈಕ ಸ್ಥಳವೆಂದರೆ ಅದು ಯೋಹಾನನ ಪತ್ರಿಕೆಗಳಲ್ಲಿಯೇ ಆಗಿದೆ: 1 ಯೋಹಾನ 2:18, 22; 4:3; 2 ಯೋಹಾನ 7. ತಾನು ಒಬ್ಬ ನಿರ್ದಿಷ್ಟವಾದ ವ್ಯಕ್ತಿಯನ್ನು ಸೂಚಿಸಿ ಹೇಳಲಿಲ್ಲ, ಬದಲಾಗಿ ಯೇಸುವಿನ ದೈವತ್ವವನ್ನು ನಿರಾಕರಿಸುವ *ಯಾವನೇ* ಆಗಿದ್ದರೂ ಅವನನ್ನು ಸೂಚಿಸಿ ಹೇಳಿದ್ದಾನೆಂಬುದನ್ನು ಯೋಹಾನನು ಸ್ಪಷ್ಟವಾಗಿ ತಿಳಿಸಿದನು. ವಾಸ್ತವಾಂಶವು ಹೀಗಿದ್ದರೂ ಮನುಷ್ಯರು ಮುಂದೆ ಒಬ್ಬ ಹೆಚ್ಚುಕಡಿಮೆ-ಸೂಪರ್-ಮಾನವ ಆಗಿರುವ ಕ್ರಿಸ್ತವಿರೋಧಿ ಬರುತ್ತಾನೆಂಬ (ಆಂಗ್ಲದಲ್ಲಿ ಈ ಪದಕ್ಕೆ "A" ಬಳಸಲಾಗಿರುತ್ತದೆ) - ಎರಡನೆಯ ಬರೋಣಕ್ಕೆ ಸ್ವಲ್ಪ ಕಾಲ ಮುಂಚೆ - ಬಗ್ಗೆ ಸುದೀರ್ಘವಾದ ಊಹೆಗಳನ್ನು ಮಾಡುವದಕ್ಕೆ ಹಿಂಜರಿಯದವರಾಗಿದ್ದಾರೆ. ಅನೇಕ ಸಹಸ್ರವರ್ಷಪೂರ್ವಾಡಳಿತ ವಾದಿಗಳು ಅವರ ಕಲ್ಪಿತ ಏಳು ವರ್ಷಗಳ ಸಂಕಷ್ಟ ಕಾಲದ ಮಧ್ಯಭಾಗದಲ್ಲಿ ಕ್ರಿಸ್ತವಿರೋಧಿ ಎದ್ದೇಳುವನೆಂದು ವಾದಿಸುತ್ತಾರೆ. ಆತನು ಶ್ರೇಷ್ಠವಾದ ಮಾನಸಿಕ ಚಾತುರ್ಯತೆ ಹಾಗೂ ಒಂದು ಆಯಸ್ಕಾಂತೀಯವಾದ ವ್ಯಕ್ತಿತ್ವವುಳ್ಳವನಾಗಿರುತ್ತಾನೆ, ಹೇಳಲಸಾಧ್ಯವಾದ ದುಷ್ಟತ್ವದಿಂದ ತುಂಬಿರುವಾತನು ಆಗಿರುವನೆಂದು ಸಾಮಾನ್ಯವಾಗಿ ನಂಬಲಾಗುತ್ತದೆ. ಒಬ್ಬ ಪ್ರಸಿದ್ಧ ಸಹಸ್ರವರ್ಷಪುರ್ವಾಡಳಿ ವಾದಿ ಲೇಖಕನು ಕ್ರಿಸ್ತವಿರೋಧಿ ಈಗ ತನ್ನ "ಪೈಶಾಚಿಕ ಕನಸುಗಳನ್ನು ಪೋಷಿಸಿಕೊಳ್ಳುತ್ತಾ"[82] ಯೂರೋಪಿನ ಯಾವದೋ ಒಂದು ಸ್ಥಳದಲ್ಲಿದ್ದಾನೆ ಎಂಬ ಮನವರಿಕೆಯನ್ನು ಹೊಂದಿರುತ್ತಾನೆ. ಈ ಅಸ್ವಾಭಾವಿಕ ವ್ಯಕ್ತಿಯ - ಸೈತಾನನ ಅವತಾರ - ಕಲ್ಪನೆಯು ಧಾರ್ಮಿಕ ವಿಚಾರಧಾರೆಯೊಳಗೆ ತನ್ನನ್ನು ಎಷ್ಟೊಂದು ಅಂತರ್ಗತ ಮಾಡಿಕೊಂಡಿರುತ್ತದೆಂದರೆ, ಅನೇಕರ ಮನಸ್ಸುಗಳಲ್ಲಿ ಕ್ರಿಸ್ತವಿರೋಧಿಯು ಊಹೆಯ ಸ್ಥಾನವನ್ನು ಬಹಳ ಕಾಲದ ಹಿಂದೆಯೇ ಕಳೆದುಕೊಂಡು ಈಗ ನಿರಾಕರಿಸಲಾದಂಥ ವಾಸ್ತವಾಂಶವಾಗಿ ಬಿಟ್ಟಿದ್ದಾನೆ.

ಈ ಪುರಾಣಪ್ರಸಿದ್ಧ ವ್ಯಕ್ತಿಯ ಕುರಿತ ಆಧಾರವಿಲ್ಲ ಕಲ್ಪನೆಗಳ ಬೇರುಗಳು ಅನ್ಯದೇವಾರಾಧನೆಯ ಪುರಾಣಗಳಲ್ಲಿ, ಯೆಹೂದಿ ಸಂಪ್ರದಾಯಗಳಲ್ಲಿ, ಬೈಬಲಿನ ಕೆಲವೊಂದು ಅಸ್ಪಷ್ಟವಾಗಿರುವ ವಾಕ್ಯಭಾಗಗಳಲ್ಲಿ, ಮತ್ತು ಮನುಷ್ಯನ ಫಲವತ್ತಾದ ಊಹಾಶಕ್ತಿಯಲ್ಲಿ ಅಡಗಿರುತ್ತವೆ. ಬೈಬಲಿನ ಅಸ್ಪಷ್ಟವಾದ ವಾಕ್ಯಭಾಗಗಳ ವಿಷಯವಾಗಿ ನೋಡುವದಾದರೆ, ಅದರಲ್ಲಿ ಅತ್ಯಂತ ಜನಪ್ರಿಯವಾದದ್ದೆಂದರೆ 2 ಥೆಸಲೋನಿಕ 2ರಲ್ಲಿ ಪೌಲನು ಬರೆಯುವ "ಅಧರ್ಮಸ್ವರೂಪ" ನ ಕುರಿತಾದ ಗೂಢಲಿಪಿಯುಳ್ಳ ವಾಕ್ಯಭಾಗವೇ. KJV ತರ್ಜುಮೆಯು ಆತನನ್ನು "ಪಾಪದ ಮನುಷ್ಯನು" ಎಂದು ಕರೆಯುತ್ತದೆ. "ಪಾಪವು ಅಧರ್ಮವೇ" (1 ಯೋಹಾನ 3:4) ಆಗಿರುವದರಿಂದ, ಈ ಎರಡು ಪದಗಳಲ್ಲಿ ಅಷ್ಟೇನೂ ವ್ಯತ್ಯಾಸವಿರುವದಿಲ್ಲ.

*ಪೌಲನ "ಅಧರ್ಮಸ್ವರೂಪನು"* (2 ಥೆಸಲೋನಿಕ 2:3-10). ಪೌಲನು ಹೀಗೆ ಬರೆದನು,

> ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ. ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ

ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ (2 ಥೆಸಲೋನಿಕ 2:3, 4).

ಈ "ಅತ್ಯಂಥ ಅಸ್ಪಷ್ಟವಾಗಿರುವ"[83] ವಾಕ್ಯಭಾಗದ ಕುರಿತು ವಿವರವಾಗಿ ವಿಶ್ಲೇಷಣೆ ಮಾಡುವದಕ್ಕೆ ಸಮಯವಾಗಲಿ ಅಥವಾ ಸ್ಥಳಾವಕಾಶವಾಗಲಿ ಇರುವದಿಲ್ಲ, ಇದು "ಹೊಸ ಒಡಂಬಡಿಕೆಯಲ್ಲಿಯೇ ಅತ್ಯಂಥ ಹೆಚ್ಚು ಕಠಿಣವಾದವುಗಳಲ್ಲೊಂದಾಗಿದೆ."[84] ಪೌಲನು ಈ ಮುಂಚೆ ತನ್ನ ವಾಚಕರಿಗೆ ಕಲಿಸಿದ್ದನ್ನೇ ಪುನಃ ಅವಲೋಕನ ಮಾಡುತ್ತಿರುವೆನೆಂಬುದನ್ನು ಸೂಚಿಸುತ್ತಾನೆ (2 ಥೆಸಲೋನಿಕ 2:5). ಈ ಚರ್ಚೆಯಾಂಶವು ನಮಗೆ ಗೊಂದಲಕರವಾಗಿರುವ ರೀತಿಯಲ್ಲಿ ಅಂದು ಥೆಸಲೋನಿಕದವರಿಗೆ ಬಹುಶಃ ಗೊಂದಲಕರವಾಗಿ ಇರಲಿಲ್ಲ ಅನ್ನಿಸುತ್ತದೆ. ಇಷ್ಟು ವರ್ಷಗಳಲ್ಲಿ, ಕೆಲವೊಬ್ಬ ವ್ಯಕ್ತಿಗಳನ್ನು "ನಾಶನದ ಮಗನು" ಎಂಬುದಾಗಿ ಗುರುತಿಸುವಂಥ ಅಸಂಖ್ಯಾತ ಪ್ರಯತ್ನಗಳು ಮಾಡಲ್ಪಟ್ಟಿವೆ - ಸಾಮಾನ್ಯವಾಗಿ ಆ ವ್ಯಕ್ತಿಯು ಈಗ ಸದ್ಯ ಚೆನ್ನಾಗಿ - ಪರಿಚಿತನಿರುವ ಕ್ರೈಸ್ತತ್ವದ ವಿರೋಧಿಯು ಆಗಿರುತ್ತಾನೆ. ಪೌಲನು ನಿರ್ದಿಷ್ಟವಾದ ವ್ಯಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಲ್ಲಿ, "ಅಧರ್ಮಸ್ವರೂಪನು" ರೋಮನ್ ಚಕ್ರವರ್ತಿಗಳಲ್ಲೊಬ್ಬನು ಆಗಿರುವದಕ್ಕೆ ಸಾಧ್ಯವಿದೆ. ಇಷ್ಟು ವರ್ಷಗಳಲ್ಲಿ, ಪ್ರೊಟೆಸ್ಟೆಂಟ್ ಅರ್ಥನಿರೂಪಣೆಗಳಲ್ಲಿರುವಂಥ ಹೆಚ್ಚು ಜನಪ್ರಿಯವಾದದ್ದರಲ್ಲಿ ಒಂದು ಎಂದರೆ ಅದು ಪೋಪ್. ಈ ಅರ್ಥನಿರೂಪಣೆಯು 2 ಥೆಸಲೋನಿಕ 2:3ರಲ್ಲಿರುವ "ಮತಭ್ರಷ್ಟತೆ" ಎಂಬ ಪದಕ್ಕೆ ಸೂಕ್ತವಾಗಿ ಸರಿಹೊಂದುತ್ತದೆ. 2 ಥೆಸಲೋನಿಕ 2ನೇ ಅಧ್ಯಾಯದ ಯಾವ ಅರ್ಥನಿರೂಪಣೆಯು ಅದರದ್ದೇ ಆಗಿರುವ ಸಮಸ್ಯೆಗಳಿಲ್ಲದೆ ಇರುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿರಿ.

ಹೇಗೂ, ಪೌಲನು ಈ ವಾಕ್ಯಭಾಗದಲ್ಲಿ ಅಂತ್ಯಕಾಲಿಕ ಭಾಷೆಯನ್ನು ಬಳಸುತ್ತಿದ್ದಾನೆಂದು ಅನೇಕ ಲೇಖಕರು ಮನವರಿಕೆಗೊಂಡಿದ್ದಾರೆ. ಪೌಲನ "ಅಧರ್ಮಸ್ವರೂಪನು" ಯಾವದಾದರೊಬ್ಬ ಚಕ್ರವರ್ತಿ ಅಥವಾ ಒಟ್ಟಾರೆ ರೋಮನ್ ಸರ್ಕಾರದಲ್ಲಿ ಮೈದಾಳಿಕೊಂಡಿದ್ದಲ್ಲಿ, ಈ ಸಂಬಂಧವು ಆತನು ಏಕೆ ಅಂತ್ಯಕಾಲಿಕ ಭಾಷೆಯನ್ನು ಬಳಸಿದನೆಂಬುದನ್ನು ವಿವರಿಸುತ್ತದೆ: ರೋಮನ್ ಅಧಿಕಾರಿಗಳೊಂದಿಗೆ ಕಾದಾಟವನ್ನು ತಪ್ಪಿಸಿಕೊಳ್ಳಲು ಅದನ್ನು ಬಳಸಿರಬಹುದಾಗಿದೆ. ಕಾದಾಟವನ್ನು ತಪ್ಪಿಸಿಕೊಳ್ಳುವದೇ ಪ್ರಕಟನೆ ಪುಸ್ತಕವು ಏಕೆ ಅಂತ್ಯಕಾಲಿಕ ಭಾಷೆಯನ್ನು ಬಳಸಿರುತ್ತದೆಂಬುದಕ್ಕೆ ಒಂದು ಕಾರಣವಾಗಿರಬಹುದಾಗಿದೆ. ಅದು ನಿಜವೆಂದಾದಲ್ಲಿ, ಅಪೊಸ್ತಲನು ಯಾವದೇ ನಿರ್ದಿಷ್ಟವಾದ ವ್ಯಕ್ತಿಯ ಕುರಿತು ಯೋಚಿಸಿಯೇ ಇಲ್ಲದಿರಬಹುದಾಗಿದೆ. Raymond Kelcyನು ಹೀಗೆ ಹೇಳಿದನು, ". . . ಬಹುಶಃ ಪೌಲನು ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಮಹಾ ಕಾದಾಟ ಹಾಗೂ ಅವುಗಳ ಅಂತಿಮ ಫಲಿತಾಂಶದ ಕುರಿತು ಅಂತ್ಯಕಾಲಿಕ ಶೈಲಿಯಲ್ಲಿ ಬಣ್ಣಿಸುವದಕ್ಕಾಗಿ 'ಅಧರ್ಮಸ್ವರೂಪ' ಎಂಬುದನ್ನು [ಪೌಲನು] ಬಳಸಿರಬಹುದಾಗಿದೆ."[85] ಪೌಲನು ಅಂತ್ಯಕಾಲಿಕ ಭಾಷೆಯನ್ನು ಬಳಸಲಿಲ್ಲವಾದಲ್ಲಿ, ಆತನು ಬಹುಶಃ ಸಮಕಾಲಿನ ದುಷ್ಟತ್ವದ ಮೂರ್ತರೂಪ ಮಾತ್ರವಲ್ಲದೆ ಕ್ರೈಸ್ತ ಯುಗದುದ್ದಕ್ಕೂ ಮುಂದೆ ಬರಬಹುದಾಗಿದ್ದ ಮೂರ್ತರೂಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರಬಹುದಾಗಿದೆ.

ಪೌಲನು ಹೇಳಿದ "ಅಧರ್ಮಸ್ವರೂಪನು" ಯಾರೇ ಆಗಿದ್ದರೂ ಅಥವಾ ಯಾವನೇ ಆಗಿದ್ದರೂ ಸರಿಯೇ, ಆತನು ಯೋಹಾನನಿಂದ ಕರೆಯಲ್ಪಟ್ಟ "ಕ್ರಿಸ್ತವಿರೋಧಿಗಳ" ಜೊತೆಯಲ್ಲಿ ಯಾವದೇ ಸಾಮ್ಯತೆಯನ್ನು ಹೊಂದಿರಲಿಲ್ಲ: ಯೋಹಾನನ "ಕ್ರಿಸ್ತವಿರೋಧಿಗಳು" ಸಂಖ್ಯೆಯಲ್ಲಿ ಬಹು ಆಗಿದ್ದರು ಮತ್ತು ಅವರು ಸುಳ್ಳು ಬೋಧನೆಯ ತಪ್ಪನ್ನು ಮಾಡಿದವರಾಗಿದ್ದರು (1 ಯೋಹಾನ 2:18, 22), ಆದರೆ ಪೌಲನ "ಅಧರ್ಮಸ್ವರೂಪ" ನಾದರೋ ಒಬ್ಬನೇ

ವ್ಯಕ್ತಿಯಾಗಿದ್ದನು - ಅಪೊಸ್ತಲನ ಮಾತುಗಳನ್ನು ಅಕ್ಷರಶಃವೆಂದು ಪರಿಗಣಿಸುವದೇ ಆದಲ್ಲಿ - ಆತನು ತನ್ನನ್ನು ದೇವರೆಂದು ಹೇಳಿಕೊಂಡನು (2 ಥೆಸಲೋನಿಕ 2:3, 4). Harvey Blaneyನು ಗಮನಕ್ಕೆ ತರುವದೇನೆಂದರೆ "ಕ್ರಿಸ್ತವಿರೋಧಿ"ಯು "ಪೌಲನು ತಿಳಿಸುವ 'ಕೇಡಿನ ಮಗನಿಗೆ' ಕಡಿಮೆಯಾಗಿ ಕಂಡು ಬರುತ್ತಾನೆ."[86]

ಅಷ್ಟುಮಾತ್ರವಲ್ಲದೆ, ಪೌಲನ "ಅಧರ್ಮಸ್ವರೂಪ"ನಿಗೂ ಇಂದಿನ-ದಿನಗಳ ಕ್ರಿಸ್ತವಿರೋಧಿಯ ಕುರಿತಾಗಿರುವ ಜನಪ್ರಿಯ ಭಾವನೆಗಳಿಗೂ ಅಷ್ಟೇನೂ ಸಾಮ್ಯತೆಯಿರುವದಿಲ್ಲ: ಪೌಲನು 2 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆದ ವೇಳೆ, ಆತನು ತಿಳಿಸಿದ "ಅಧರ್ಮಸ್ವರೂಪನು" ಆತನ ವಾಚಕರಿಗೆ ಪರಿಚಿತವಾಗಿದ್ದನು ಮತ್ತು ಅವರ ದಿನಗಳಲ್ಲಿನ ಒಂದು ಚಳುವಳಿಗೆ ಸಂಬಂಧ ಹೊಂದಿದ್ದನು (2 ಥೆಸಲೋನಿಕ 2:5, 7). ಅದಕ್ಕೆ ತದ್ವಿರುದ್ಧವಾಗಿ - ಈಗಿನ ಕ್ರಿಸ್ತವಿರೋಧಿ ಊಹಾಪೋಹದ ಪ್ರಕಾರವಾಗಿ - ಅಪೊಸ್ತಲನು ಬರೆಯುವ ಸಮಯದಲ್ಲಿ, ಕ್ರಿಸ್ತವಿರೋಧಿಯು ಕಾಣಿಸಿಕೊಳ್ಳುವದಕ್ಕೆ ಇನ್ನೂ ಎರಡು ಸಾವಿರ ಅಧಿಕ ವರ್ಷಗಳ ವರೆಗೆ ಕಾದುಕೊಳ್ಳಬೇಕಾಗಿತ್ತು. ಮತ್ತು ಥೆಸಲೋನಿಕದವರಿಗೆ ಪತ್ರಿಕೆಗಳಲ್ಲಿರುವ ಪೌಲನ ವರ್ತಮಾನಕಾಲರೂಪದ ಭಾಷೆಯ ಬೆಳಕಿನಲ್ಲಿ, Rollin Walkerನು ಈ ವಿಧವಾಗಿ ವಾದಿಸುತ್ತಾನೆ, "ನಾವು . . . ಪ್ರವಾದನೆಗೆ 1ನೇ-ಶತಮಾನದ ಉಲ್ಲೇಖನವನ್ನು ನೀಡತಕ್ಕದ್ದು."[87] "1ನೇ-ಶತಮಾನದ ಉಲ್ಲೇಖ"ದ ವಿಷಯವಾಗಿ ನೋಡುವದಾದರೆ, 2 ಥೆಸಲೋನಿಕ 2 ರಲ್ಲಿನ "ಅಧರ್ಮಸ್ವರೂಪ" ಮತ್ತು ಪ್ರಕಟನೆ ಪುಸ್ತಕದಲ್ಲಿನ "ಮೃಗ" ದ ನಡುವೆ ಯಾವದೋ ಒಂದು ಸಂಬಂಧವಿರುವ ಸಾಧ್ಯತೆಯಿದೆ - 2 ಥೆಸಲೋನಿಕದಲ್ಲಿರುವ ಅಭ್ಯಂತರ ಮಾಡುವ ಶಕ್ತಿಯು ರೋಮನ್ ಕಾನೂನು ಮತ್ತು "ಮನುಷ್ಯನು" ಚಕ್ರವರ್ತಿ ಆಗಿರುವ*ದಾದರೆ* ಈ ಸಾಧ್ಯತೆಯು ಇದೆ. ಈಗಾಗಲೇ ಹೇಳಿರುವ ಪ್ರಕಾರವಾಗಿ, 2 ಥೆಸಲೋನಿಕ 2 ಬಹಳ ಅಸ್ಪಷ್ಟವಾಗಿದ್ದು *ಯಾವದೇ* ಅರ್ಥನಿರೂಪಣೆಯ ವಿಷಯದಲ್ಲಿಯೂ ಇದೇ ಸರಿ ಎಂದು ಹಠವಾದ ಮಾಡಲಾಗದು.

*ಯೋಹಾನನ "ಕ್ರಿಸ್ತವಿರೋಧಿಗಳು"* (1 ಯೋಹಾನ 2:18, 22; 4:3; 2 ಯೋಹಾನ 7). ಮನುಷ್ಯರ ಊಹಾಪೋಹಗಳನ್ನು ಪಕ್ಕಕ್ಕೆ ಇಡುವದಾದರೆ, "ಕ್ರಿಸ್ತವಿರೋಧಿ" ಅಥವಾ "ಇವನೇ ಕ್ರಿಸ್ತವಿರೋಧಿ" ಎಂಬುದರ ಕುರಿತು ನಮಗೆ ಗೊತ್ತಿರುವದೆಲ್ಲವೂ 1 ಮತ್ತು 2 ಯೋಹಾನ ಪತ್ರಿಕೆಗಳಲ್ಲಿಯೇ ಸಿಕ್ಕುತ್ತದೆ. ಬೈಬಲಾಧಾರಿತ ಅರ್ಥನಿರೂಪನೆಯ ಮೂಲಭೂತ ತತ್ವವೊಂದು ಏನೆಂದರೆ "[ಪ್ರೇರಿತ] ಲೇಖಕನ ವಿವರಣೆಯು ಸಿಕ್ಕಬಹುದಾದ ಅರ್ಥನಿರೂಪಣೆಗಳಲ್ಲಿಯೇ ಅತ್ಯುತ್ತಮವಾದದ್ದು."[88] ನಮಗೆ ಸ್ಥಳಾವಕಾಶ ಮತ್ತು ಸಮಯದ ಅಭಾವವು ಪುನಃ ತಡೆಯಾಗುತ್ತದೆ, ಆದರೆ ಯೋಹಾನನು "ಕ್ರಿಸ್ತವಿರೋಧಿ" ಕುರಿತು ಕಲಿಸುವ ಕಾರ್ಯಗಳನ್ನು ಕ್ಲುಪ್ತವಾಗಿ ಅಧ್ಯಯನ ಮಾಡೋಣ:

ಯೋಹಾನನು ಈ ಮಾತುಗಳಿಂದ ಆ ವಿಷಯವನ್ನು ಪರಿಚಯಿಸುತ್ತಾನೆ: "ಮಕ್ಕಳಿರಾ, ಇದು ಕಡೇ ಗಳಿಗೆಯಾಗಿದೆ; ಕ್ರಿಸ್ತವಿರೋಧಿ ಬರುತ್ತಾನೆಂದು ನೀವು ಕೇಳಿದ್ದೀರಷ್ಟೆ; ಈಗಲೂ ಕ್ರಿಸ್ತವಿರೋಧಿಗಳು ಬಹುಮಂದಿ ಎದ್ದಿದ್ದಾರೆ; ಇದರಿಂದ ಇದು ಕಡೇ ಗಳಿಗೆಯಾಗಿದೆ ಎಂದು ತಿಳುಕೊಳ್ಳುತ್ತೇವೆ" (1 ಯೋಹಾನ 2:18). "ಕಡೇ ಗಳಿಗೆ" ಎಂಬುದು ನಿಖರವಾಗಿ ಯೋಹಾನನು ಎರಡನೆಯ ಬರೋಣವು ಸನ್ನಿಹಿತದಲ್ಲಿದೆ ಎಂದು ಯೋಚಿಸಿದನೆಂದು ಅರ್ಥವಾಗಿರಬೇಕೆಂಬ ಅವಶ್ಯವಿಲ್ಲ. ಪ್ರೇರಿತ ಲೇಖಕರು ತಮ್ಮ ಜೀವಿತಕಾಲದಲ್ಲಿ ಕ್ರಿಸ್ತನು ಬರುವದಕ್ಕೆ *ಸಾಧ್ಯವಿದೆ* ಎಂದು ಭಾವಿಸಿಕೊಂಡಿದ್ದರು - ನಾವು ಸಹ ಆತನು ನಮ್ಮ ಜೀವಿತಕಾಲದಲ್ಲಿ ಬರಬಹುದೆಂದು ಯೋಚಿಸಿಕೊಳ್ಳತಕ್ಕದ್ದು.

1 ಯೋಹಾನ 2:18ರಲ್ಲಿನ ἀντίχριστος (*antichristos,* "ಕ್ರಿಸ್ತವಿರೋಧಿ") ಎಂಬ ಪದವು ಗ್ರೀಕ್ ಭಾಷೆಯ ಒಂದು ಸಂಯುಕ್ತ ಪದವಾಗಿದ್ದು ಅದು ἀντί (*anti*, "ವಿರೋಧಿ") ಎಂಬ ಪದದೊಂದಿಗೆ Χριστός (*Christos*, "ಅಭಿಷೀಕ್ತನು") ಎಂಬುದನ್ನು ಒಂದಿಗೂಡಿಸುತ್ತದೆ. ಈ ಪದದ "ಅರ್ಥವು 'ಕ್ರಿಸ್ತನಿಗೆ ವಿರುದ್ಧ' ಅಥವಾ 'ಕ್ರಿಸ್ತನಿಗೆ ಬದಲಾಗಿ' ಎಂಬ ಅರ್ಥವನ್ನು ಕೊಡಬಹುದಾಗಿದೆ, ಅಥವಾ ಬಹುಶಃ, ಎರಡೂ ಸೇರಿ ಇರಬಹುದಾಗಿದೆ, 'ಕ್ರಿಸ್ತನಂತೆ ಮುಖವಾಡ ಹಾಕಿಕೊಂಡವನಾಗಿ ಕ್ರಿಸ್ತನನ್ನು ವಿರೋಧಿಸುವವನು.'"[89] ಯೋಹಾನನ ಪತ್ರಿಕೆಗಳಲ್ಲಿ ಪ್ರಧಾನವಾದ ವಿಚಾರವೆಂದರೆ ಅದು "ಕ್ರಿಸ್ತವಿರೋಧಿ" ಯು ಕ್ರಿಸ್ತನ *ಎದುರಾಳಿ* ಎಂಬುದೆ.

"ಕ್ರಿಸ್ತವಿರೋಧಿ ಬರುತ್ತಿದ್ದಾನೆ" ಎಂಬ ವಿಚಾರವನ್ನು ಎಲ್ಲೆಲ್ಲಿಯೂ ಹರಡಿಸಲಾಗುತ್ತಿತ್ತು. ವದಂತಿಗಳು ಏನೇ ಆಗಿದ್ದರೂ, ಯೋಹಾನನು ಶೀಘ್ರವೇ ಆ ಸುಳ್ಳು ಕಲ್ಪನೆಗಳನ್ನು ಸರಿಪಡಿಸಿದನು. ಆತನು "ಮುಂದೆ ಭವಿಷ್ಯದೊಳಗೆ ಎರಡು ಸಾವಿರ ವರ್ಷಗಳಲ್ಲಿ ಒಬ್ಬ ಕ್ರಿಸ್ತವಿರೋಧಿ ಎದ್ದೇಳುವನು" ಎಂದು ಹೇಳಿಲ್ಲ, ಆದರೆ "ಈಗಲೂ ಕ್ರಿಸ್ತವಿರೋಧಿಗಳು *ಬಹುಮಂದಿ* ಎದ್ದಿ*ದ್ದಾರೆ"* ಎಂದು ಹೇಳಿದನು (1 ಯೋಹಾನ 2:18; ಒತ್ತಿ ಹೇಳಿದ್ದು ನನ್ನದು).

ಯೋಹಾನನು ಮುಂದುವರೆದು ಈ ಕ್ರಿಸ್ತವಿರೋಧಿಗಳು ಯಾರು ಎಂಬುದನ್ನು ವಿವರಿಸುತ್ತಾನೆ: "*ಯೇಸುವು ಕ್ರಿಸ್ತನಲ್ಲ ಎನ್ನುವವನು* ಸುಳ್ಳುಗಾರನಲ್ಲವಾದರೆ ಸುಳ್ಳುಗಾರನು ಬೇರೆ ಎಲ್ಲಿದ್ದಾನೆ? ಯಾವನಾದರೂ ತಾನು ತಂದೆಯನ್ನೂ ಮಗನನ್ನೂ ಅರಿಯೆನು ಎಂದು ಹೇಳಿದರೆ ಅವನೇ ಕ್ರಿಸ್ತವಿರೋಧಿ" (1 ಯೋಹಾನ 2:22; ಒತ್ತಿ ಹೇಳಿದ್ದು ನನ್ನದು). ಆದಿ ಸಭೆಯಲ್ಲಿದ್ದ ಒಂದು ಪಂಗಡವು "ಗ್ನಾಸ್ಟಿಶಿಸಮ್" ಎಂದು ಕರೆಯಲ್ಪಡುತ್ತಿತ್ತು. ಬೇರೆ ಸುಳ್ಳು ಸಿದ್ಧಾಂತಗಳೊಳಗೆ, ಈ ಗ್ನಾಸ್ಟಿಶಿಸಮ್ ವಾದಿಗಳು ಕಲಿಸುತ್ತಿದ್ದದ್ದೇನೆಂದರೆ "ಯೇಸುವು ಯಾವದೇ ಮನುಷ್ಯನ ರೀತಿಯಲ್ಲಿಯೇ ಜನಿಸಿದನು ಮತ್ತು ಒಬ್ಬ ಸಾಮಾನ್ಯ ಮನುಷ್ಯನಂತೆ ಮರಣಿಸಿದನು. ಯೇಸುವಿನ ದೀಕ್ಷಾಸ್ನಾನದ ವೇಳೆ ದೈವಿಕ ಆತ್ಮನಾದ, 'ಕ್ರಿಸ್ತನು,' ಆತನ ಮೇಲೆ ಇಳಿದು ಬಂದನು, ಆದರೆ ಶಿಲುಬೆಯ ಮುನ್ನ ಆತನನ್ನು ತೊರೆದು ಹೋದನೆಂದು ಅವರು ನಂಬುತ್ತಾರೆ. ಹೀಗೆ 'ಕ್ರಿಸ್ತನು' ದೈವಿಕವಾಗಿದ್ದನು, ಯೇಸು ದೈವಿಕವಾಗಿರಲಿಲ್ಲ."[90] ಆದಕಾರಣ ಈ ಸುಳ್ಳು ಬೋಧಕರು (ಯೋಹಾನನ ಮಾತುಗಳಲ್ಲಿ ಹೇಳುವದಾದರೆ) "ಯೇಸುವು ಕ್ರಿಸ್ತನು" ಎಂಬುದನ್ನು ನಿರಾಕರಿಸಿದರು. ಯೋಹಾನನು ನಿರ್ದಿಷ್ಟ ಗುಣವಾಚಿಯೊಂದಿಗೆ ("the") ಏಕ ವಚನ ಬಳಕೆ ಮಾಡುವದನ್ನು ಗಮನಿಸಿರಿ: "ಯೇಸುವು ಕ್ರಿಸ್ತನಲ್ಲ ಎನ್ನುವವನು" "ಕ್ರಿಸ್ತವಿರೋಧಿ."

ಯೋಹಾನನು ತನ್ನ ಮೊದಲನೆಯ ಪತ್ರಿಕೆಯ 4ನೇ ಅಧ್ಯಾಯದಲ್ಲಿ "ಕ್ರಿಸ್ತವಿರೋಧಿ" ಯ ಗುರುತನ್ನು ಮತ್ತೊಮ್ಮೆ ಒತ್ತಿ ಹೇಳುತ್ತಾನೆ: "ಯೇಸುವನ್ನು ಒಪ್ಪದೆ ಇರುವ ಆತ್ಮವು ದೇವರಿಂದ ಪ್ರೇರಿತವಾದದ್ದಲ್ಲ; ಅದು ಕ್ರಿಸ್ತವಿರೋಧಿಯ ಆತ್ಮವಾಗಿದೆ. ಅದು ಬರುವದೆಂಬದನ್ನು ಕೇಳಿದ್ದೀರಲ್ಲಾ; ಈಗಲೂ ಲೋಕದಲ್ಲಿ ಅದೆ" (ವ. 3). ಅಪೊಸ್ತಲನು ಪುನಃ ತನ್ನ ವಾಚಕರು "ಕ್ರಿಸ್ತವಿರೋಧಿ" ಬರುವ ಕುರಿತು ಮುಂಚೆಯೇ ಕೇಳಿಸಿಕೊಂಡಿದ್ದರು ಎಂಬುದನ್ನು ಸೂಚಿಸುತ್ತಾನೆ, ಮತ್ತು ಈ ಪೈಶಾಚಿಕ ಆತ್ಮವು *ಈಗಲೂ* ಅದೆ ಎಂಬುದನ್ನು ಪುನಃ ಒತ್ತಿ ಹೇಳಿದನು.

ಯೋಹಾನನು ತನ್ನ ಎಡರನೆಯ ಪತ್ರಿಕೆಯಲ್ಲಿ, ಸುಳ್ಳು ಪ್ರವಾದಿಗಳು "ಕ್ರಿಸ್ತವಿರೋಧಿ" ಎಂಬ ಉಪನಾಮಕ್ಕೆ ಅರ್ಹರಾಗಿದ್ದಾರೆಂಬುದನ್ನು ಪುನಃ ಒತ್ತಿ ಹೇಳಿದನು: "ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು *ಅನೇಕ ಮಂದಿ* ಹೊರಟು

ಲೋಕದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸಗಾರನೂ *ಕ್ರಿಸ್ತವಿರೋಧಿಯೂ ಆಗಿದ್ದಾನೆ"* (2 ಯೋಹಾನ 7; ಒತ್ತಿ ಹೇಳಿದ್ದು ನನ್ನದು).

ಯೋಹಾನನ ಪತ್ರಿಕೆಗಳಿಂದ ಮುಕ್ತಾಯಕ್ಕೆ ಬರತಕ್ಕದ್ದೇನೆಂದರೆ ಯೇಸುವು ದೇವರ ನರಾವತಾರವಾಗಿರುವನು, ದೇವರ ವಿಶಿಷ್ಟ ಮಗನು ಎಂಬುದನ್ನು ಅಲ್ಲಗಳೆಯುವ ಯಾವನೇ ಆಗಲಿ ಮತ್ತು ಪ್ರತಿಯೊಬ್ಬನೂ "ಕ್ರಿಸ್ತವಿರೋಧಿ" ಆಗಿದ್ದಾನೆ ಎಂಬುದೆ. ಅಂಥ ಜನರು ಯೋಹಾನನ ದಿನದಲ್ಲಿ ಇದ್ದರು, ಮತ್ತು ಈ ದಿನಗಳಲ್ಲೂ ಅವರು ಇದ್ದಾರೆ.

"ಕ್ರಿಸ್ತವಿರೋಧಿ" ಕುರಿತಾದ ಯೋಹಾನನ ಉಪದೇಶಕ್ಕೆ ಬರುವಂಥ ಒಂದು ಸಾಮಾನ್ಯ ಪ್ರತಿಕ್ರಿಯೆಯು ಏನೆಂದರೆ, "ನಿಜ, ಯೋಹಾನನು 'ಕ್ರಿಸ್ತವಿರೋಧಿಗಳ' ಕುರಿತು (ಚಿಕ್ಕ 'a' ಹೊಂದಿರುವ) ಮಾತಾಡಿದನು, ಆದರೆ ಇದು ಆ ಏಕೈಕ 'ಕ್ರಿಸ್ತವಿರೋಧಿ' (ದೊಡ್ಡ 'A' ಹೊಂದಿರುವ) ಮುಂದೊಂದು ದಿನ ಎದ್ದೇಳುವದರ ಸಾಧ್ಯತೆಯನ್ನು ತಳ್ಳಿಹಾಕುವದಿಲ್ಲ" ಎಂದು ಹೇಳುವದೇ. ಈ ವಿಧವಾದ ತರ್ಕದಲ್ಲಿರುವ ಸಮಸ್ಯೆಯು ಏನೆಂದರೆ "ಕ್ರಿಸ್ತವಿರೋಧಿ" ಕುರಿತಾಗಿ ಬೈಬಲಿನಲ್ಲಿ ಕಾಣುವ ಏಕಮಾತ್ರ ಉಲ್ಲೇಖನಗಳು ಯೋಹಾನನ ಪತ್ರಿಕೆಗಳಲ್ಲಿಯೇ ಇರುತ್ತವೆ, ಮತ್ತು ಯೋಹಾನನು ಎರಡನೆಯ ಬರೋಣಕ್ಕೆ ಸ್ವಲ್ಪ ಮುಂಚೆ ಎದ್ದೇಳುವಂಥ "ಕ್ರಿಸ್ತವಿರೋಧಿ" ಎಂಬ ನಿರ್ದಿಷ್ಟವಾದ ವ್ಯಕ್ತಿಯ ವಿಷಯದಲ್ಲಿ ಏನನ್ನೂ ಹೇಳಲಿಲ್ಲ.

*ಪ್ರಕಟನೆ ಪುಸ್ತಕದ ಮೃಗ* (ಪ್ರಕಟನೆ 11:7). Irenaeus (c. ಕ್ರಿ.ಶ. 185) ಎಂಬವನಿಂದ ಮೊದಲ್ಗೊಂಡು ಎರಡನೆಯ ಮತ್ತು ಮೂರನೆಯ ಶತಮಾನದ ಹಲವಾರು ಪ್ರೇರಿತ ಲೇಖಕರು ಪ್ರಕಟನೆ 13ನೇ ಅಧ್ಯಾಯದಲ್ಲಿನ ಮೃಗವನ್ನು ಸೂಚಿಸುವದಕ್ಕೆ "ಕ್ರಿಸ್ತವಿರೋಧಿ" ಎಂಬ ಪದವನ್ನು ಬಳಸಿದರು. George Milliganನು ಹೇಳಿದ್ದೇನೆಂದರೆ ಅವರ ವ್ಯಾಖ್ಯೆಗಳು "ಶಾಸ್ತ್ರಗಳಿಂದ ಒದಗಿಸಲ್ಪಟ್ಟ ಆಧಾರಾಂಶಗಳನ್ನು ಬಳಸಿಕೊಂಡು ವಿಚಾರಮಾಡುವವರಾಗಿ ಈ ವ್ಯಾಖ್ಯಾನಕಾರರೇ ಸ್ವತಃ ಮಾಡಿಕೊಂಡ ಕಲ್ಪನೆಗಳಾಗಿವೆ ಎಂದಷ್ಟೆ ಹೇಳಬಹುದು."[91] ಹೇಗೂ, ಈ ಆದಿ ಲೇಖಕರು ಇಂದಿನ ಆಧುನಿಕ ಲೇಖಕರು "ಕ್ರಿಸ್ತವಿರೋಧಿ" ಕುರಿತು ಚರ್ಚಿಸುವ ರೀತಿಯಲ್ಲಿ ವಿಪರೀತಕ್ಕೆ ಹೋಗಲಿಲ್ಲ.

ಯೋಹಾನನು "ಕ್ರಿಸ್ತವಿರೋಧಿ" ಕುರಿತು ವಿವರಿಸುವದನ್ನು ನೋಡಿದ ಬಳಿಕ, ಪ್ರಕಟನೆ 11ರಲ್ಲಿನ ಮೃಗವನ್ನು "ಕ್ರಿಸ್ತವಿರೋಧಿ" ಎಂದು ಗುರುತಿಸುವದಕ್ಕೆ ಏನಾದರೂ ಕಾರಣವಿದೆಯೋ? ಇಲ್ಲ. ಮೃಗದ ಪ್ರಾಥಮಿಕ ಉದ್ದೇಶವು ಕ್ರಿಸ್ತನನ್ನು ಅಲ್ಲಗಳೆಯುವದು ಆಗಿರಲಿಲ್ಲ, ಆದರೆ ಆತನ ಹಿಂಬಾಲಕರನ್ನು ಕೊಲ್ಲುವದೇ ಆಗಿತ್ತು. ಮೃಗವು ಕ್ರೈಸ್ತತ್ವದ ಸನ್ನಿವೇಶದೊಳಗಿಂದ ಎದ್ದು ಬಂದ ಒಂದು ಪಾಷಂಡ ಮತ ಆಗಿರಲಿಲ್ಲ. ಬದಲಾಗಿ, 13ನೇ ಅಧ್ಯಾಯದಲ್ಲಿ ನೋಡಲಿರುವ ಪ್ರಕಾರ, ಮೃಗವು ರೋಮನ್ ಸರ್ಕಾರವೇ ಆಗಿತ್ತು - ಮತ್ತು ಇದು ಸುವಾರ್ತೆಯ ಪ್ರಸರಣೆಯನ್ನು ನಿರ್ಮೂಲನೆ ಮಾಡುವದಕ್ಕೆ ಪ್ರಯತ್ನಿಸುವದಕ್ಕಾಗಿ ಸೈತಾನನು ಬಳಸುವ ಯಾವದೇ ವೈಶಿಷ್ಟ್ಯವಾದ ಸಂಸ್ಥೆಯಾಗಿರುತ್ತದೆ.

ಮನುಷ್ಯರು 2 ಥೆಸಲೋನಿಕ 2ನೇ ಅಧ್ಯಾಯದಲ್ಲಿ ಪೌಲನ ಒಗಟಿನಿಂದ ಕೂಡಿದ ಮಾತುಗಳ ಆಧಾರದಲ್ಲಿ ಕಲ್ಪನಾತ್ಮಕವಾದ ಊಹೆಗಳನ್ನು ರಚಿಸಿಕೊಂಡರು. ಬಳಿಕ ಅವರು 1 ಮತ್ತು 2 ಯೋಹಾನ ಪತ್ರಿಕೆಗಳಲ್ಲಿರುವ ಯೋಹಾನನ ಪರಿಭಾಷೆಯನ್ನು ತಮ್ಮದಕ್ಕೆ ಅನ್ವಯಿಸಿಕೊಂಡರು. ಅಂತಿಮವಾಗಿ, ಅವರು ಇದನ್ನೆಲ್ಲಾ ಪ್ರಕಟನೆ ಪುಸ್ತಕದಲ್ಲಿರುವ ಮೃಗದ ಕುರಿತಾದ ತಮ್ಮ ಅರ್ಥನಿರೂಪಣೆಯ ಮೇಲೆ ಹೇರಿದರು. ಅದು "eisegesis" ಆಗಿದೆ, ಹೊರತು ಸ್ಪಷ್ಟೀಕರಣ ಅಲ್ಲ: ಅಂದರೆ ವಾಕ್ಯದೊಳಗೆ ಒಬ್ಬನು ತನಗೆ ಅದೇನು ಕಲಿಸಬೇಕೆಂದು ಇಚ್ಛೆಸುತ್ತಾನೋ ಅದನ್ನೇ *ಓದುವದು,* ಹೊರತು ಆ ವಾಕ್ಯವು ಏನು ಕಲಿಸುತ್ತದೆಂಬುದನ್ನು

ಅದರೊ *ಳಗಿಂದ* ತೆಗೆದುಕೊಳ್ಳದಿರುವದು. ಪ್ರಕಟನೆ ಪುಸ್ತಕವನ್ನು, ಅಥವಾ ಬೈಬಲಿನಲ್ಲಿ ಬೇರೆ ಯಾವದೇ ಪುಸ್ತಕವನ್ನು ಅಧ್ಯಯನ ಮಾಡುವ ವಿಧ ಅದಾಗಿರುವದಿಲ್ಲ

## ಕಡೇ ತುತೂರಿ (11:15-18)

ಕ್ರೈಸ್ತರು "ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು" (1 ಕೊರಿಂಥ 15:52) ಎಂಬ ಈ ಕ್ಷಣದ ವಿಷಯವಾಗಿ ವಿಸ್ಮಯದಿಂದ ತುಂಬಿರುತ್ತಾರೆ. ಒಬ್ಬ ಕ್ರೈಸ್ತರ ಸಮಾಧಿಯ ಕಲ್ಲಿನ ಮೇಲೆ ಬರೆಯಲಾಗುವ ಪದಗಳೆಂದರೆ "ಮಹಿಮಕರವಾದ ಪುನರುತ್ಥಾನದ ನಿರೀಕ್ಷೆಯಲ್ಲಿ."

ಶಾಸ್ತ್ರಗಳಲ್ಲಿ, "ಕಡೇ ತುತೂರಿ" ಊದಲ್ಪಡುವಿಕೆಯು ಕ್ರಿಸ್ತನ ಎರಡನೆಯ ಬರೋಣಕ್ಕೆ ಸಂಬಂಧ ಪಟ್ಟಿರುತ್ತದೆ:

> ಮತ್ತು ತುತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು (ಮತ್ತಾಯ 24:31; ನೋಡಿರಿ 1 ಥೆಸಲೋನಿಕ 4:14-17).

> ಅದೇ ವೇಳೆಯಲ್ಲಿ, "ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವನು . . . ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು" (2 ಥೆಸಲೋನಿಕ 1:7, 8).

Winston Churchillನ ಶವಸಂಸ್ಕಾರದ ಅಂತ್ಯದ ಹತ್ತಿರದಲ್ಲಿ, ಒಬ್ಬ ಆಂಗ್ಲ ಗಣ್ಯನು ಸತ್ತಾಗ ಮಾಡುತ್ತಿದ್ದ ಪದ್ಧತಿಯ ಪ್ರಕಾರವೇ, ಕಹಳೆಯೂದಲ್ಪಟ್ಟಿತು. ಬಳಿಕ, Churchillನು ಮನವಿ ಮಾಡಿಕೊಂಡಿದ್ದ ಪ್ರಕಾರ, ಪ್ರಾತಃಕಹಳೆಯನ್ನು ನುಡಿಸಲಾಯಿತು - ನಿದ್ದೆಯಿಂದ ಎಚ್ಚರವಾಗಿ ಎದ್ದೇಳುವದಕ್ಕೆ ಒಂದು ಸೂಚನೆ. ಅದು Churchillನು ಪುನರುತ್ಥಾನದಲ್ಲಿ ಹೊಂದಿದ್ದ ಆತನ ನಂಬಿಕೆಯನ್ನು ದೃಢೀಕರಿಸುವ ರೀತಿಯಾಗಿತ್ತು.

ಏಳನೆಯ ತುತೂರಿಯ ದರ್ಶನವು ಕ್ರೈಸ್ತರನ್ನು ಪ್ರೋತ್ಸಾಹಿಸುವದಕ್ಕಾಗಿ ಕೊಡಲ್ಪಟ್ಟಿತ್ತು. ಅವರ ವೈರಿಗಳು ಅವರನ್ನು ಕೊಲ್ಲಬಹುದು, ಆದರೆ ಅವರನ್ನು ಸೋಲಿಸುವದಕ್ಕೆ ಶಕ್ತರಾಗುವದಿಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕೆಂದು ದೇವರ ಬಯಕೆಯಾಗಿತ್ತು. ಆತನು ತನ್ನ ಜನರಿಗೆ "ಘೋರವಾದ ಸಂಗತಿಗಳು ಎಂದಿಗೂ ಕಡೇ ಸಂಗತಿಗಳಾಗಿರುವದಿಲ್ಲ"[92] ಎಂಬುದು ಗೊತ್ತಾಗಬೇಕೆಂದು ಬಯಸಿದ್ದನು. ಅವರು ನಂಬಿಗಸ್ತರಾಗಿ ಉಳಿಯುವದಾದರೆ, ಅಂತ್ಯದಲ್ಲಿ ಜಯವು ಸಿಕ್ಕಲಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ಆತನ ಬಯಕೆಯಾಗಿತ್ತು.

## ದೇವರು ಕೊಡುವ ಪ್ರತಿಫಲ (11:18)

ನೀವು ಮಾಡುವದನ್ನೆಲ್ಲವನ್ನೂ ಕರ್ತನು ಬಲ್ಲನು ಮತ್ತು ಶ್ಲಾಘಿಸುತ್ತಾನೆ, ಹಾಗೂ ಒಂದು ದಿನ ಆತನು ನಿಮಗೆ ಪ್ರತಿಫಲವನ್ನು ಕೊಡುವನೆಂಬುದನ್ನು ಗ್ರಹಿಸಿಕೊಳ್ಳುವದು ಆದರಣೆ ತರುವಂಥದ್ದಾಗಿಲ್ಲವೋ?

> "ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು . . ." (ಮತ್ತಾಯ 5:12).

. . . ಆದರೂ ಪ್ರತಿಯೊಬ್ಬನಿಗೂ ಅವನವನ ಕಷ್ಟಕ್ಕೆ ತಕ್ಕಹಾಗೆ ಕೂಲಿಯು ದೊರೆಯುವದು" (1 ಕೊರಿಂಥ 3:8).

. . . ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ (ಕೊಲೊಸ್ಸೆ 3:24).

[ದೇವರು] ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ . . . (ಇಬ್ರಿಯ 11:6).

. . . ನೀವು ಕಳಕೊಳ್ಳದೆ ಪೂರ್ಣಫಲವನ್ನು ಹೊಂದುವಂತೆ ಜಾಗರೂಕರಾಗಿರಿ (2 ಯೋಹಾನ 8).

ನಮಗೆ ನಮ್ಮ ಪ್ರತಿಫಲದ ಕುರಿತು ಪ್ರಕಟನೆ ಪುಸ್ತಕದ ಮುಕ್ತಾಯದ ಅಧ್ಯಾಯಗಳಲ್ಲಿ ಸುಳಿವುಗಳು ಕೊಡಲ್ಪಡುವವು, ಆದರೆ ನಮ್ಮ ಮನಸ್ಸುಗಳು ನಂಬಿಗಸ್ತರಿಗೋಸ್ಕರ ದೇವರು ಇಟ್ಟಿರುವಂಥ ಸಕಲ ವಿಸ್ಮಯಗಳನ್ನು ಗ್ರಹಿಸಿಕೊಳ್ಳುವದಕ್ಕೆ ಅಸಮರ್ಥವಾಗಿವೆ. "ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1 ಕೊರಿಂಥ 2:9). ನಮ್ಮ ವಶದಲ್ಲಿರುವ ಕೆಲವೇ ಕೆಲವು ಸುಳಿವುಗಳೇ ನಮ್ಮನ್ನು ಭಯದಿಂದ ಮತ್ತು ನಿರೀಕ್ಷೆಯಿಂದ ತುಂಬಿಸುತ್ತವೆ.

ನಂಬಿಗಸ್ತರಿಗೆ ಪ್ರತಿಫಲ ಸಿಕ್ಕುವದೆಂಬ ವಾಗ್ದಾನವು ಕಷ್ಟಕರ ಸಮಯಗಳಲ್ಲಿ ಆದಿ ಕ್ರೈಸ್ತರನ್ನು ಪೋಷಿಸಿ ಮುನ್ನಡೆಸಿತು. ಅದೇ ರೀತಿಯಲ್ಲಿಯೇ ನಾವು ಕಠಿಣ ಪರಿಸ್ಥಿತಿಗಳನ್ನು ಹಾದು ಹೋಗುವ ವೇಳೆ ಅದು ನಮ್ಮನ್ನು ಪೋಷಿಸಿಕೊಂಡು ಹೋಗಬಲ್ಲದು.

---

**ಅಡಿಟಿಪ್ಪಣಿಗಳು**

[1]Milo Hadwin, *The Overcomers: Sermons on Revelation* (Arlington, Tex.: Mission Printing, n.d.), 105. [2]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 140. [3]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 68. [4]Martin Kiddle, *The Revelation of St. John*, The Moffatt New Testament Commentary, ed. James Moffatt (New York: Harper & Brothers, Publishers, 1940), 174. [5]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 64. [6]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 131. [7]Ibid. (ಒತ್ತಿ ಹೇಳಿದ್ದು ಆತನದ್ದು). [8]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 11. [9]Ibid., 88. [10]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 218.

[11]Alfred Plummer, *The Revelation of St. John the Divine*, The Pulpit Commentary, ed. H. D. M. Spence and Joseph S. Exell, vol. 22 (Grand Rapids, Mich.: Wm. B. Eerdmans Publishing Co., 1950), 288 (ಒತ್ತಿ ಹೇಳಿದ್ದು ಆತನದ್ದು). [12]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 155 (ಒತ್ತಿ ಹೇಳಿದ್ದು ಆತನದ್ದು). [13]Kiddle, 180. [14]William Hendriksen, *More Than Conquerors* (Grand Rapids, Mich.: Baker Book House, 1954), 153. On pages 154–55, Hendriksenನು ಈ ಮುಕ್ತಾಯಕ್ಕೆ

ಬಂದದ್ದಕ್ಕಾಗಿ ಆರು ವಾದಗಳನ್ನು ಮಂಡಿಸುತ್ತಾನೆ. [15]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 182. See Morris, 142; Eugene H. Peterson, *Reversed Thunder* (San Francisco: HarperCollins Publishers, 1988), 111; William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 68. [16]Caird, 130. [17]Ibid. [18]Eldred Echols, *Haven't You Heard? There's a WAR Going On!: Unlocking the Code to Revelation* (Fort Worth, Tex.: Sweet Publishing, 1995), 182. [19]Ibid., 181. [20]Josephus *Wars* 5.1.1-6.10.1.

[21]ಕೆಲವರು ಪ್ರಕಟನೆ ಪುಸ್ತಕದಲ್ಲಿ 3½ ವರ್ಷಗಳು (ಅದರ ವಿವಿಧ ರೂಪಗಳಲ್ಲಿ) ರೂಪಕವಾದ್ದೆಂಬುದನ್ನು ಅಲ್ಲಗಳೆಯುತ್ತಾರೆ. ಆ ಅಂಕಿಯನ್ನು ಅಕ್ಷರಶಃ ಪರಿಗಣಿಸಿಕೊಳ್ಳತಕ್ಕದ್ದೆಂದು ಅವರು ವಾದಿಸುತ್ತಾರೆ. ಈ ಅಭಿಪ್ರಾಯರ ಅಸಾಮಂಜಸ್ಯತೆಯ ಕುರಿತಾದ ಒಂದು ಚರ್ಚೆಯು McGuiggan ಪುಸ್ತಕದಲ್ಲಿ ಕಾಣಿಸಿಕೊಳ್ಳುತ್ತದೆ, "Appendix I: The Chronology of the Millennial View," 347–54. [22]Ibid., 156. [23]Ibid. (ಒತ್ತಿ ಹೇಳಿದ್ದು ಆತನದ್ದು.) [24]Kiddle, 189. [25]Hendriksen, 154. [26]ಈ ನಿಲುವಿನ ಕುರಿತ ಹೆಚ್ಚಿನ ಅಧ್ಯಯನಕ್ಕಾಗಿ, ನೋಡಿರಿ Homer Hailey, *Revelation* (Grand Rapids, Mich.: Baker Book House, 1979), 251; Morris, 146–47; Caird, 132. [27]Kiddle, 194. [28]Roberts, 162. [29]Morris, 144. [30]ನೋಡಿರಿ David Roper, "Who Says I'm Too Old?" *Truth for Today* 14 (September 1993): 28–35.

[31]Caird, 137. [32]See David Roper, "The Secret of Answered Prayer," *Truth for Today* 14 (August 1993): 37–42, 50. [33]See Phil Sanders, "Does Anyone Have Miraculous Gifts Today?" *Truth for Today* 15 (April 1995): 48–50; Owen Olbricht, "Miracles & the Holy Spirit," *Truth for Today* 19 (January 1999): 31–36. [34]Morris, 143. [35]Mounce, 223. [36]Kiddle, 193. [37]Ibid. [38]W. B. West, Jr.'s book on Revelation is titled *Revelation Through First-Century Glasses*, ed. Bob Prichard (Nashville: Gospel Advocate Co., 1997). [39]Morris, 145. [40]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 106.

[41]Caird, 138 (emphasis his); see also Mounce, 226. [42]Martin H. Franzmann, *The Revelation to John* (St. Louis, Mo.: Concordia Publishing House, 1976), 80–81. [43]Caird, 138. [44]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 138. [45]ಇತಿಹಾಸದಿಂದ ಹಲವಾರು ದೃಷ್ಟಾಂತಗಳು Burton Coffman's *Commentary on Revelation* (Austin, Tex.: Firm Foundation Publishing House, 1979), 251–52 ರಲ್ಲಿ ಕೊಡಲ್ಪಟ್ಟಿವೆ. [46]Eugene H. Peterson, *The Message: New Testament With Psalms and Proverbs.* [47]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 96. [48]Mounce, 227. [49]Thomas F. Torrance, *The Apocalypse Today* (Grand Rapids, Mich.: Wm. B. Eerdmans Publishing Co., 1959), 70. [50]Eugene H. Peterson, *Reversed Thunder*, 115.

[51]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 55. [52]William Cullen Bryant, "The Battlefield," 1839, quoted in John Bartlett, *Bartlett's Familiar Quotations*, 16th ed., ed. Justin Kaplan (Boston: Little, Brown and Co., 1992), 411. [53]Mounce, 228. [54]Ibid., 229. [55]McGuiggan, 163. [56]Ibid. [57]Wilcock, 107. [58]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 44. [59]Wilcock, 102. [60]West, 85. ಇದೇ ರೀತಿಯ ಒಂದು ವ್ಯಾಖ್ಯೆಯು George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 161 ನಿಂದ ಮಾಡಲ್ಪಟ್ಟಿತು.

[61]Mounce, 231. [62]Beasley-Murray, 189. [63]Ladd, 161. [64]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 600. [65]Beasley-Murray, 189. [66]Ladd, 162. [67]ಈ ವಾಕ್ಯಸಾಲು West, 85–86ರಿಂದ ಆಯ್ದುಕೊಳ್ಳಲ್ಪಟ್ಟಿದೆ. [68]T. F. Glasson, *The Revelation of John*, The Cambridge Bible Commentary on the New English Bible, ed. P. R. Ackroyd, A. R. C. Leaney, and J. W. Packer (Cambridge, England: Cambridge University Press,

1965), 71. [69]Wiersbe, 600. [70]Ibid. (ಒತ್ತಿ ಹೇಳಿದ್ದು ಆತನದ್ದು.)

[71]Tenney, 58. [72]Hailey, 263. Haileyನು C. G. Wilke and Wilibald Grimm, "*diaphtheiro*," *A Greek-English Lexicon of the New Testament*, trans. and rev. Joseph H. Thayer (Edinburgh, Scotland: T. & T. Clark, 1901; reprint, Grand Rapids, Mich.: Regency Reference Library, n.d.), 143ರಲ್ಲಿ ಕೊಡಲ್ಪಟ್ಟಿರುವ ಅರ್ಥನಿರೂಪಣೆಯನ್ನು ಉಲ್ಲೇಖಿಸುತ್ತಿದ್ದಾನೆ. [73]ಈ ವಾಕ್ಯಸಾಲು Metzger, 71 ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [74]Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 197. [75]Tenney, 58–59. [76]See David Roper, *Voices Crying in the Wilderness* (Salisbury [Adelaide], South Australia: Restoration Publications, 1979). [77]Quoted in Paul Lee Tan, *Encyclopedia of 7,700 Illustrations* (Rockville, Md.: Assurance Publishers, 1979), 442. [78]Charles Caldwell Ryrie, *Revelation* (Chicago: Moody Press, 1968), 72–75. [79]Baldinger, 53–57. [80]Beasley-Murray, 181.

[81]James M. Efird, *Revelation for Today* (Nashville: Abingdon Press, 1989), 92. Efirdನ ಹೇಳಿಕೆಗಳು 13ನೇ ಅಧ್ಯಾಯದ ಮೇಲೆ ಆತನು ಹೇಳುವ ವ್ಯಾಖ್ಯೆಗಳಿಂದ ಬರುವವುಗಳಾಗಿವೆ, ಆದರೆ 13ನೇ ಅಧ್ಯಾಯದ ಮೃಗವು ಮತ್ತು 11ನೇ ಅಧ್ಯಾಯದ ಮೃಗವು ಒಂದೇ ಆಗಿದೆ. [82]McGuiggan, 208. McGuigganನು ಕ್ರಿಸ್ತವಿರೋಧಿಯ ಕುರಿತು Hal Lindseyನು ಹೊಂದಿರುವ ಭಾವನೆಯನ್ನು ಉಲ್ಲೇಖಿಸುತ್ತಿದ್ದಾನೆಯೇ, ಹೊರತು ಆ ಭಾವನೆಯಲ್ಲಿ ತನ್ನ ವೈಯಕ್ತಿಕ ನಂಬಿಕೆಯನ್ನು ವ್ಯಕ್ತಪಡಿಸುತ್ತಿಲ್ಲ. [83]Millar Burrows, *An Outline of Biblical Theology* (Philadelphia: Westminster Press, 1946), 196. [84]Raymond C. Kelcy, *The Letters of Paul to the Thessalonians*, The Living Word Commentary, ed. Everett Ferguson (Austin, Tex.: R. B. Sweet Co., 1968), 160. [85]Ibid., 164. [86]Harvey J. S. Blaney, *Hebrews-Revelation*, Beacon Bible Commentary, vol. 10 (Kansas City, Mo.: Beacon Hill Press, 1967), 372. [87]Rollin Hough Walker, "The Second Epistle of Paul to the Thessalonians" in *The International Standard Bible Encyclopedia*, ed. James Orr (Grand Rapids, Mich.: Wm. B. Eerdmans Publishing Co., 1960), 5:2969. [88]D. R. Dungan, *Hermeneutics* (Delight, Ark.: Gospel Light Publishing Co., n.d.), 188. [89]W. E. Vine, *The Expanded Vine's Expository Dictionary of New Testament Words*, ed. John R. Kohlenberger III with James A. Swanson (Minneapolis, Minn.: Bethany House Publishers, 1984), 54–55. [90]Roberts, 68.

[91]George Milligan, *St. Paul's Epistles to the Thessalonians* (London: Macmillan and Co., 1908), 159. [92]Churchill ದೃಷ್ಟಾಂತ ಮತ್ತು ಉಲ್ಲೇಖವು John Risse entitled "The Church of Prophets and Martyrs," preached at the Southern Hills church of Christ, Abilene, Texas, on 7 April 1991ರಲ್ಲಿ ಮಾಡಿದ ಪ್ರಸಂಗದಿಂದ ಆಯ್ದ ಭಾಗವಾಗಿರುತ್ತವೆ.